# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೩೮ ಫೆಬ್ರವರಿ ೨೦೨೨



KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಈ ಸಂಚಿಕೆಯಲ್ಲಿ


ಸಂಪಾದಕೀಯ...೩

ಅಧ್ಯಕ್ಷರ ನುಡಿ... ೪

ಜ್ಞಾನ ಜ್ಯೋತಿ... ೫

ಯೋಗ ಸೂತ್ರ...೬

ಬೃಂದಾವನದಲಿ... ೧೦

ಈ ಹೊತ್ತಿನ ತತ್ತ್ವ..೧೩

ಜೀವದುಸಿರು ಹುಸಿ ಗಾಳಿಯಾದಾಗ...೧೫

ಬೃಂಕ್ಷ್ಯೆ ಸರಣಿ ...೧೭

ಕಥಾ ಚಿಂತನ ಮಾಲಿಕೆ.-7.. ೨೧

ಪರದೆಯ ಗೀಳಿನಿಂದ...೨೨

ಕಗ್ಗದ ವಿಚಾರ...೨೩

ರಾಷ್ಟ್ರೀಯ ಯುವ ದಿನೋತ್ಸವ...೨೬

ವೃದ್ಧಾಪ್ಯದಲ್ಲಿ...೨೮

ಕವಿ ಕಾವ್ಯ ವಿಚಾರ...೩೦

ಸ್ವರ್ಗಕ್ಕೆ ಮೂರೇ ಗೇಣು...೩೩

ಜವಾಬ್ದಾರಿ...೩೪

ಬಾನಿಗೊಂದು ಎಲ್ಲೆ ಎಲ್ಲಿದೆ?...೩೫

ಪ್ರಕಟಣೆ...೩೬

ಭಾವ ಲಹರಿ...೩೭

ರುಚಿ-ಅಭಿರುಚಿ... ೪೦

ಪುಟಾಣಿ-ಪ್ರಪಂಚ... ೪೨

ಕ್ಯಾಮೆರಾ ಕಣ್ಣು...೪೯


*ಮುಖಪುಟ ಚಿತ್ರ: ಭಾರತದ ೬೨ನೇ ಗಣರಾಜ್ಯೋತ್ಸವ (ಅಂತರ್ಜಾಲ)*

*ಮೇಲಿನ ಪುಟಗಳಿಗೆ ನೇರವಾಗಿ ಹೋಗಲು, ಆಯಾ ಶೀರ್ಷಿಕೆಗಳನ್ನು ಕ್ಲಿಕ್ ಮಾಡಿ!*


ಹಿಂದಿನ ಸಂಚಿಕೆಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ

***ಆತ್ಮೀಯ ಬೃಂದಾವನ ವಾಣಿ ಓದುಗರೆಲ್ಲರಿಗೂ ನಮಸ್ಕಾರ..***

ಮಾಘ ಮಾಸದ ಕೊರೆಯುವ ಚಳಿಯೊಂದಿಗೆ ನೂತನ ವರುಷವನ್ನು ಹೊಸ ಆಶಯ ಮತ್ತು ಹೊಸ ಹುಮ್ಮಸ್ಸಿನೊಂದಿಗೆ ಸ್ವಾಗತಿಸಿದ್ದೇವೆ. ಹೊಸ ಫಸಲನ್ನು ಬೆಳೆದು, ಭೂತಾಯಿಯ ಕೃಪೆಯನ್ನು ನೆನೆದು ಸಂಕ್ರಾಂತಿಯ ಆಚರಿಸಿ, ಭಾರತದ ೭೩ನೇ ಗಣರಾಜ್ಯೋತ್ಸವವನ್ನು ಸಂಭ್ರಮಿಸಿ ಈ ವರುಷವನ್ನು ಸಕಾರಾತ್ಮಕ ಭಾವದೊಂದಿಗೆ ಆರಂಭಿಸಿದ್ದೇವೆ.

ಕಳೆದೆರಡು ವರುಷಗಳಿಂದ ಮನುಕುಲವನ್ನೇ ಕಾಡುತ್ತಿದ್ದ "ಕೊರೋನಾ" ಎಂಬ ಮಹಾಮಾರಿಯ ಬಂಧನದಿಂದ ಮುಕ್ತವಾಗುವ ಕಾಲ ಸನ್ನಿಹಿತವಾಗಿದೆ ಎಂಬ ಆಸೆ, ವಿಶ್ವಾಸ ಬಾಳಿಗೆ ಹೊಸ ಚೈತನ್ಯವನ್ನು ಮೂಡಿಸುತ್ತಿದೆ.

ಪ್ರಗತಿ ತಂಡದ ಸಾಹಿತ್ಯ ಬೃಂದಾವನದಾಶ್ರಯದಲ್ಲಿ, ನಮ್ಮೀ ತಂಡದ ನೇತೃತ್ವದ ಬೃಂದಾವನ ವಾಣಿಯು ಒಂದು ವರ್ಷದ ಸಾಹಿತ್ಯ ಕೃಷಿಯನ್ನು ಪೂರೈಸಿದೆ ಎಂದು ಹೇಳಲು ಸಂತೋಷವಾಗುತ್ತಿದೆ.

ಕನ್ನಡಾಂಬೆಯ ಸೇವೆಯನ್ನೇ ಧ್ಯೇಯವಾಗಿಸಿಕೊಂಡು, ಪುಟ್ಟ-ಪುಟ್ಟ ಹೆಜ್ಜೆಗಳನ್ನಿಡುತ್ತಲೇ ನಮ್ಮ "ಬೃಂದಾವನ ವಾಣಿ" ಇಂದು ೩೮ ಸಂಚಿಕೆಗಳನ್ನು ಬಿತ್ತರಿಸಿ ಒಂದು ಉತ್ಕೃಷ್ಟ ಗುಣಮಟ್ಟದ ದ್ವೈಮಾಸಿಕ ಪತ್ರಿಕೆಯಾಗಿ ತಮ್ಮೆಲ್ಲರ ಸಹಕಾರದೊಂದಿಗೆ ಬೆಳೆದು ನಿಂತಿದೆ. ಹೀಗೆಯೇ ಮುಂದಿನ ದಿನಗಳಲ್ಲಿಯೂ ತಮ್ಮ ಲೇಖನ, ಕಥೆ, ಕವನಗಳನ್ನು ವಾಣಿಯೊಂದಿಗೆ ಹಂಚಿಕೊಂಡು, ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸಲು ಕೈಜೋಡಿಸಬೇಕಾಗಿ ಕಳಕಳಿಯ ವಿನಂತಿ.

ಭಾರತದ ಸಂಗೀತ ಸಾಮ್ರಾಜ್ಯದ ಅನಭಿಶಕ್ತ ರಾಣಿಯಾಗಿ ಮೆರೆದ, ಭೌತಿಕವಾಗಿ ನಮ್ಮನ್ನಗಲಿದ ಗಾನಕೋಗಿಲೆ, ಭಾರತರತ್ನ ಪುರಸ್ಕೃತೆ ಲತಾ ಮಂಗೇಶ್ಕರ್ ರವರಿಗೂ, ಸಂಗೀತ ನಿರ್ದೇಶಕ ಬಪ್ಪಿ ಲಹರಿಯವರಿಗೂ ಅಂತೆಯೇ ನಮ್ಮ ಕರ್ನಾಟಕದ ಹಿರಿಯ ಕವಿಗಳಲ್ಲಿ ಒಬ್ಬರಾದ "ಚೆಂಬೆಳಕಿನ ಕವಿ" ಎಂದೇ ಖ್ಯಾತಿ ಪಡೆದಿರುವ ಶ್ರೀಯುತ ಚೆನ್ನವೀರ ಕಣವಿ ಅವರ ಆತ್ಮಕ್ಕೂ ಬೃಂದಾವನ ವಾಣಿ ತಂಡದ ವತಿಯಿಂದ ಭಾವಪೂರ್ಣ ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಪ್ರಸ್ತುತ ಈ ಸಂಚಿಕೆ, ಎಂದಿನಂತೆಯೇ ಅಪೂರ್ವ ವಿನ್ಯಾಸದೊಂದಿಗೆ, ಉತ್ತಮ ಲೇಖನಗಳಿಂದ ವರ್ಣರಂಜಿತವಾಗಿ ಮೂಡಿಬಂದಿದೆ.. ಓದಿ ತಮ್ಮ ಅಭಿಪ್ರಾಯ ನಮಗೆ ತಿಳಿಸಲು ಮರೆಯದಿರಿ

*ನಿಮ್ಮ,*
***ಬೃಂದಾವನ ವಾಣಿ ಸಂಪಾದಕ ತಂಡ***

**ಸಂಪಾದಕ ಮಂಡಳಿ:**

**ಶ್ರೀವಿದ್ಯಾ ಪ್ರಶಾಂತ್, ಲಕ್ಷ್ಮಿ ಕೊಲಾಲ್, ಜ್ಯೋತಿ ಚಂದ್ರ, ಸತ್ಯ, ನರಸಿಂಹ ಮೂರ್ತಿ, ವಿದ್ಯಾ ಮೂರ್ತಿ, ಶೈಲಾ ಪಾಟಂಕರ್, ಪ್ರಶಾಂತ್ ಶ್ರೀನಿವಾಸ್**








# ಅಧ್ಯಕ್ಷರ ನುಡಿ



**ಆತ್ಮೀಯ ಸ್ನೇಹಿತರೇ,**

ಎಲ್ಲರಿಗೂ ನಮಸ್ಕಾರ! 2022ರ ಹೊಸ ವರ್ಷಕ್ಕೆ ನಾವು ಕಾಲಿಟ್ಟು, ಈಗಾಗಲೇ ಒಂದು ತಿಂಗಳಿಗಿಂತ ಹೆಚ್ಚು ಸಮಯವನ್ನು ಕಳೆದಿದ್ದೇವೆ ಎಂದು ನಂಬಲು ಅಸಾಧ್ಯವಲ್ಲವೇ?.. ಸಮಯ ಯಾವುದಕ್ಕೂ ಕಾಯುವುದಿಲ್ಲ ಎಂಬುದು ಅದೆಷ್ಟು ಸೂಕ್ತವಾದ ಮಾತು ಎನಿಸುತ್ತದೆ! ಮುಂಬರುವ ವಾರಗಳ ಹವಾಮಾನದ ಮುನ್ಸೂಚನೆಯನ್ನು ಗಮನಿಸಿದಾಗ ವಸಂತನ ಆಗಮನ, ನಿರೀಕ್ಷೆಗಿಂತ ಶೀಘ್ರದಲ್ಲೇ ಆಗುವಂತೆ ಕಾಣುತ್ತಿದೆ. ಈ ಬೆಚ್ಚನೆಯ ದಿನಗಳ ಲಾಭವನ್ನು ಎಲ್ಲರೂ ಪಡೆದುಕೊಳ್ಳುವಿರೆಂದು ನಾನು ನಂಬಿರುತ್ತೇನೆ.

ಕಳೆದ ವರ್ಷವು ನಮಗೆ ಅನೇಕ ಸಿಹಿ-ಕಹಿ ನೆನಪುಗಳನ್ನು ಬಿಟ್ಟು ಹೋಗಿದೆ. ಮುಂಬರುವ ವರ್ಷದಲ್ಲಿ ಸಾಂಕ್ರಾಮಿಕ ರೋಗವು (pandemic) ಸ್ಥಳೀಯವಾಗಿ (endemic) ಬದಲಾಗುವ ಲಕ್ಷಣಗಳು ಕಾಣಬರುತ್ತಿವೆ. COVIDನ ರೂಪಾಂತರಗಳು ವಿಶ್ವದಾದ್ಯಂತ ಅನೇಕ ಹಾನಿಯನ್ನುಂಟು ಮಾಡಿದ್ದರೂ, ನಮ್ಮ ಆರೋಗ್ಯ ವ್ಯವಸ್ಥೆ ಮತ್ತು ಆರೋಗ್ಯ ಕಾರ್ಯಕರ್ತರ ಅವಿರತ ಸೇವೆಗಳನ್ನು ನಾವು ಮರೆಯುವಂತಿಲ್ಲ. ಮುಂಚೂಣಿಯಲ್ಲಿ ನಿಂತು ಕೆಲಸ ಮಾಡುತ್ತಿರುವ ಎಲ್ಲರಿಗೂ ನನ್ನ ಆಳವಾದ ಕೃತಜ್ಞತೆಗಳು.

ಮಕ್ಕಳೇ ನಮ್ಮ ಸಮಾಜದ ಭವಿಷ್ಯ. ಅವರಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಭದ್ರವಾದ ಅಡಿಪಾಯವನ್ನು ನೀಡುವುದು ನಮ್ಮ ಜವಾಬ್ದಾರಿ. ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಕೋವಿಡ್ ಪರಿಸ್ಥಿತಿಯನ್ನು ಲೆಕ್ಕಿಸದೇ, ಶಾಲೆಗಳಲ್ಲಿ ಹಾಜರಿದ್ದುದಕ್ಕಾಗಿ ಎಲ್ಲಾ ಶಿಕ್ಷಕ ಸದಸ್ಯರಿಗೆ ನನ್ನ ವಂದನೆಗಳು. ಮುಂಬರುವ ದಿನಗಳಲ್ಲಿಯೂ ಮಕ್ಕಳು computer ಮತ್ತು TV ಮುಂದೆ ಹೆಚ್ಚು ಸಮಯವನ್ನು ವ್ಯಯಿಸದೆ, ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪೋಷಕರು ಪ್ರೋತ್ಸಾಹಿಸುತ್ತೀರೆಂದು ಆಶಿಸುತ್ತೇನೆ.

ನಮ್ಮ ತಾಯ್ನಾಡಿನಲ್ಲಿ, ಧಾರ್ಮಿಕ ನಂಬಿಕೆಗಳು ಶಿಕ್ಷಣ ವ್ಯವಸ್ಥೆಗೆ ಅಡ್ಡಿಪಡಿಸುವ ಮೂಲಕ ಶಾಲಾ-ಕಾಲೇಜುಗಳು ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಿರುವುದು ನೋವಿನ ವಿಷಯ. ಮಕ್ಕಳು ತಮ್ಮ ಅಂತಿಮ ಪರೀಕ್ಷೆಗಳನ್ನು ಮುಗಿಸಿ ತಮ್ಮ ಕನಸುಗಳು ಮತ್ತು ಗುರಿಗಳೊಂದಿಗೆ ಮುನ್ನಡೆಯುವ ಸಮಯ ಇದು. ಶೀಘ್ರದಲ್ಲೇ ಈ ಸಮಸ್ಯೆ ಬಗೆ ಹರಿದು, ಪರಿಸ್ಥಿತಿ ಸುಧಾರಿಸಲಿ ಎಂದು ನಾವೆಲ್ಲರೂ ಪ್ರಾರ್ಥಿಸೋಣ.

ನಮ್ಮ ಬೃಂದಾವನದ ಯುವ ಸದಸ್ಯರು, ತಮ್ಮನ್ನು ಸಂಸ್ಥೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಂಡಿರುವುದನ್ನು ನೋಡಲು ಬಹಳ ಸಂತೋಷವಾಗುತ್ತದೆ. ಈಗ ನಮ್ಮ ಬೃಂದಾವನ, ಯುವ ಸದಸ್ಯರ ಪರಿಶ್ರಮ ಮತ್ತು ಸೇವೆಯನ್ನು ಗುರುತಿಸಲು ಅವರಿಗೆ ಪ್ರತಿಷ್ಠಿತ "ಅಧ್ಯಕ್ಷೀಯ ಸ್ವಯಂಸೇವಕ ಸೇವಾ ಪ್ರಶಸ್ತಿ"ಯನ್ನು (Presidential Volunteer Service Award) ನೀಡಲು ಸಾಮರ್ಥ್ಯವಿರುವ ಒಂದು ಅಂಗೀಕೃತ ಸಂಸ್ಥೆಯಾಗಿದೆ ಎಂದು ತಿಳಿಸಲು ಹರ್ಷವಾಗುತ್ತದೆ. ಪ್ರಗತಿ ತಂಡದ ಈ ಅದ್ಭುತ ಸಾಧನೆ, ಬೃಂದಾವನಕ್ಕೆ ನೀಡುತ್ತಿರುವ ಅತ್ಯಮೂಲ್ಯ ಕೊಡುಗೆ ಎನ್ನಲು ಹೆಮ್ಮೆಯಾಗುತ್ತದೆ. ಇಂತಹ ಪ್ರಶಸ್ತಿಗಳು ನಮ್ಮ ಯುವ ಸದಸ್ಯರನ್ನು ಹುರಿದುಂಬಿಸಿ, ಸಮುದಾಯಕ್ಕೆ ಇನ್ನೂ ಹೆಚ್ಚು ಸೇವೆ ಸಲ್ಲಿಸಲು ಪ್ರೇರಣೆಯಾಗಿರಲಿ ಎಂದು ಹಾರೈಸುತ್ತೇವೆ.

ನಿಮ್ಮ ಉದಾರ ದೇಣಿಗೆಗಳಿಂದ ಗಿವಿಂಗ್ ಟ್ಯೂಸ್ಡೇ ಫೇಸ್ ಬುಕ್ (Giving Tuesday, Facebook) ನಿಧಿಸಂಗ್ರಹವು ಅತ್ಯಂತ ಯಶಸ್ವಿಯಾಯಿತೆನ್ನಲು ಹರ್ಷವಾಗುತ್ತದೆ. ದೇಣಿಗೆ ನೀಡಿದ ನಮ್ಮ ಸದಸ್ಯರಿಗೆ ಈ ಮೂಲಕ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮುಂಬರುವ ಪೀಳಿಗೆಗಾಗಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಿ, ನಮ್ಮ ಈ ಬೃಂದಾವನವನ್ನು ಸುಭದ್ರ, ಸ್ವಾವಲಂಬಿ ಸಂಸ್ಥೆಯನ್ನಾಗಿ ಬೆಳೆಸೋಣ.

ಮುಂಬರುವ ತಿಂಗಳುಗಳಲ್ಲಿ ಪ್ರಗತಿ ತಂಡವು ಅನೇಕ ನವೀನ ವಿಚಾರಗಳ ಜೊತೆಗೆ, ಅತ್ಯಾಕರ್ಷಕ ಒಳ/ಹೊರಾಂಗಣ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದೆ. ಶೀಘ್ರದಲ್ಲೇ ಈ ಕಾರ್ಯಕ್ರಮಗಳ ಹೆಚ್ಚಿನ ಮಾಹಿತಿಯನ್ನು ನಮ್ಮ ಸದಸ್ಯರೊಂದಿಗೆ ಹಂಚಿಕೊಳ್ಳಲಿದ್ದೇವೆ.

ಅತಿ ಶೀಘ್ರದಲ್ಲೇ ನಿಮ್ಮೆಲ್ಲರನ್ನೂ ಭೇಟಿಯಾಗಲು ಎದುರು ನೋಡುತ್ತಿರುವ.

**ನಿಮ್ಮ,**
**ಪದ್ಮಿನಿ ಹೇಮಂತ್**
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ



# ನಾನಲ್ಲ, ನನ್ನದಲ್ಲ!

**ಶ್ರೀ ಯೋಗೀಂದ್ರ ಭಟ್ ಉಳಿ.** *ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.*

**ನಾ**ಳೆ ಹೀಗೆಯೇ ಆಗುತ್ತದೆ ಎಂದು ಅಧಿಕೃತವಾಗಿ ಹೇಳುವ ಧೈರ್ಯ ನಮ್ಮಲ್ಲಿ ಯಾರಿಗಿದೆ? ಇಲ್ಲಿ ಎಲ್ಲರೂ ಕುರುಡರೇ. ಗಾಳಿಯಲ್ಲಿ ಗೋಪುರ ಕಟ್ಟುವವರೇ. ಒಳ್ಳೆಯದಾಗುತ್ತದೆ, ಯಶಸ್ಸು ಸಿಗುತ್ತದೆ ಎಂಬ ನಂಬಿಕೆಯಷ್ಟೇ ನಮ್ಮ ಬದುಕಿನ ಬಂಡವಾಳ.

ಹೊಸ ಹೊಸ ವಿನ್ಯಾಸದ ಕಾರುಗಳು ಮಾರುಕಟ್ಟೆಗೆ ಬರುತ್ತಲೇ ಇರುತ್ತವೆ. ಪ್ರತಿವರ್ಷವೂ ನೂರಾರು ನೂತನ ಚಲನ ಚಿತ್ರಗಳು ತೆರೆಕಾಣುತ್ತವೆ. ಅದರ ಹಿನ್ನೆಲೆಯಲ್ಲಿ ಅದೆಷ್ಟೋ ಮಂದಿ ಹೂಡಿಕೆದಾರರು ಕನಸು ಕಟ್ಟಿಕೊಂಡಿರುತ್ತಾರೆ. ಎಲ್ಲ ನಿರ್ಮಾಪಕರೂ ವಿಜಯದ ನಿರೀಕ್ಷೆಯಲ್ಲಿರುತ್ತಾರೆ. ಕಷ್ಟ ಪಟ್ಟು ದುಡಿಯುತ್ತಾರೆ. ಎಲ್ಲರೂ ಗೆಲುವನ್ನು ಬಯಸುವವರೇ. ಸೋಲು ಯಾರಿಗೆ ಬೇಕು? ಆದರೂ, ಅವುಗಳಲ್ಲಿ ಕೆಲವೊಂದು ಮಾತ್ರ ಸೂಪರ್ ಹಿಟ್ ಆಗಿ ಬಿಟ್ಟರೆ ಮತ್ತೆ ಹೆಚ್ಚಿನವು ಅರಳುತ್ತಲೇ ಮುದುಡಿಬಿಡುತ್ತವೆ!

ಯಾರಿಗೆ ಸೋಲು ಯಾರಿಗೆ ಗೆಲುವು ಎಂಬುದನ್ನು ಆರಂಭದಲ್ಲೇ ತಿಳಿಯಲು ಬರುವುದಿಲ್ಲ. ಪಂದ್ಯ ಮುಗಿದ ಬಳಿಕವಷ್ಟೇ ಫಲಿತಾಂಶ ಪ್ರಕಟವಾಗುವುದು. ತನ್ನ ಪ್ರಯತ್ನಕ್ಕೆ ಯಶಸ್ಸು ಸಿಗಬೇಕೆಂಬ ಆಸೆ, ಅಪೇಕ್ಷೆಯಂತೂ ಪ್ರತಿಯೊಬ್ಬನಿಗೂ ಇದ್ದೇ ಇರುತ್ತದೆ. ಆದರೆ ಗೆಲುವಿನ ಗುಟ್ಟನ್ನು ಸ್ಪಷ್ಟವಾಗಿ ಬಲ್ಲವನು ಈ ಜಗತ್ತಿನಲ್ಲಿ ಭಗವಂತನೊಬ್ಬನೇ! ಮಾಡುವ ಪ್ರಯತ್ನದಲ್ಲಿ ಮಾತ್ರ ನಮಗೆ ಅಧಿಕಾರ. ಅವನು ಫಲ ಕೊಟ್ಟರೆ ಉಂಟು! ಇಲ್ಲವಾದರೆ ಇಲ್ಲ! 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'

ಪ್ರಯತ್ನ ನಮ್ಮ ಕೈಯಲ್ಲಿರುತ್ತದೆ. ಫಲ ಅವನ ಇಚ್ಛೆ! ಜನ್ಮಾಷ್ಟಮಿಯ ಮೊಸರು ಕುಡಿಕೆಯಂತೆ! ಕಣ್ಣಿಗೆ ಬಟ್ಟೆಕೊಂಡು ಎಲ್ಲ ಕಡೆ ಸುಮ್ಮನೆ ಕೋಲನ್ನು ಬೀಸುತ್ತಿರಬೇಕು. ಅವನು ಇಚ್ಛಿಸಿದರೆ, ನಮಗೆ ಪಡೆಯುವ ಯೋಗವಿದ್ದರೆ ಯಾವುದೋ ಒಂದು ಹೊಡೆತ ಮೊಸರಿನ ಮಡಕೆಯನ್ನು ಒಡೆಯಬಹುದು! ಇಲ್ಲವಾದರೆ ಬೀಸಿ ಬೀಸಿ ಕೈಸೋತು ನಾವು ಕುಸಿಯುತ್ತೇವೆಯೇ ಹೊರತು ಮಡಕೆ ಹಾಗೆಯೇ ಉಳಿದುಬಿಡುತ್ತದೆ!

ನಮ್ಮ ಪ್ರಯತ್ನಗಳ ಪರಂಪರೆಯಲ್ಲಿ ಯಾವುದಾದರೊಂದು ಫಲ ಕೊಟ್ಟೇ ಕೊಡುತ್ತದೆ ಎಂಬ ನಂಬಿಕೆಯಂತೂ ನಮ್ಮೊಳಗೆ ಜೀವಂತ ಇರಬೇಕು. ಎಸೆವ ನೂರು ಕಲ್ಲುಗಳಲ್ಲಿ ಒಂದಾದರೂ ಮಾವಿನಕಾಯಿಯನ್ನು ಉದುರಿಸಬಹುದು ಎಂಬ ಭರವಸೆ ಬೇಕು ಅಷ್ಟೇ. ಕಣ್ಣೆದುರೇ ಹಾದು ಹೋಗುವ ಅಸಂಖ್ಯ ಸೂರ್ಯನ ಕಿರಣಗಳನ್ನು ನಾವು ಗಮನಿಸದೆ ಹೋಗಬಹುದು. ಆದರೆ ಅದೆಲ್ಲಿಂದಲೋ ಮೋಡದ ಮರೆಯಲ್ಲಿ ನುಸುಳಿ ಬರುವ ಕೆಲವು ಕಿರಣಗಳು ಕಾಮನಬಿಲ್ಲಿನ ಚಿತ್ತಾರವಾಗಿ ನಮ್ಮನ್ನು ಸೆಳೆಯುತ್ತವೆ. ಒಂದು ಜೋಳದ ತೆನೆಯಲ್ಲಿ ನೂರಾರು ಬೀಜಗಳಿರಬಹುದು. ಮುಂದೆ ಬದುಕಿ ಬೆಳೆದು ಅಂಥಹದ್ದೇ ತೆನೆಯನ್ನು ಕೊಡುವ ಯೋಗ ಯಾವ ಬೀಜಕ್ಕಿದೆ ಎಂದು ಬಲ್ಲವರಾರು?

ಏನಾದರೊಂದು ವಿಶೇಷ ಕೆಲಸವನ್ನು ಯಶಸ್ವಿಯಾಗಿ ಮಾಡಿ ಮುಗಿಸಿದಾಗ, ಸಾಧನೆಯ ಹಾದಿಯಲ್ಲಿ ಒಂದು ಹಂತದ ಮೈಲಿಗಲ್ಲನ್ನು ದಾಟಿದಾಗ ನಮಗೆ ಅತೀವ ಆನಂದವಾಗುವುದೇನೋ ಸಹಜ. ಆದರೆ ನಾವು ಯಾರೂ ಸಾಧಿಸದ್ದನ್ನು ಸಾಧಿಸಿಬಿಟ್ಟೆವು ಎಂದು ಸಂಭ್ರಮಿಸುವುದಕ್ಕಿಂತ ಮುಂಚೆ ಸ್ವಲ್ಪ ಯೋಚಿಸಬೇಕು. ಅಲ್ಲಿ ನಿಜವಾಗಿಯೂ ನಮ್ಮದೆನ್ನುವುದು ಏನಿದೆ? ಕಣ್ಣು ಮುಚ್ಚಿ ಹೊಡೆದ ಕಲ್ಲು ಗುರಿತಲುಪಿದ್ದು ನಮ್ಮ ಭಾಗ್ಯ! ಅಷ್ಟೇ ತಾನೇ? ಕಲ್ಲೂ ನಮ್ಮದಲ್ಲ, ಗುರಿಮುಟ್ಟಿಸಿದ್ದೂ ನಾವಲ್ಲ! ಯಾರದ್ದೋ ಲ್ಯಾಂಬೊರ್ಗಿನಿ ಕಾರು. ಡ್ರೈವ್ ಮಾಡಿ ಆನಂದಿಸಿದ್ದು ನಾವು. ಆ ಸಂತೋಷವನ್ನು ಅನುಭವಿಸಲು ಅನುವು ಮಾಡಿಕೊಟ್ಟವನಿಗೆ ನಮ್ಮ ಧನ್ಯತೆಯನ್ನು ಸಮರ್ಪಿಸಬೇಕು ತಾನೇ? ಯಾವುದೇ ಗೆಲುವಿನ ಸಂಭ್ರಮಾಚರಣೆಯ ಸರಿಯಾದ ಸ್ವರೂಪವೆಂದರೆ ಅದು ಭಗವದರ್ಪಣೆ! ನಾನಲ್ಲ, ನನ್ನದಲ್ಲ ಅದು ನಿನ್ನ ಕರುಣೆ ಎಂಬ ಧನ್ಯತೆಯ ಭಾವನೆ!

ಅದನ್ನು ಮರೆತು ಸುಮ್ಮನೆ ಸಂಭ್ರಮಾಚರಣೆಯಲ್ಲಿ ತೊಡಗಿದರೆ ನಾವು ಅಲ್ಲಿಯೇ ಕಳೆದುಹೋಗುವ ಅಪಾಯವಿದೆ. ನಾನೇ ಎಲ್ಲ, ನನ್ನಿಂದಲೇ ಎಲ್ಲ ಎನ್ನುವ ಅಹಂಕಾರ ಮುಂದಿನ ಅವಕಾಶಗಳಿಂದ ನಮ್ಮನ್ನು ವಂಚಿತರನ್ನಾಗಿಸಬಹುದು. ಬದುಕಿನಲ್ಲಿ ಬರುವ ಪ್ರತಿಯೊಂದು ಅವಕಾಶವೂ ಅಪೂರ್ವ. ಕ್ರಿಕೆಟ್ ಆಟದಲ್ಲಿ ಮತ್ತೆ ಮತ್ತೆ ಬಂದೆರಗುವ ಚೆಂಡಿನಂತೆ. ಒಂದು ಎಸೆತವನ್ನು ಚೆನ್ನಾಗಿ ಎದುರಿಸಿದೆವೆಂದು ಸಂಭ್ರಮಿಸುತ್ತಾ ಮೈಮರೆತರೆ ಮುಂದಿನ ಎಸೆತಕ್ಕೇ ಔಟ್ ಆಗಿಬಿಡುವ ಅಪಾಯವಿದೆ!

ಏನಾದರೊಂದು ಒಳ್ಳೆಯದನ್ನು ಸಾಧಿಸಿದ ತಕ್ಷಣ ಅದನ್ನು 'ಕೃಷ್ಣಾರ್ಪಣ' ಮಾಡಿ ಮರೆತು ಬಿಡುವ ಅಭ್ಯಾಸ ಮಾಡಿಕೊಳ್ಳಬೇಕು. ಮುಂದಿನ ಸತ್ಕರ್ಮದ ಸಾಧನೆಗೆ 'ಸಂಕಲ್ಪ' ಮಾಡಿ ಸಸನ್ನದ್ಧರಾಗಿರಬೇಕು. ನಮ್ಮ ಮಕ್ಕಳಿಗೂ ಇದನ್ನು ಚೆನ್ನಾಗಿ ಬೋಧಿಸಬೇಕು.

ಮಾಡಿದ ಒಂದು ಸಾಧನೆಯನ್ನು ಎಲ್ಲರ ಮುಂದೆ ಮತ್ತೆ ಮತ್ತೆ ಹೇಳುತ್ತಾ, ಹೊಗಳುತ್ತಾ ಬಂದರೆ ಮಕ್ಕಳ ತಲೆಯಲ್ಲಿ ಅಹಂಭಾವದ ಕೋಡು ಬಂದು ಬಿಡುತ್ತದೆ! ಮತ್ತೆ ಸಾಧನೆ ಮುಂದುವರಿಯುವುದಿಲ್ಲ. ಕಬ್ಬಿನ ಗಿಡದಲ್ಲಿ ಹೂವು ಅರಳಿದರೆ ಮುಂದೆ ಅದು ಬೆಳೆಯುವುದಿಲ್ಲ. ಬಾಳೆಯ ಗಿಡ ಗೊನೆ ಮೂಡಿದ ಮೇಲೆ ಕೆಳಕ್ಕೆ ಬಾಗುವುದೇ ಹೊರತು ಮತ್ತೆ ಎತ್ತರಕ್ಕೇರುವುದಿಲ್ಲ.



# ಪತಞ್ಜಲಿ ಯೋಗ ಸೂತ್ರ:ಸಮಾಧಿ ಪಾದ ಸೂತ್ರ 12-14

ಅನನ್ತ ಅಮ್ಬುಗ

ॐ

**ಅಪ್ಪೊ ದೀಪೋ ಭವ - ನಿನಗೆ ನೀನೇ ಬೆಳಕಾಗು -ಭಗವನ್ ಬುದ್ಧ**

**ಯೋಗೇನ ಚಿತ್ತಸ್ಯ ಪದೇನ ವಚಾಮ್ ಮಲಮ್ ಶರೀರಸ್ಯ ಚ ವೈದ್ಯಕೇನ ಯೋಪಾಕರೋತ್ತಮ್ ಪ್ರವರಮ್ ಮುನೀನಾಮ್ ಪತಞ್ಜಲಿಂ ಪ್ರಾಞ್ಜಲಿರಾನತೋಸ್ಮಿ**

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತ: ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿ: ಅಸತ್ಯವಾದುದು ಉಳಿಯುವುದಿಲ್ಲ, ಸತ್ಯವಾದುದು ಆಳಿಯುವುದಿಲ್ಲವೆಮ್ಬ ತತ್ವವನ್ನೊ ತತ್ವದರ್ಶಿಗಳು ಸತ್ಯಾಸತ್ಯಗಳನ್ನು ನೋಡಿ ಅರಿತಿರುತ್ತಾರೆ. - ಭಗವಾನ್ ಕೃಷ್ಣ, ಭಗವದ್ಗೀತೆ ಸಾಙ್ಖ್ಯಯೋಗ ಶ್ಲೋಕ ೧೬**

**ಸಾರಞ್ಚ ಸಾರತೋ ಞತ್ವಾ ಅಸಾರಞ್ಚ ಅಸಾರತೋ ತೇಸಾರಂ ಅಧಿಗಚ್ಛನ್ತಿ ಸಮ್ಮಾಸಙ್ಕಪ್ಪಗೋಚರಾ -ಯಾರು ಸತ್ಯವಾದುದನ್ನು ಸತ್ಯವೆನ್ದು ಅಸತ್ಯವಾದುದನ್ನು ಅಸತ್ಯವೆನ್ದು ಅರಿಯುತ್ತಾರೋ ಅವರು ಸತ್ಯದಕಡೆ ಹೊಗಿ ಅದನ್ನು ಕಣ್ಡುಕೊಣ್ಡು ಸತ್ಯವನ್ನು ಸೇರುತ್ತಾರೆ - ಭಗವಾನ್ ಬುದ್ಧ ಧಮ್ಮಪದ ಸೂತ್ರ ೧೨**

## ಮುನ್ನುಡಿ

ಈವರೆಗೆ, ಯೋಗವೆನ್ದರೇನು, ಯೋಗದ ಗುರಿಯೆನು, ವೃತ್ತಿಗಳೆನ್ದರೇನು, ಅವುಗಳನ್ನು ಹೇಗೆ ಐದು ಅನೀಕಗಳಲ್ಲಿ(groups)ವಿಙ್ಗಡಿಸಬುಹುದೆನ್ದು ನೋಡಿದೆವು. ಈ ಸಞ್ಚಿಕೆಯಲ್ಲಿ ಯೋಗ ಸೂತ್ರದ ಮುನ್ದಿನ ಮೂರು ಸೂತ್ರಗಳನ್ನು ತೆಗೆದುಕೊಣ್ಡು, ವೃತ್ತಿಗಳನ್ನು ನಿರೋಧಿಸುವ ಕ್ರಮದ ಪ್ರಾರಮ್ಭಿಕ ಕೆಲವು ಓಘಗಳನ್ನು ನೋಡೋಣ.

ಮನಸ್ಸು ಸಂಶೀಲನದ ಒನ್ದು ಸಂನೀಕರ್ಶ (mind is a repository of habitual performances). ಇದಕಾರಣ, ವೃತ್ತಿಗಳಲ್ಲಿ ಆಸಿದ್ಧವಾಗಿರುವುದೇ (imprisoned) ಅದರ ನೈಜ ಸ್ವರೂಪ. ಹೀಗಿದ್ದರೆ, ವೃತ್ತಿಗಳ ನಿರೋಧ ಹೇಗೆ ಸಾಧ್ಯ? ಭಾಷ್ಯಕಾರರಾದ ವ್ಯಾಸರು ಬಹಳ ಏಕಧುರವಾಗಿ (apt) ಮನಸ್ಸನ್ನು ಒನ್ದು ನದಿಗೆ ಹೋಲಿಸಿ ಚಿತ್ತ ನದೀ ನಾಮ ಉಭಯತೋ ವಾಹಿನೀ ಎನ್ನುತ್ತಾ ಚಿತ್ತ/ಮನಸ್ಸೆಮ್ಬ ನದಿಗೆ ಎರೆಡು ಪಥಗಳಿದೆ ಎನ್ದು ವರ್ಣಿಸುತ್ತಾರೆ. ಈ ಸಞ್ಚಿಕೆಯಲ್ಲಿ ಮುನ್ದಿನ ಮೂರು ಸೂತ್ರಗಳನ್ನು ನೋಡಿ , ನಿರೋಧಿಸುವ ಪ್ರಕ್ರಿಯೆಯನ್ನು ತಿಳಿದುಕೊಳ್ಳುತ್ತ ವ್ಯಾಸರು, ಭಗವಾನ್ ಕೃಷ್ಣನು ಮತ್ತು ಭಗವಾನ್ ಬುದ್ಧನ್ನು ವೃತ್ತಿಗಳನ್ನು ನಿರೋಧಿಸುವ ಕ್ರಮವನ್ನು ಹೇಗೆ ಏಕ ಕಣ್ಠದಲ್ಲಿ ಒನ್ದೇ ರೀತಿಯಲ್ಲಿ ಹೇಳುತ್ತಾರೆ ಎಮ್ಬುದನ್ನು ನೋಡೋಣ

## ಅಥ ಸಮಾಧಿ ಪಾದ:

ಸೂತ್ರ ೧೨: ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧ:
ಸೂತ್ರ ೧೩: ತತ್ರಸ್ಥಿತೌ ಯತ್ನೋಽಭ್ಯಾಸಹ
ಸೂತ್ರ ೧೪: ಸತುಧೀರ್ಘಕಾಲ ನೈರನ್ತರ್ಯ ಸತ್ಕಾರಾಸೇವಿತೋ ದೃಢಭೂಮಿಹಿ

## ಅರ್ಥಗತಿ

**ಸೂತ್ರ ೧೨:** ಅಭ್ಯಾಸ: ಅಭಿ (ಗಳಿಸುವುದು, ಯಾವುದಾದರೂ ಒನ್ದು ವಿಷಯವನ್ನು ನಿರ್ಜಯಗೊಳಿಸಿಕೊಳ್ಳುವುದು-mastering something) + ಅಸ್ + ಅ = ಅಸ ( ಹಿಡಿದುಕೊಳ್ಳುವುದು - holding on to) ಅಭ್ಯಾಸ = ವಿಷಯವನ್ನು ನಿರ್ಜಯಗಳಿಸಿಕೊಳ್ಳುವುದು, ಮತ್ತು ಅದನ್ನು , ಆ ವಿಷಯವನ್ನು ( ನಿರ್ಜಯಗಳಿಸಿಕೊಣ್ಡ) ನಮ್ಮಲ್ಲಿಯೇ ಹಿಡಿದಿಟ್ಟುಕೊಳ್ಳುವುದು-making efforts to mastering something and holding on to it, implying repeated and continuous efforts) ವೈರಾಗ್ಯ : ವಿ + ರಾಗ ( ರಾಗ ಇಲ್ಲದಿರಿವುದು - absence of attachment - to the results of the efforts). ತನ್/ತತ್: ಅವುಗಳು, ಅನ್ದರೆ ವೃತ್ತಿಗಳ ನಿರೋಧಹ: ನಿರೃತಿಗೋಳಿಸುವುದು ( dissolution) ಫಲದ ಉನ್ಮಾದವಿಲ್ಲದಿರುವ ನಿರನ್ತರ ಅಭ್ಯಾಸದಿನ್ದ ಮನಸ್ಸಿವ ವೃತ್ತಿಗಳನ್ನು ನಿರೃತಿಗೋಳಿಸಬಹುದು

**ಸೂತ್ರ ೧೩:** ತತ್ರ: ಅಲ್ಲಿ. ಸ್ಥಿತೌ: ನೆಲೆಸುವುದು, ಒನ್ದು ಜಾಗದಲ್ಲಿ, ಉಪದ್ರಿಕ್ತಗೊಳ್ಳುವುದು. ಯತ್ನ: (ಯತ್ ಪದದಿನ್ದ ಉಪ್ಪತ್ತಿಯಾಗಿದೆ, ಯತ್ ಅನ್ದರೆ ಚಲಿಸುವುದು, ಹೋಗುವುದು ಎಮ್ಬ ಅರ್ಥ). ಅಭ್ಯಾಸ: ಮೇಲೆ ಹೇಳಿದ ಹಾಗೆ, ಯಾವುದಾದರೂ ಒನ್ದು ವಿಷಯವನ್ನು ನಿರ್ಜಯಗೊಳಿಸಿಕೊಳ್ಳುವುದು, ಅದನ್ನು ಹಿಡಿದಿಟ್ಟುಕೊಳ್ಳುವುದು

**ಸೂತ್ರ ೧೪:** ತು: ಆದರೆ. ಸ: ಅದು - ಮೇಲೆ ಹೇಳಿದ ಅಭ್ಯಾಸ ಮತ್ತು ವೈರಾಗ್ಯಗಳಲ್ಲಿ ನಮ್ಮ ಮನಸ್ಸನ್ನು ನಿಷೀದಗೊಳಿಸಿಕೊಳ್ಳಲು ಮಾಡುವ ಯತ್ನವು, ಯತ್ನದ ಅಭ್ಯಾಸವು. ದೃಢಭೂಮಿಹಿ: ಅಟಲವಾಗಿ ನಿಶ್ಚಲವಾಗಿ ನಮ್ಮಲ್ಲಿ ನೆಲೆಗೊಳ್ಳಬೇಕಾದರೆ (get internalized and become part of us). ಆ ಯತ್ನವು, ದೀರ್ಘಕಾಲ ನೈರನ್ತರ್ಯ:- ಬಹಳ ಕಾಲ ಮತ್ತು ಅಧ್ವರವಾಗಿ, ಎಡೆಬಿಡದೆ, ಸತ್ಕಾರ:- ಸತ್ + ಕಾರ: ಇದನ್ನು ಒಳ್ಳೆಯ ಕೆಲಸವೆನ್ದು ಮತ್ತು

ಸತ್ಯವಾದ ಕೆಲಸವೆನ್ನೂ ( ಸತ್ಯದ ಅರ್ಥವನ್ನು ಮುನ್ದೆ ನೋಡೋಣ) ಮಾಡಿ. ಆಸೇವಿತೋಃ- ಆ + ಸೇವಿತಃ- ಮಾಡಿದ ಯತ್ನವು, ಅಪಾರ್ಯುವಾಗಿ, ಪೂರ್ಣವಾಗಿ ಮಾಡಬೇಕು

## ***ವಿವೃತ್ತಿ***

***ಸೂತ್ರ ೧೨: ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ***

ಅಭ್ಯಾಸ ಮತ್ತು ವೈರಾಗ್ಯದಿನ್ದ ಚಿತ್ತವೃತ್ತಿಗಳನ್ನು ನಿರೋಧಿಸಬಹು ಎನ್ದು ಈ ಸೂತ್ರವು ಬಾಲಿಶವಾಗಿ ಹೇಳುತ್ತಿದೆಯಾದರೂ, ನಮ್ಮ ಸಾಮಾನ್ಯ ಐಹಿಕ ಅರ್ಥಕರಣದಲ್ಲಿ ನಾವು ಅಭ್ಯಾಸ ಮತ್ತು ವೈರಾಗ್ಯ ಶಬ್ದಗಳನ್ನು ಅಪಷ್ಠು (opposite) ಶಬ್ದಗಳಾಗಿ ನೋಡುವುದರಿನ್ದ, ಹೇಗೆ ಅಭ್ಯಾಸ ಮತ್ತು ವೈರಾಗ್ಯಗಳೆಮ್ಬ ಯಮಕ(twin) ವಿಚಾರಗಳ ಸಹಾಯದಿನ್ದ ವೃತ್ತಿಗಳನ್ನು ನಿರೋಧಿಸಬಹುದೆನ್ದು ನೋಡುವುದು ಮುಖ್ಯವಾಗುತ್ತದೆ - ಪ್ರಭೃತಿಯಲ್ಲಿ (beginning with) ಯೋಗಸೂತ್ರದ ಭಾಷ್ಯಕಾರರಾದ ವ್ಯಾಸರ ಮಾತುಗಳನ್ನು ನೋಡೋಣ; -

ಚಿತ್ತ ನದೀ ನಾಮ ಉಭಯತೋ ವಾಹಿನೀ ವಹತಿ ಕಲ್ಯಾಣಾಯ ವಹತಿ ಪಾಪಾಯ ಚ.
ಯಾ ತು ಕೈವಲ್ಯ ಪ್ರಾಗ್ಭಾರಾ ವಿವೇಕ ವಿಷಯ ನಿಮ್ನಾ ಸಾ ಕಲ್ಯಾಣ ವಹಾ,
ಸಂಸಾರ ಪ್ರಾಗ್ಭಾರಾ ಅವಿವೇಕ ವಿಷಯ ನಿಮ್ನಾ ಪಾಪ ವಹಾ,
ತತ್ರ ವೈರಾಗ್ಯೇನ ವಿಷಯ ಶ್ರೋತಹ ಖಿಲೀಕ್ರಿಯತೆ ವಿವೇಕ ದರ್ಶನ ಅಭ್ಯಾಸೇನ
ವಿವೇಕ ಶ್ರೋತಹ ಉದ್ಘಾಥ್ಯತ ಇತ್ಯ ಉಭಯ ಅಧೀನಸ್ಚಿತ್ತವೃತ್ತಿ ನಿರೋಧಹ

ಇಲ್ಲಿ ವ್ಯಾಸರು, ಮನಸ್ಸನ್ನು, ಮನಸ್ಸಿನ ವೃತ್ತಿಗಳನ್ನು, ಎರೆಡು ದಿಕ್ಕುಗಳಲ್ಲಿ ಹರಿಯುವ ನದಿಗೆ ಹೋಲಿಸಿ, ಚಿತ್ತ ನದೀ ನಾಮ ಉಭಯತೋ ವಾಹಿನೀ ಎನ್ದು ಹೇಳುತ್ತಾರೆ. ಓನ್ದು ದಿಕ್ಕು ಕಲ್ಯಾಣದ ಕಡೆಗೆ, ಶುಭದ ಕಡೆಗೆ, ತಿಷ್ಟದ (auspiciousness) ಮತ್ತೊನ್ದು ದಿಕ್ಕು ಪಾಪದ ಕಡೆಗೆ, ಉಪದ್ರುತದ (inauspiciousness) ಕಡೆಗೆ ಹೋಗುತ್ತದೆ ಎನ್ದು ವಹತಿ ಕಲ್ಯಾಣಾಯ ವಹತಿ ಪಾಪಾಯ ಚ ಎನ್ದು ಹೇಳುತ್ತಾರೆ. ನದಿಯ ಹರಿಯುವಿಕೆಯಲ್ಲಿ, ಮನಸ್ಸು ವಿವೇಕದಲ್ಲಿ ( ವಿವೇಕ =ವಿ + ವಿಕ್. ವಿಕ್ ಅನ್ದರೆ ಬೇರೆ ಬೇರೆ ಮಾಡುವುದು - (to separate) ವಿವೇಕವೆನ್ದರೆ, ಸರಿಯನ್ನು ತಪ್ಪಿನಿನ್ದ, ಸತ್ಯವನ್ನು ಅಸತ್ಯದಿನ್ದ ಬೇರೆ ಬೇರೆ ಮಾಡುವುದು - (to discriminate between the two) ನಿಮ್ನಗೊಣ್ಡರೆ (inclining towards), ಕೊನೆಯಲ್ಲಿ ಕೈವಲ್ಯದಲ್ಲಿ ಪ್ರಾಗ್ಭಾರಗೊಳ್ಳುತ್ತದೆ, ಅನ್ದರೆ, ಜಾರಿಕೊಣ್ಡು (ವೃತ್ತಿಗಳೆಲ್ಲವೂ) ಬನ್ದು ಕೈವಲ್ಯದಲ್ಲಿ ಒಟ್ಟಾಗಿ ಸೇರುತ್ತದೆ. . ಮತ್ತೊನ್ದು ದಿಕ್ಕಿನಲ್ಲಿ ಅನ್ದರೆ ಶಿವೇತರದ (inauspiciousness) ದಿಕ್ಕಿನಲ್ಲಿ ಮನಸ್ಸು ಅವಿವೇಕದಲ್ಲಿ ನಿಮ್ನಗೊಣ್ಡು ಕೊನೆಯಲ್ಲಿ ಸಂಸಾರದಲ್ಲಿ ಪ್ರಾಗ್ಭಾರಗೊಳ್ಳುಉತ್ತದೆ - ಎನ್ದು ಮನಸ್ಸಿನ ಎರೆಡು ದಿಕ್ಕುಗಳಲ್ಲಿ ಹರಿಯುವ ಸಮ್ಭವವನ್ನು ವಿವರಿಸುತ್ತಾರೆ.

ಹಾಗಾದರೆ, ಮನಸ್ಸೆಮ್ಬ ನದಿಯು, ಸಂಸಾರದ ದಿಕ್ಕಿನಲ್ಲಿ ಹೋಗದೇ ಕೈವಲ್ಯದ ದಿಕ್ಕಿನಲ್ಲಿ ಹೊಗುವನ್ತೆ ಹೇಗೆ ಮಾಡುವುದು? ಮಾಡುವ ಸಾಧನವೇನು? ವ್ಯಾಸರು ಇದಕ್ಕೆ, ತತ್ರ ಅನ್ದರೆ ಅಲ್ಲಿ, ಎಲ್ಲಿ? ಎಲ್ಲಿ, ವೈರಾಗ್ಯೇನ ವಿಷಯ ಶ್ರೋತಹ, ವೈರಾಗ್ಯದಿನ್ದ ವಿಷಯಗಳನ್ನು ಕೇಳುತ್ತೇವೆಯೋ, ನೋಡುತ್ತೇವೆಯೋ, ವಿವೇಕ ದರ್ಶನ ಅಭ್ಯಾಸೇನ ವಿವೇಕ ಶ್ರೋತಹ, ವಿವೇಕದ ಮೂಲಕ ವಿಷಯಗಳನ್ನು ಕೇಳುವ, ನೋಡುವ ಅಭ್ಯಾಸವನ್ನು ಮಾಡುತ್ತೇವೆಯೋ, ಅಲ್ಲಿ, ಅನ್ದರೆ, ಈ ಎರೆಡೂ (ಅಭ್ಯಾಸ ಮತ್ತು ವೈರಾಗ್ಯ) ಇದ್ದಾಗ, ಇತ್ಯ ಉಭಯ ಅಧೀನ, ಈ ಎರೆಡರ ಕಾರಣದಿನ್ದ, ಖಿಲೀಕ್ರಿಯತೆ , ಅನ್ದರೆ, ನದಿಯು ಶಿವೇತರದ ಕಡೆ ಹೋಗುವುದು ನಿನ್ತು, ಅನ್ದರೆ, ಆ ದಿಕ್ಕಿನಲ್ಲಿ ನದಿಯು ಖಿಲೀಕೃತಗೊಣ್ಡು, ಒಣಗಿ, ನದಿಯು ಕಲ್ಯಾಣದ ಕಡೆ ಹರಿಯಲು ದಾರಿಯು ಉದ್ಘಾಥ್ಯತಗೊಳ್ಳುತ್ತದೆ, ದಾರಿಯು ತೆರೆದುಕೊಳ್ಳುತ್ತದೆ - ಅನ್ದರೆ ವ್ಯಾಸರು ಇಲ್ಲಿ ಈ ಸೂತ್ರವನ್ನು, ನದಿಯ ಒನ್ದು ಉಪಮೆಯಿನ್ದ ಬಹಳ ಸ್ಪಷ್ಟವಾಗಿ ವಿವರಿಸಿದ್ದಾರೆ

ಭಗವದ್ಗೀತೆಯಲ್ಲಿ ಕೂಡಾ ಕೃಷ್ಣಾರ್ಜುನರ ಮಧ್ಯೆ ಇದೇ ರೀತಿಯ ಸಮ್ಭಾಷಣೆ ನಡೆಯುತ್ತದೆ - ಧ್ಯಾನ ಯೋಗದಲ್ಲಿ ಪರನ್ತಪನಾದ ಅರ್ಜುನನು :

ಯೋಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ ಏತಸ್ಯಾಹಂ ನ ಪಶ್ಯಾಮಿ ಚಞ್ಚಲತ್ವಾತ್ಸ್ಥಿತಿಂ ಸ್ಥಿರಾಂ
ಚಞ್ಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ

ಕೃಷ್ಣಾ! ನೀನು ಹೇಳಿದ ಈ ಯೋಗವಿದ್ಯೆಯು ನನ್ನ ಮನಸ್ಸಿನ ಚಞ್ಚಲತೆಯಿನ್ದ ನನ್ನ ಕೈಯಲ್ಲಿ ಸಾಧಿಸಲು ಆಗುವುದಿಲ್ಲವೆನ್ದು ತೋರುತ್ತದೆ. ನನ್ನ ಮನಸ್ಸು ಬಹಳ ಸದ್ದೃಢವಾಗಿದೆ (ಚಞ್ಚಲತೆಯಲ್ಲಿ) ಅದನ್ನು ಗಾಳಿಯನ್ನು ತಡೆಯುವುದಕ್ಕಿನ್ತಲೂ ಕಷ್ಟಕರವಾಗಿದೆ, ಎನ್ದಾಗ, ಯೋಗೀಶ್ವರ, ಯೋಗೇಶ್ವರನಾದ ಕೃಷ್ಣನು ವ್ಯಾಸರು ಹೇಳಿದ ಸತ್ಯವನ್ನೇ ಈರೀತಿ ಹೇಳುತ್ತಾನೆ

ಅಸಂಶಯಂ ಮಹಾಬಾಹೋ ಮನೋದುರ್ನಿಗ್ರಹಂ ಚಲಂ ಅಭ್ಯಾಸೇನ ತು ಕೌನ್ತೇಯ ವೈರಾಗ್ಯೇಣ ಚ ಗೃಹ್ಯತೇ - ಎನ್ದು ಹೌದು ಅರ್ಜುನ, ನೀನು ಹೇಳುವುದು ಬಹಳ ಸತ್ಯವಾದುದೇ, ಮನಸ್ಸನ್ನು ನಿಗ್ರಹಿಸುವುದು ಬಹಳ ಕಷ್ಟವಾದುದು, ಆದರೆ, ಅಭಾಸ ಮತ್ತು ವೈರಾಗ್ಯದಿನ್ದ ಅದನ್ನು ಹಿಡಿಯಬಹುದು, ನಿಗ್ರಹಿಸಬಹುದು ಎನ್ದು ಹೇಳುತ್ತನೆ

ಬುದ್ಧನಾಗಿ ಪುನರ್ಸಮ್ಭವಿಸಿದ ಭಗವಾನನು ಕೂಡಾ, ಇದೇ ಮಾತನ್ನು ತನ್ನ ಸತ್ತ ಭೋಜಾಙ್ಗದಲ್ಲಿ (ಸಪ್ತ ಭೋಜಾಙ್ಗ) - ಮೋಕ್ಷದ ಏಳು ಅಙ್ಗಗಳನ್ನು ಹೇಳುತ್ತಾ, ಅದರಲ್ಲಿ ಬರುವ ಮೊದಲನೆಯ ಅಙ್ಗವಾದ ಸತಿ ಸಮ್ಭೋಜಾಙ್ಗದಲ್ಲಿ ಈ ರೀತಿ ಆಮ್ರೇಡಿಸುತ್ತಾನೆ (reiterate) - ಸತಿಸಮ್ಭೋಜಾಙ್ಗಮ್ ಭವೇತಿ ವಿವೇಕ ನಿಸ್ಸಿತಮ್ ವಿರಾಗ ನಿಸ್ಸಿತಮ್ ನಿರೋಧ ನಿಸ್ಸಿತಮ್ ವಸ್ಸೋಗ್ಗ ಪರಿಣಾಮಿಮ್. ಬೋಧಿ ಸ್ಥಿತಿಯನ್ನು ತಲುಪಬೇಕಾದರೆ, ಮೋಕ್ಷವನ್ನು ಪಡೆಯಬೇಕಾರದರೆ, ನಿಶ್ಚಯವಾಗಿಯೂ (ನಿಸ್ಸಿತಮ್) ವಿವೇಕವು ಬೇಕು, ಖಣ್ಡಿತವಾಗಿಯೂ ವಿರಾಗವು (ವೈರಾಗ್ಯ) ಬೇಕು, ನಿಶ್ಚಯವಾಗಿಯೂ ನಿರೋಧವು ಬೇಕು ಮತ್ತು ಇವು ಮೂರೂ ಇದ್ದಾಗ ಅದರ ಪರಿಣಾಮದಿನ್ದ ವಸ್ಸಗ್ಗವು (ವಿಸರ್ಗ, ನಿರ್ವಾಣ) ಉಣ್ಟಾಗುತ್ತದೆ. ಹೀಗೆ ಪತಞ್ಜಲಿ ಮಹರ್ಶಿಗಳು ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ ಎನ್ದು, ಈ ಸೂತ್ರದ ಮೂಲಕ ನಿರನ್ತರ ಅಭ್ಯಾಸದಿನ್ದ ಮತ್ತು ವೈರಾಗ್ಯದಿನ್ದ ಚಿತ್ತವೃತ್ತಿಗಳನ್ನು ನಿರೋಧಿಸುವ ಮೊದಲ ಸೂತ್ರವನ್ನು ನಮಗೆ ಕೊಡುತ್ತಾರೆ; ಮತ್ತು ವ್ಯಾಸರು, ಇದನ್ನು ಭಾಷ್ಯಿಸಿ, ನದಿಯ ಉಪಮೆಯನ್ನು ಕೊಟ್ಟು, ವೃತ್ತಿಗಳನ್ನು ನಿರೋಧಿಸುವ ಮೊದಲ ಪ್ರಯತ್ನದಲ್ಲಿ, ನದಿಯು ಕೈವಲ್ಯದ ದಾರಿಯಲ್ಲಿ ಹರಿದು ಹೊಗುವನ್ತೆ, ಅಭ್ಯಾಸದ ಜೊತೆಗೆ ಹೇಗೆ ವೈರಾಗ್ಯವೂ ಸೇರಿಕೊಳ್ಳತ್ತಕ್ಕದ್ದು, ಸೇರಿಕೊಣ್ಡರೆ, ನದಿಯು ಸಂಸಾರದ ಕಡೆಗೆ

ಹೋಗುವುದನ್ನು ತಡೆಯಬಹುದೆನ್ದು ಹೇಳುತ್ತಾರೆ - ಈ ಮಾತುಗಳನ್ನು ಕೃಷ್ಣಾದಿಬುದ್ಧರು ತಮ್ಮದೇ ಆದ ಮಾತುಗಳಲ್ಲಿ ಸಮರ್ಥಿಸುತ್ತಾರೆ

***ಸೂತ್ರ ೧೩: ತತ್ರಸ್ಥಿತೌ ಯತ್ನೋಽಭ್ಯಾಸಹ***

ಹಿನ್ದಿನ ಸೂತ್ರದಲ್ಲಿ, ವೃತ್ತಿಗಳನ್ನು ನಿರೋಧಿಸಲು ಅಭ್ಯಾಸ ಮತ್ತು ವೈರಾಗ್ಯಗಳೆರೆಡೂ ಬೇಕೆನ್ದು ಹೇಳಿ, ಈ ಸೂತ್ರದಲ್ಲಿ "ಅಲ್ಲಿ ಯಾತಗೊಳ್ಳುವು (getting situated) ಯತ್ನವೇ ಅಭ್ಯಾಸ"ವೆನ್ದು ಹೇಳುತ್ತಾ, ಅಭ್ಯಾಸ ಮತ್ತು ವೈರಾಗ್ಯದಲ್ಲಿ ನೆಲೆಸಿರುವ ಯತ್ನವನ್ನು ಮಾಡುವುದೇ ನಮ್ಮ ಅಭ್ಯಾಸವಾಗಬೇಕೆನ್ದು ಹೇಳುತ್ತಾರೆ! ಇದನ್ನು ಸ್ವಲ್ಪ ವಿಸ್ತಾರವಾಗಿ ನೋಡೋಣ: -

ಯೋಗಸೂತ್ರದ ಎಲ್ಲ ಸೂತ್ರಗಳೂ ವೃತ್ತಿಗಳನ್ನು ನಿರೋಧಿಸಲು ಸೂಚಕವಾಗಿರುವ ಸೂತ್ರಗಳೇ ಆಗಿದ್ದರೂ, ಕೆಲವು ಸೂತ್ರಗಳು, ವ್ಯಕ್ತವಾಗಿ ವೃತ್ತಿ-ನಿರೋಧದ ಪ್ರಚರ್ಯವನ್ನು ಸೂಚಿಸುತ್ತವೆ. ಆ ಈತಿಯ ಸೂತ್ರಗಳಲ್ಲಿ, ಈ ಸೂತ್ರವು ಮೊದಲನೆಯದು. ವೃತ್ತಿ ನಿರೋಧತೆಯು ಯೋಗಕ್ಕೆ ಅಭ್ಯುಪಾಯವಾಗಿದ್ದರೂ (means), ನಿರೋಧತೆಯ ಆವೃತದಲ್ಲಿ (means) ಪತಞ್ಜಲಿಗಳು ಮೊದಲು ನಿರ್ದೇಶಿಸುವುದು ರಾಜಸಿಕ ಮತ್ತು ತಾಮಸಿಕ ವೃತ್ತಿಗಳ ನಿರೋಧವನ್ನು - ಇಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶವೆನ್ದರೆ, ರಾಜಸಿಕ ಮತ್ತು ತಾಮಸಿಕವೆಮ್ಬ ಪದಗಳನ್ನು ಕಙ್ಕರ (bad) ಪದಗಳನ್ನಾಗಿ ನೋಡಬಾರದು. ಲೋಕಾರೂಢಿಯಲ್ಲಿ ಸಾತ್ವಿಕವೆನ್ದರೆ ಒಳ್ಳೆಯದು, ರಾಜಸಿಕ ಮತ್ತು ತಾಮಸಿಕವೆನ್ದರೆ ಕೆಟ್ಟದ್ದು ಎಮ್ಬ ಅರ್ಥಗಳನ್ನು ನಾವು ಬಳಸಿದರೂ, ಆಧ್ಯಾತ್ಮದಲ್ಲಿ, ಅದರಲ್ಲೂ ಸಾಙ್ಖ್ಯ-ಯೋಗ ದರ್ಶನಗಳಲ್ಲಿ ಸಾತ್ವಿಕ-ರಾಜಸಿಕ-ತಾಮಸಿಕ ಪದಗಳು ಒಳ್ಳೆಯ ಮತ್ತು ಕೆಟ್ಟ ಎಮ್ಬ ಅರ್ಥವನ್ನು ಕೊಡುವುದಿಲ್ಲ - ಪ್ರಕೃತಿಯಲ್ಲಿ ಈ ಮೂರೂ ಗುಣಗಳು ಇರುತ್ತವೆ, ಇರತ್ತಕ್ಕದ್ದು. ಆದರೆ, ವೃತ್ತಿಗಳನ್ನು ನಿರೋಧಿಸುವ ಪ್ರಕ್ರಿಯೆಯಲ್ಲಿ ಮೊದಲು ನಿರೋಧಿಸಬೇಕಾದುದು, ರಾಜಸಿಕ ಮತ್ತು ತಾಮಸಿಕ ವೃತ್ತಿಗಳನ್ನು; ಏಕೆನ್ದರೆ, ಈ ಎರೆಡೂ ವೃತ್ತಿಗಳಿಗೆ ಮನಸ್ಸನ್ನು ಸ್ಥಿತಿಗೊಳಿಸುವ (stilling the mind) ಶಕ್ತಿ ಇಲ್ಲದೇ, ಪರ್ಯಾಯೇನವಾಗಿ (in turn) ಮತ್ತಷ್ಟು ವೃತ್ತಿಗಳನ್ನು ಮನಸ್ಸಿನಲ್ಲಿ ಪ್ರಚೋದಿಸುವ ಶಕ್ತಿ ಇರುತ್ತದೆ. ಹಿನ್ದೆ ಕೊಳದ ಉಪಮೆಯನ್ನು ಚರ್ಚಿಸುವಾಗ, ಕೊಳದಲ್ಲಿನ ಅಲೆಗಳನ್ನು ದಮನ ಮಾಡುವ ಪ್ರಯತ್ನವು ಹೊಸ ಅಲೆಗಳನ್ನು ಹುಟ್ಟುಹಾಕುವ ವಿಷಯವನ್ನು ನೆನಪು ಮಾಡಿಕೊಳ್ಳಬೇಕು. ಮೇಲೆ ಹೇಳಿದ ನದಿಯ ಉಪಮೆಯನ್ನು ನೋಡಿದಾಗ ರಾಜಸಿಕ ಮತ್ತು ತಾಮಸಿಕ ವೃತ್ತಿಗಳಿಗೆ, ಮನಸ್ಸೆಮ್ಬ ನದಿಯನ್ನು ಸಂಸಾರದ ಕಡೆಗೆ ಹರಿಸುವ ಶಕ್ತಿ ಇರುತ್ತದೆ - ಆದ್ದರಿನ್ದ, ಮೊದಲು ಆ ವೃತ್ತಿಗಳನ್ನು ನಿರೋಧಿಸತಕ್ಕದ್ದು.

ಈ ನಿಟ್ಟಿನಲ್ಲಿ ಈ ಸೂತ್ರವನ್ನು ನೋಡಿದಾಗ ನಮಗೆ ಗೋಚರವಾಗುವ ಸೂತ್ರದ ಅರ್ಥವೆನ್ದರೆ, ತತ್ರ ಸ್ಥಿತೌ ಎನ್ದು ಹೇಳುವಾಗ ಅಲ್ಲಿ, ಅನ್ದರೆ, ಅಭ್ಯಾಸ ಮತ್ತು ವೈರಾಗ್ಯಗಳ ಮಧ್ಯೆ, ನಮ್ಮ ಮನಸ್ಸನ್ನು ಸ್ಥಿತಿಗೊಳಿಸಿಸಲು ಮಾಡುವ ಯತ್ನವನ್ನು ನಾವು ಅಭ್ಯಾಸಮಾಡಿಕೊಳ್ಳ ಬೇಕು. ಇಲ್ಲಿ ಎರೆಡು ಪದಗಳಿಗೆ ಗಮನವನ್ನು ಕೊಡಬೇಕು - ಒನ್ದು ಯತ್ನ ಮತ್ತು ಅಭ್ಯಾಸ. ಆಭ್ಯಾಸದ ಅರ್ಥವನ್ನು ಮೊದಲೇ ನೋಡಿದ್ದೇವೆ; ಅಭ್ಯಾಸ ಮತ್ತು ವೈರಾಗ್ಯಗಳಲ್ಲಿ ಮನಸ್ಸನ್ನು ಸ್ಥಿತಿಗೊಳಿಸಬೇಕಾದರೆ, ಅದಕ್ಕೆ ಒನ್ದು ಸಚೇತವಾದ ಯತ್ನವಾಗಬೇಕು. ಆದರೆ, ಪ್ರತಿಯೊನ್ದು ಯತ್ನವು ಹೊಸ ವೃತ್ತಿಗಳನ್ನು ಹುಟ್ಟುಹಾಕಿದರೂ, ಮೇಲೆ ಹೇಳಿದ ಹಾಗೆ, ಅಭ್ಯಾಸ ಮತ್ತು ವೈರಾಗ್ಯಗಳಲ್ಲಿ ರಾಜಸಿಕ ಮತ್ತು ತಾಮಸಿಕ ವೃತ್ತಿಗಳು ನಿರೋಧಗೊಣ್ಡು, ಸಾತ್ವಿಕವಾದ ವೃತ್ತಿಗಳು ಉಳಿಯುವುದರಿನ್ದ ಇಲ್ಲಿ, ಈ ಯತ್ನವು ಮನಸ್ಸನ್ನು, ಸ್ಥಿತಿಗೊಳಿಸುವುದರಿನ್ದ, ಮನಸ್ಸೆಮ್ಬ ನದಿಯು ಕೈವಲ್ಯದ ಕಡೆಗೆ ನಿತ್ವಿಘ್ನಮವಾಗಿ ಹರಿಯಲು ಸಾಧ್ಯವಾಗುತ್ತದೆ

***ಸೂತ್ರ ೧೪: ಸತುಧೀರ್ಘಕಾಲ ನೈರನ್ತರ್ಯ ಸತ್ಕಾರಾಸೇವಿತೋ ದೃಢಭೂಮಿಹಿ***

ಈ ಸೂತ್ರದಲ್ಲಿ, ಮಹರ್ಷಿಗಳು, ಹಿನ್ದಿನ ಸೂತ್ರದಲ್ಲಿ ಉದ್ದಿಷ್ಟಗೊಳಿಸಿದ ಅಭ್ಯಾಸದ ಯತ್ನವನ್ನು ಮಾಡಬೇಕಾದರೆ ಬಹಳ ಸುಲಭದ ದೀರ್ಘಕಾಲದಲ್ಲಿ ನಿರನ್ತರವಾಗಿ ಸತ್ಕಾರ್ಯವೆನ್ದು ತಿಳಿದು ಪೂರ್ಣವಾಗಿ ಮಾಡಿದರೆ ಯತ್ನವು ಸಫಲವಾಗಿ, ಮನಸ್ಸು ಅಭ್ಯಾಸ ಮತ್ತು ವೈರಾಗ್ಯದಲ್ಲಿ ನೆಲೆಸುವುದೆನ್ದು ಬಹಳ ಔತ್ರವಾಗಿ ಅಥವಾ ನಿರುಪಸ್ಕೃತವಾಗಿ, ಈ ನಾಲ್ಕನ್ನು ಮಾಡಿದರೆ ಸಾಕು ಎನ್ನುವ ಸೂಚನೆ ಕೊಟ್ಟನ್ತಿದೆ. ಆದರೆ ಮನಸ್ಸಿಗೆ ಸಮ್ಬನ್ಧಪಟ್ಟ ವಿಷಯಗಳು ಅಷ್ಟು ಸುಲಭವಾದುದಲ್ಲ. ಆಗಿದ್ದರೆ, ಯೋಗಸೂತ್ರದ ಅವಶ್ಯಕತೆಯೇ ಇರುತ್ತಿರಲ್ಲಿಲ್ಲ. ಇದರಲ್ಲಿರುವ ಜಟಿಲತೆಗಳನ್ನು ನೋಡೋಣ

ವ್ಯಾಸರು ಮನಸ್ಸಿನ ವೃತ್ತಿಗಳನ್ನು ನದಿಯ ಚಲನೆಗೆ ಹೋಲಿಸಿ, ಚಿತ್ತ ನದೀ ನಾಮ ಉಭಯತೋ ವಾಹಿನೀ ಎನ್ದು ಹೇಳಿ, ನದಿಯ ಒನ್ದು ಪಥವು ಕೈವಲ್ಯದ ಕಡೆ ಮತ್ತೊನ್ದು ಪಥವು ಪಾಪದ ಕಡೆಗೆ ಹೋಗುವ ಸಾಧ್ಯತೆಗಳನ್ನು ಹೇಳಿದ್ದನ್ನು ಪುನಹ ನೆನಪು ಮಾಡಿಕೊಳ್ಳೋಣ - ಕೈವಲ್ಯದ ಕಡೆಗೆ ಅನ್ದರೆ ನಿರೋಧದ ಕಡೆಗೆ, ಸಮಾಧಿಯ ಕಡೆಗೆ, ಪಾಪದ ಕಡೆಗೆ ಆನ್ದರೆ ಸಂಸಾರದ ಕಡೆಗೆ. ಕೈವಲ್ಯದ ಕಡೆಗೆ ಹೋಗುವ ಚಿತ್ತಕ್ಕೆ ಮತ್ತೊನ್ದು ಹೆಸರು ಸಮಾಧಿ ಚಿತ್ತವೆನ್ದು, ಸಂಸಾರದ ಕಡೆಗೆ ಹೋಗು ಚಿತ್ತವನ್ನು ವ್ಯುತ್ಥಾನ ಚಿತ್ತವೆನ್ದು ಕರೆಯುತ್ತಾರೆ. ವ್ಯುತ್ಥಾನ ಚಿತ್ತದ ಕಡೆಗೆ ಸ್ವಲ್ಪ ಗಮನ ಹರಿಸೋಣ. ವ್ಯುತ್ಥಾನ ಅನ್ದರೆ ಏಳುವುದು, ವ್ಯುತ್ಥಾನ ಚಿತ್ತ ಅನ್ದರೆ, ವ್ಯುತ್ಥಾನಗೊಣ್ಡಿರುವ ಚಿತ್ತ ಅನ್ದರೆ, ಸಮಾಧಿ ಸ್ಥಿತಿಯಿನ್ದ ಎದ್ದಿರುವ ಚಿತ್ತ. ಸಮಾಧಿ ಸ್ಥಿತಿಯಿನ್ದ ಎದ್ದಿರುವ ಮನಸ್ಸು ಪುನಹ ತಾಮಸಿಕ ಮತ್ತು ರಾಜಸಿಕ ವೃತ್ತಿಗಳ ಸುಳಿಗೆ ಸಿಲುಕುತ್ತದೆ. ಆದರೆ, ಪ್ರಶ್ನೆ ಏನೆನ್ದರೆ, ಸದಾಕಾಲ ವ್ಯುತ್ಥಾನ ಅವಸ್ಥೆಯಲ್ಲಿರುವುದನ್ನು ರೂಢಿ ಮಾಡಿಕೊಣ್ಡಿರುವ ನದಿಯನ್ನು ಕೈವಲ್ಯ ಪಥದ ಕಡೆ ತಿರುಗಿಸುವುದು ಹೇಗೆ?! - ಇದಕ್ಕೆ ಉತ್ತರವಾಗಿ ಸತುದೀರ್ಘಕಾಲ ನೈರನ್ತರ್ಯ ಸತ್ಕಾರಾಸೇವಿತೋ ಎನ್ದು ಈ ಸೂತ್ರ ಹೇಳಿದರೂ, ಹಳೆಯ ಅಭ್ಯಾಸವನ್ನು ತೊರೆದು, ದೀರ್ಘವಾಗಿ, ನಿರನ್ತರವಾಗಿ ಸತ್ಕಾರ್ಯವಾಗಿ, ಆಸೇವಿತವಾಗಿ ಮಾಡುವುದು ಹೇಗೆ?! ಹೀಗೆ ಮಾಡುವುದಕ್ಕೆ ಬೇಕಾಗಿರುವ ಸಾಧನೆಯ ಪದಾರ್ಥಗಳೇನು?! ಈ ನಾಲ್ಕು ಪದಾರ್ಥಗಳೇ, ತಪಸ್ಸು, ಬ್ರಹ್ಮಚರ್ಯ, ವಿದ್ಯೆ ಮತ್ತು ಶ್ರದ್ಧೆ. ಈ ನಾಲ್ಕನ್ನು ಸವಿಸ್ತಾರವಾಗಿ ನೋಡೋಣ

ತಪಸ್ -ತಪ ಎಮ್ಬ ಪದದಿನ್ದ ಉತ್ಪತ್ತಿಯಗಿದ್ದು, ಸುಡುವುದು ಎಮ್ಬ ಅರ್ಥವಿರುವ ತಪಸ್ಸ್ ಪದವು, ಮನಸ್ಸು, ವ್ಯುತ್ಥಾನ ಪಥದಿನ್ದ ಕೈವಲ್ಯ ಪಥಕ್ಕೆ ಹೋಗಬೇಕಾದರೆ, ಮನಸ್ಸು ತನ್ನ ಎಲ್ಲ ಅಧೀನತ್ವಗಳಿನ್ದ, ಅದರಲ್ಲೂ ಹೊರಗಿನ ವಿಷಯಗಳ ಮೇಲೆ ತನ್ನನ್ನು ತಾನು ಅಧೀನಗೊಳಿಸಿಕೊಣ್ಡಿರುವುದರಿನ್ದ ಹೊರಬರಬೇಕು. ಇದಾಗಬೇಕಾದರೆ, ಹೊರಗಿನ ವಿಷಯಗಳ ಮೇಲಿನ ಕಾಮನೆ ಬಿಡಬೇಕು, ಕಾಮನೆಗಳನ್ನು ಸುಡಬೇಕು. ಆದರೆ ಪಾಕ್ಷಿಕವಾದ ಮನಸ್ಸಿಗೆ, ಬೇರೊನ್ದನ್ನು ಕೊಡದ್ದಿದ್ದರೆ, ಅದು ಇರುವುದನ್ನು ಬಿಡುವುದಿಲ್ಲ - ಕಾಪಿ ಚಟ ಬಿಡಬೇಕಾದರೆ ಬೇರೆ

ಚಟವನ್ನು ಹಿಡಿಯಬೇಕು. ಆದರೆ ಹಿಡಿಯಬೇಕಾದ ಚಟ ಯಾವುದು? ಇದಕ್ಕೆ ಉತ್ತರ ಬ್ರಹ್ಮಚರ್ಯ

ಬ್ರಹ್ಮಚರ್ಯ: ಸಾಮಾನ್ಯವಾಗಿ ಬ್ರಹ್ಮಚರ್ಯವೆನ್ದರೆ, ಲೈಙ್ಗಿಕ ಚಟುವಟಿಕೆಯಿನ್ದ ದೂರ ಇರುವುದು ಎಮ್ಬ ಅರ್ಥವನ್ನು ಕೊಡುತ್ತೇವೆ. ಇದು ತಪ್ಪಲ್ಲದ್ದಿದ್ದರೂ ಇದು ಒನ್ದು ವ್ಯುತ್ಪಾದಿತ(derived)ಅರ್ಥ. ಬ್ರಹ್ಮಚರ್ಯವೆನ್ದರೆ, ಬ್ರಹ್ಮದ ಕಡೆಗೆ, ಮನಸ್ಸಿನ ವಿಷಯಗಳನ್ನು, ಮನಸ್ಸಿನ ಅವಚ್ಛೇದಗಳಿನ್ದ (boundaries) ಅತಿವರ್ತಗೊಣ್ಡು (transcend) ಮನಸ್ಸಿಗೆ ಅತೀತವಾದ ವಸ್ತುವಿನ ಕಡೆಗೆ ಹೋಗುವುದು. ಇದಕ್ಕೆ ಬೇಕಾಗಿರುವುದು ವಿದ್ಯೆ.

ವಿದ್ಯೆ: ವಿದ್ ಎಮ್ಬ ಪದದಿನ್ದ ಉತ್ಪತ್ತಿಯಾಗಿದ್ದು, ವಿದ್ ಪದಕ್ಕೆ ಹಲವಾರು ಅರ್ಥಗಳಿದ್ದು, ಗಳಿಸುವುದು, ತಿಳಿದುಕೊಳ್ಳುವುದು ಎಮ್ಬ ಅರ್ಥಗಳು ಪ್ರಮುಖವಾದವು. ಈ ಅರ್ಥ ಎಲ್ಲ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಅನ್ವಯವಾದರೂ, ಇಲ್ಲಿ ಚರ್ಚಿಸುತ್ತಿರುವುದು ಮನಸ್ಸನ್ನು ಮೀರಿನಿನ್ತ ವಸ್ತು/ ವಿಷಯವಾದುದರಿನ್ದ, ಈ ಅರ್ಥದ ಗುರ್ವರ್ತತ್ವವು (relevance) ಸಾಮಾನ್ಯ ಲೌಕಿಕ ಅನ್ದರೆ ಮನಸ್ಸಿಗೆ ಸಮ್ಬನ್ಧಪಟ್ಟ ವಿಷಯಕ್ಕಲ್ಲದೇ ಮನಸ್ಸಿಗೆ ಮೀರಿದ ಪರಾವಸ್ತುವಿಗೆ ಸೇರಿರುತ್ತದೆ. ಬ್ರಹ್ಮದ ದಾರಿಯಲ್ಲಿ ಹೋಗಬೇಕಾರದೆ, ಅನ್ದರೆ ಬ್ರಹ್ಮಚರ್ಯದಲ್ಲಿರಬೇಕಾದರೆ, ಬ್ರಹ್ಮವೆನ್ದರೇನು ಎಮ್ಬ ಸರಿಯಾದ ವಿದ್ಯೆ ಇರಬೇಕು. ಸರಿಯಾದ ವಿದ್ಯೆ ಗಳಿಸಬೇಕಾದರೆ ಇರಬೇಕಾದ ಅಭಿಕ್ರಮತೆ (approach)ಶ್ರದ್ಧೆ!

ಶ್ರದ್ಧೆ: ಮೇಲಿನ ಪ್ರಸ್ತರದಲ್ಲಿ (paragraph) ಶ್ರದ್ಧೆಯನ್ನು ಒನ್ದು ಅಭಿಕ್ರಮತೆ ಎನ್ದು ಕರೆದೆವೆ ಹೊರತು ಗುಣ ಎನ್ನಲಿಲ್ಲ. ಇದಕ್ಕೆ ಕಾರಣವಿದೆ! ಸಾಮನ್ಯವಾಗಿ ಶ್ರದ್ಧೆ ಪದದ ಅರ್ಥವನ್ನು ನಮ್ಮಲಿ ಇರಬೇಕಾದ ಒನ್ದು ಗುಣವಾಗಿ, ನಾವು ಯಾವುದೋ ಒನ್ದು ತತ್ವ ಅಥವಾ ದೈವದ ( ಅಥವಾ ನಾವು ನಮ್ಮ ಮೇಲೆ) ಮೇಲೆ ಇಟ್ಟಿರುವ ನಮ್ಬಿಕೆಯು ನಿಜವೆಮ್ಬ ಅಟಲವಾದ ನಿಲುವುವೆನ್ದು (faith) ಅರ್ಥೈಸುತ್ತೇವೆ. ಜೀವನದ ಎಲ್ಲ ಆಯಾಮಗಳಿಗೆ ಈ ರಿತಿಯ ಅರ್ಥದ ಅವಶ್ಯಕತೆ ಇದ್ದರೂ, ಭಾರತೀಯ ದೃಷ್ಟಿಕೋನದಲ್ಲಿ ಈ ರೀತಿಯ ಅರ್ಥ ಆಧ್ಯಾತ್ಮ ಸಾಧನೆಗೆ ಬಹಳ ಕಣ್ಟಕಪ್ರಾಯವಾದ ಅರ್ಥ. ವಸ್ತುತಹ, ಭಾರತೀಯತೆಯ, ಸಂಸ್ಕೃತಿಯ ಭಿನ್ನತೆ ಮತ್ತು ವೈಶಿಷ್ಯತೆಯೇ, ಅದು ನಮ್ಬಿಕೆಯ ಆಧಾರದ ಮೇಲೆ ನಿನ್ತ ಅಥವಾ ಪರಿಭಾಷಿತಗೊಣ್ಡ ಸಂಸ್ಕೃತಿಯ ಅಥವ ಸಮಾಜವಲ್ಲ. ಈಗಿನ ಭಾರತವು ನಮ್ಬಿಕೆಯ ಗೂಥಕೂಪದಲ್ಲಿ (cesspool) ತನ್ನನ್ನು ತಾನು ಸಿಲುಕಿಸಿಕೊಣ್ಡಿರುವುದೇ ಅದರ ಸೋಲಿಗೆ ಮತ್ತು ಇನ್ದಿನ ಸ್ಥಿತಿಗೆ ಕಾರಣ. ಹಾಗಾದರೆ ಶ್ರದ್ಧೆ ಎನ್ದರೇನು?!

ಶ್ರತ್ ಮತ್ತು ಧಾ ಎಮ್ಬ ಎರೆಡು ಪದಗಳ ಸಮಾಗಮದಿನ್ದ ಉಣ್ಟಾದ ಪದವೇ ಶ್ರದ್ಧಾ. ಶ್ರತ್ ಅನ್ದರೆ ಸತ್ಯ ಮತ್ತು ಧಾ ಅನ್ದರೆ ಧಾರಣೆ ಮಾಡಿರುವುದು, ಹಿಡಿದಿಟ್ಟುಕೊಣ್ಡಿರುವುದು. ಸತ್ಯವನ್ನು ಹಿಡಿದಿಟ್ಟುಕೊಣ್ಡಿರುವುದೇ ಶ್ರದ್ಧೆ. ಸತ್ಯ ಅನ್ದರೆ ಏನು? ಸತ್ಯ ಪದದ ಅರ್ಥವನ್ನು ಲನೆಯ ಸುತ್ರವನ್ನು (ವಿಪರ್ಯಯೋಮಿಥ್ಯಾಜ್ಞಾನಮತದ್ರೂಪಪ್ರತಿಷ್ಠಮ್) ಚರ್ಚಿಸುವಾಗ ನೋಡಿದ್ದೆವು; ಅದನ್ನು ಮತ್ತೊಮ್ಮೆ ನೋದುವುದು ಉಪಯುಕ್ತ; ಛಾನ್ದೋಗ್ಯ ಉಪನಿಷತ್ತು ಸತ್ಯವನ್ನು ಈರೀತಿ ವ್ಯಾಖ್ಯಾನಿಸುತ್ತದೆ;

ತಾನಿ ಹ ವಾ ಏತಾನಿ ತ್ರೀಣ್ಯಕ್ಷರಾಣಿ ಸತೀಯಮಿತಿ ತದ್ಯತ್ಸತ್ತದಮೃತಮಥ ಯತ್ತಿ ತನ್ಮರ್ತ್ಯಮಥ ಯದ್ಯಂ ತೇನೋಭೇ ಯಚ್ಛತಿ ಯದನೇನೋಭೇ ಯಚ್ಛತಿ ತಸ್ಮಾದ್ಯಮಹರಹರ್ವಾ ಏವಂವಿತ್ಸ್ವರ್ಗಂ ಲೋಕಮೇತಿ -

ಸತ್ಯ ಅನ್ನುವ ಪದದಲ್ಲಿ ಮೂರು ಅಕ್ಷರಗಳಿವೆ, ಸ, ತೀ ಮತ್ತು ಯಮ್, ಸ ಎನ್ನುವುದು ಪರಮಾರ್ಥ ತತ್ವ ಅಥವ ಋತ ಅಥವಾ ನಿರಪೇಕ್ಷ ತತ್ವ (independent entity), ತೀ ಎನ್ನುವುದು ಮರ್ತ್ಯ (mortal)ತತ್ವ ಅಥವ ಸಾಪೇಕ್ಷ ತತ್ವ (dependent entity), ಯಮ್ ಎನ್ನುವುದು ಇವೆರಡನ್ನೂ ಸೇರಿಸುವ ಒನ್ದು ಸೇತು. ಹಾಗದರೆ, ಶ್ರದ್ಧಾ ಏಕೆ ಬೇಕು, ಏಕೆ ಸತ್ಯವನ್ನು ಧರಿಸಬೇಕು? ವಿದ್ಯೆಯ ಮೂಲಕ ಪರಬ್ರಹ್ಮ ವಸ್ತುವಿನಕಡೆ ಹೋಗಬೇಕಾದರೆ ( ಸಾಙ್ಖ್ಯ-ಯೋಗದ ಭಾಷೆಯಲ್ಲಿ ಆತ್ಮದರ್ಶನ ಅಥವ ನಮ್ಮ ನೈಜ ಸ್ವರೂಪವನ್ನು ತಿಳಿಯುವುದು), ನಿರಪೇಕ್ಷ ತತ್ವದ ಕಡೆ ಹೋಗಬೇಕಾದರೆ, ಸ ವಿನ ಕಡೆಗೆ ಹೋಗಬೇಕಾದರೆ, ನಮ್ಮ ಸಾಪೇಕ್ಷವಾದ ಅನುಭವ/ಜ್ಞಾನವನ್ನು ಸದಾ ನಿರಪೇಕ್ಷ ತತ್ವದ ಜೊತೆಗೆ ಯ್ಮ್ ಗೊಳಿಸಬೇಕು. ಆನ್ದರೆ, ನಮ್ಮ ಅನುಭವ/ಜ್ಞಾನವು ನಿರಪೇಕ್ಷಕ್ಕೆ ಅನುಗುಣವಾಗಿದೆಯೇ ಎನ್ದು ಸದಾ ಪರೀಕ್ಷಿಸಬೇಕು(a constant effort has to be made to validate our relative experience and knowledge with the absolute). ಈ ರೀತಿ ಪರೀಕ್ಷಿಸಿಕೊಳ್ಳುವುದೇ ಶ್ರದ್ಧಾ! ಈ ಕಾರಣದೊನ್ದಲೇ ಇದನ್ನು ಅಭಿಕ್ರಮತೆ ಎನ್ದು ಕರೆದೆವು, ಗುಣ ಎನ್ನಲ್ಲಿಲ್ಲ. ಈ ರೀತಿ ಪರೀಕ್ಷಿಸಿಕೊಣ್ಡಾಗ ನಮ್ಮ ಮನಸ್ಸೆಮ್ಬ ನದಿಯು ಕೈವಲ್ಯ ಪಥವನ್ನು ಹಿಡಿಯುವನ್ತಾಗುತ್ತದೆ. ಇಲ್ಲದೇ ಇದ್ದಲ್ಲಿ ಆಧ್ಯಾತ್ಮ ಸಾಧನೆಯಾಗುತ್ತಿದೆ ಎಮ್ಬ ಭರೆಯಲ್ಲಿ ನದಿಯೂ ಸಂಸಾರ ಪಥದ ಕಡೆ ದಾಪುಗಾಲು ಹಾಕುತ್ತಾ ಹೋಗುತ್ತಿರುತ್ತದೆ

**ಓಂತತ್ ಸತ್**

**ತದ್ಯಥಾ, ಈರೀತಿಯಲ್ಲಿ**

**ಗತೇ ಗತೇ ಪರಾಗತೇ ಪರಾಸಙ್ಗತೇ ಬೋಧಿ ಸ್ವಾಹ -**

**ಹೋದರು! ಹೋದರು! ಪೂರ್ಣತ್ವದ ಕಡೆಗೆ ಹೋದರು! ಸಮ್ಪೂರ್ಣವಾಗಿ ಪೂರ್ಣತ್ವದಕಡೆಕೆ ಹೋದರು! ಜ್ಞಾನೋದಯಕ್ಕೆ ಜಯಕಾರ - ಪ್ರಜ್ಞಾಪರಮಿತ ಹೃದಯ ಸೂತ್ರ**



# ಸಂಕ್ರಾಂತಿ ಸಂಭ್ರಮ

**ಲಕ್ಷ್ಮಿ ರಾವ್**, ನ್ಯೂ ಜೆರ್ಸಿ

**ಸ**ಕ್ಕರೆ ಅಚ್ಚು ಮಾಡೋದು…. Oh..it's nostalgic!

"ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ!" ಮಕರ ಸಂಕ್ರಾಂತಿ ಹಬ್ಬ ಸುಗ್ಗಿಯ ಸಂಕೇತ. ಕೃಷಿಕಾರರು ತಮ್ಮ ವರ್ಷಾವರಿ ಬೆಳೆಯ ಕೊಯಿಲಿನ ನಂತರ, ಅದನ್ನು ದೇವರಿಗೆ ಅರ್ಪಿಸಿ, ತಮ್ಮ ಯಶಸ್ಸನ್ನು ಸಂಭ್ರಮದಿಂದ ಆಚರಿಸುವ ಹಬ್ಬ. ಅದಕ್ಕಾಗಿ ಭೋಗಿ ಹಬ್ಬದಲ್ಲಿ ತರಕಾರಿ-ಧಾನ್ಯಗಳನ್ನು ದೇವರ ನೈವೇದ್ಯಕ್ಕೆ ಇಟ್ಟು, ಸುಮಂಗಲಿಯರಿಗೆ ದಾನ ಮಾಡುತ್ತಾರೆ. ಸಂಕ್ರಮಣದ ದಿನ ಎಳ್ಳು-ಬೆಲ್ಲ, ಸಕ್ಕರೆ ಅಚ್ಚು ಮತ್ತು ಕಬ್ಬಿನ ತುಂಡನ್ನು ಬಂಧು-ಭಾಂದವರ ಮನೆಗಳಿಗೆ ಹೋಗಿ ಬೀರುವುದು ರೂಢಿ. ಎಳ್ಳು-ಬೆಲ್ಲ ತಯಾರಿಸುವ ಪ್ರಕ್ರಿಯೆ ನೋಡಲು ಬಹಳ ಚೆನ್ನ. ಅದರಲ್ಲೂ ಒಂದಿಷ್ಟು ಹೆಂಗಸರು, ಒಬ್ಬರ ಮನೆಯಲ್ಲಿ ಸೇರಿಕೊಂಡು ಸಕ್ಕರೆ ಅಚ್ಚು ಮಾಡುವ ಉತ್ಸಾಹದ ಕೆಲಸವು, ದೊಡ್ಡವರಿಗೂ, ಚಿಕ್ಕ ಮಕ್ಕಳಿಗೂ ಒಂದು ರೀತಿಯ ಮನೋರಂಜನೆಯೇ ಸರಿ.



ಅಮೇರಿಕಾ ಕನ್ನಡಿಗರು ಈ ನಿಟ್ಟಿನಲ್ಲಿ ಏನು ಕಡಿಮೆ ಇಲ್ಲ! ಮಕರ ಸಂಕ್ರಾಂತಿ ಹಬ್ಬವನ್ನು ಬಹಳ ಉತ್ಸಾಹ ಮತ್ತು ವಿಜೃಂಭಣೆಯಿಂದ ಆಚರಿಸುತ್ತಾರೆ. ನಂಬಿಕೆ ಇಲ್ಲದಿದ್ದರೆ ಸಂಕ್ರಾಂತಿ ಹಬ್ಬದ ಹಿಂದಿನ ದಿನ ಯಾವುದಾದರು ದೇಸಿ ದಿನಸಿ ಅಂಗಡಿಗೆ ಹೋಗಿ ನೋಡಿ. ಆ ಸಡಗರ ಯಾವ ಗಾಂಧಿ ಬಜಾರ್ ಗೂ ಏನು ಕಡಿಮೆ ಇಲ್ಲ.

ಕರೋನ ಪಾಂಡೆಮಿಕ್ ಸಮಯದಲ್ಲಿ ಹಬ್ಬದ ಚಟುವಟಿಕೆ ಸ್ವಲ್ಪ ಕಡಿಮೆ ಆಗಿದ್ದರೂ, ನ್ಯೂ ಜೆರ್ಸಿಯ ಬೃಂದಾವನ ಕನ್ನಡ ಕೂಟ ನಮ್ಮ ಹಬ್ಬದ ಹುಮ್ಮಸ್ಸನ್ನು ಹೆಚ್ಚಿಸಲಿಕ್ಕೆ, ನಮಗೆ ಸಕ್ಕರೆ  ಅಚ್ಚು ತಯಾರಿಸುವ ವಿಧಾನದ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿತ್ತು. ೨೦೨೨ರ ಈ ಮೊದಲ ಕಾರ್ಯಕ್ರಮ ಬೃಂದಾವನದ ಅಧ್ಯಕ್ಷರಾದ ಪದ್ಮಿನಿ ಹೇಮಂತ್ ಅವರ ನೇತೃತ್ವದಲ್ಲಿ ನಡೆಯಿತು.

ಮೈಸೂರು-ಕರ್ನಾಟಕ ಶೈಲಿಯ ಸಕ್ಕರೆ ಅಚ್ಚು ಮಾಡುವ ವಿಧಾನವನ್ನು ಶ್ರೀಮತಿ ಉಮಾ ರಾಯಸಂ ಅವರು ಬಹಳ ಅಚ್ಚುಕಟ್ಟಾಗಿ ತೋರಿಸಿಕೊಟ್ಟರು. ಈ ಕಾರ್ಯಾಗಾರದ ನಿರೂಪಣೆಯನ್ನು ರಘು ರಾಯಸಂ ಬಹಳ ಸೊಗಸಾಗಿ ಹಾಗು ಶೈಕ್ಷಣಿಕವಾಗಿ ನಡೆಸಿಕೊಟ್ಟರು.




ಸಕ್ಕರೆ ಅಚ್ಚು ಹಾಕುವುದು ಒಂದು ನಾಜೂಕಿನ ಕೆಲಸ - ಅವಸರದಲ್ಲಿ ಮಾಡುವಂತದ್ದಲ್ಲ. ಅದು ಕರ ಕೌಶಲವಲ್ಲದೆ ಸಹನೆಯನ್ನೂ ಪರೀಕ್ಷಿಸುತ್ತದೆ.

<u>**ಅಚ್ಚು ಮಾಡುವ ಸಂಕ್ಷಿಪ್ತ ವಿಧಾನ:**</u>

- ಮರದ ಅಚ್ಚುಗಳನ್ನು ತೊಳೆದು, ನೀರಿನಲ್ಲಿ ನೆನೆ ಇಟ್ಟು ನಂತರ ರಬ್ಬರ್ ಬ್ಯಾಂಡ್ ಹಾಕಿ ಜೋಡಿಸಿ, ಸಿದ್ಧ ಮಾಡಿಕೊಳ್ಳಬೇಕು.
- ಸಕ್ಕರೆಯನ್ನು ಮುಳುಗುವಷ್ಟು ನೀರಿನಲ್ಲಿ ಹಾಕಿ, ಕರಗಿಸಬೇಕು.
- ಸಣ್ಣ ಕಾವಿನಲ್ಲಿ ಈ ಸಕ್ಕರೆ ಪಾಕವನ್ನು ಮಾಡಿ, ಕುದಿಯಲು ಬಂದಾಗ ಅದಕ್ಕೆ ಎರಡು ಚಮಚ ಮೊಸರನ್ನು ಹಾಕಿ, ಎರಡು ನಿಮಿಷ ಕುದಿಸಬೇಕು.
- ನಂತರ ಮೊಸರಿನ ಚರಟವನ್ನು ಶೋಧಿಸಿ



- ಎರಡನೆಯದಾಗಿ ಹಾಲನ್ನ ಹಾಕಿ ಇದೇ ರೀತಿ ಶೋಧಿಸಿ.
- ಮಿಠಾಯಿ ಹದ ಬರುವ ತನಕ ಗೊಟಾಯಿಸುತ್ತಿರಬೇಕು.
- ಬೆಳ್ಳಗಾದ ಸಕ್ಕರೆ ಪಾಕವನ್ನು ಅಚ್ಚುಗಳಿಗೆ ಹಾಕುತ್ತಾ ಅದನ್ನು ಮೆತ್ತಗೆ ನೆಲಕ್ಕೆ ಕುಟ್ಟುತ್ತಿರಬೇಕು. ಹೀಗೆ ಮಾಡಿದರೆ ಪಾಕ ಅಚ್ಚಿನ ಎಲ್ಲಾ ಮೂಲೆಗಳಿಗೂ ಸೇರುತ್ತದೆ.
- ಪಾಕ ಗಟ್ಟಿಯಾಗಿ, ಅಚ್ಚಿನಲ್ಲಿ ತಣ್ಣಗಾದಮೇಲೆ, ಅಚ್ಚಿನ ಒಂದು ಭಾಗವನ್ನು ನಿಧಾನವಾಗಿ ತೆಗೆಯಬೇಕು.
- ಸ್ವಲ್ಪ ಹೊತ್ತಿನ ನಂತರ ಸೂಜಿ ಅಥವಾ ಟೂತ್ ಪಿಕ್ ನಿಂದ ಸಡಿಲಿಸಿ ಸಕ್ಕರೆ ಅಚ್ಚನ್ನು ಬೇರೆ ಮಾಡಿ.

ಸುಂದರವಾದ ಗೋಪುರಗಳು, ಮಂಟಪ, ಕಮಲ, ಆನೆ, ಒಂಟೆ, ಕುದುರೆ, ಬಾಳೆಹಣ್ಣು, ಗಣಪತಿ ಹೀಗೆ ಅಚ್ಚುಗಳು ಬೇರೆ ಬೇರೆ ಆಕಾರಗಳಲ್ಲಿ ಸಿಗುತ್ತದೆ.





ಕಾರ್ಯಕ್ರಮದ ಕಡೇ ಭಾಗದಲ್ಲಿ ವೀಕ್ಷಕರಿಗೆ ತಮ್ಮ ಪ್ರಶ್ನೆಗಳು, ಅನಿಸಿಕೆಗಳು ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಪದ್ಮಿನಿ ಅವರು ಪ್ರೋತ್ಸಾಹಿಸಿದರು. ಉಮಾ ಅವರ ಉತ್ತರಗಳು ಹಾಗು ರಘು ಅವರ ರಸ ಪ್ರಶ್ನೆಗಳು ಸಂವಾದಾತ್ಮಕವಾಗಿತ್ತು. ವೀಕ್ಷಕರು ಸಕ್ರಿಯವಾಗಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಅದರ ಕಳೆ ಹೆಚ್ಚಿಸಿತು.

ಎಳ್ಳು ಬೆಲ್ಲ ಮಾಡುವ ರೀತಿಯನ್ನು ಸಹ ಉಮಾ ತಿಳಿಸಿ ಕೊಟ್ಟರು. ಬೆಲ್ಲ ಮತ್ತು ಕೊಬ್ಬರಿಯನ್ನು ನಾಜೂಕಾಗಿ ಹೆಚ್ಚುವ ಕಲೆ ಮತ್ತು ಉಪಯೋಗಿಸಬೇಕಾದ ಉಪಕರಣಗಳ ಬಗ್ಗೆಯೂ ಸದಸ್ಯರು ಚರ್ಚೆ ಮಾಡಿದರು. ತಮ್ಮ ಬಾಲ್ಯದ ನೆನಪುಗಳನ್ನು ಹಂಚಿಕೊಂಡು, ಅಮ್ಮಂದಿರು ಅಜ್ಜಿಯರನ್ನು ಜ್ಞಾಪಿಸಿಕೊಂಡರು.

ಇಂತಹ ಉಪಯುಕ್ತವಾದ, ಸಮಯೋಚಿತ ಕಾರ್ಯಕ್ರಮಗಳನ್ನು ಬೃಂದಾವನ ಕನ್ನಡ ಕೂಟ ನಮಗೆ ಕೊಡುತ್ತಲೇ ಬಂದಿದೆ. ೨೦೨೨ ರಲ್ಲಿ ಬೃಂದಾವನ ಕನ್ನಡ ಕೂಟದ ಪ್ರಸ್ತುತಿಗಳು ಹೀಗೆ ಯಶಸ್ವಿಯಾಗಿ ಮುಂದುವರೆಯಲಿ ಎಂದು ನಮ್ಮ ಆಶಯ.



# ನಿನ್ನ ನೀನು ನೋಡಿಕೋ...

**ಸತೀಶ್ ಹೊಸನಗರ,** ನ್ಯೂ ಜೆರ್ಸಿ

**ಈ** ದೇಶದಲ್ಲಿ ನಾವು ಒಬ್ಬರ ಜೊತೆಗೆ ಮಾತುಕತೆ ಮುಗಿಸುತ್ತಿದ್ದಂತೆ "You take care!" ಅಥವಾ "Take care of yourself!" ಎಂದು ಹೇಳುವ ವಾಡಿಕೆ ಇದೆ. ಅದನ್ನ ನಾವು ನಮ್ಮ ಕನ್ನಡಿಗರ ಸಂಭಾಷಣೆಯಲ್ಲಿ "ಹುಷಾರು, ಮತ್ತೆ!", "ನಿನ್ನ ಆರೋಗ್ಯ ಚೆನ್ನಾಗಿ ನೋಡಿಕೋ" ಎಂದು ಹೇಳ್ತೀವಲ್ಲ, ಹಾಗೆ ಅಂದುಕೊಳ್ಳಬಹುದು. ಈ "take care" ಎನ್ನುವ ಪರಿಭಾಷೆಗೆ ಹೊಸ ಅರ್ಥ ಸಿಕ್ಕಿದ್ದು ಇತ್ತೀಚೆಗಷ್ಟೇ!

ಈ ಕ್ಯಾಪಿಟಲಿಸ್ಟಿಕ್ ವ್ಯವಸ್ಥೆಯಲ್ಲಿ ಎಲ್ಲರೂ ತಮ್ಮ ತಮ್ಮ ಬೇಳೆಕಾಳುಗಳನ್ನು ನಮ್ಮ ಹೆಸರಿನಲ್ಲಿ ಬೇಯಿಸಿಕೊಳ್ಳುವವರೇ. ನಾವುಗಳೆಲ್ಲರೂ ಬಳಕೆದಾರರು (ಕನ್ಸ್ಯೂಮರ್ಸ್), ನಮ್ಮ ಆಗು-ಹೋಗುಗಳಿಗೆ ಜನರು ತಮಗೆ ಬೇಕಾದದ್ದನ್ನ ಮಾರ್ಕೆಟ್ ಮಾಡುತ್ತಾರೆ ಮತ್ತು ಮಾರಾಟ ಮಾಡುತ್ತಾರೆ. ಅದು ಇನ್ಶೂರೆನ್ಸ್ ಕಂಪನಿಗಳಿರಬಹುದು, ಬ್ಯಾಂಕಿಂಗ್-ಇನ್ವೆಸ್ಟ್‌ಮೆಂಟ್‌ಗಳಿರಬಹುದು, ಯುಟಿಲಿಟಿ-ಕಮ್ಯೂನಿಕೇಷನ್ ಇರಬಹುದು, ಹೆಲ್ತ್-ಫಾರ್ಮಾ ಇರಬಹುದು ಮತ್ಯಾವುದೇ ಸರ್ವೀಸ್ ಆದರೂ ಅವರವರ ಆಸಕ್ತಿಗಳು ಅವರಿಗೆ ಮೊದಲು. ಒಟ್ಟಿನಲ್ಲಿ ಬಳಕೆದಾರರು ಅವರ ಉತ್ಪನ್ನಗಳನ್ನ ಬಳಸುತ್ತಲೇ ಇರಬೇಕು, ನಮ್ಮ ಕೊಳ್ಳುಬಾಕತನದಿಂದ ಅವರ ಉತ್ಪನ್ನ ಹೆಚ್ಚಾಗಿ, ಅದರಿಂದ ಅವರಿಗೆ ಲಾಭ ಬರಬೇಕು ಅಷ್ಟೇ.

ಇದರಲ್ಲಿ ಬಳಕೆದಾರರ ಯೋಗಕ್ಷೇಮದತ್ತ, ನೀವು ಬಳಸುತ್ತಿರುವ ಕಂಪನಿಯವರು, 'ನಾವು ಗಮನಹರಿಸುತ್ತೇವೆ' ಎಂದು ಹೇಳಿದರೂ ನಿಮ್ಮ ನಿಮ್ಮ ಯೋಗಕ್ಷೇಮದ ಜವಾಬ್ದಾರಿ ಎಂದಿದ್ದರೂ ನಿಮ್ಮದೇ!

***

ಡಿಸೆಂಬರ್ ಕೊನೆಯಲ್ಲಿ ವರ್ಷದ ಕೊನೆಯ ಕೆಲವು ಲೆಕ್ಕಾಚಾರಗಳನ್ನು ಮಾಡುತ್ತಿದ್ದಾಗ, ನನ್ನ ಕ್ರೆಡಿಟ್‌ಕಾರ್ಡ್ ಬಿಲ್ ಒಂದರ ವಿವರಗಳನ್ನು ನೋಡುತ್ತಾ ಹೋದೆ. ಒಂದು ಕಾಲದಲ್ಲಿ ಪರಿಸರ ಸ್ನೇಹಿ ಪ್ರಾಸೆಸ್ಸುಗಳನ್ನು ಪ್ರಚಾರ ಮಾಡುತ್ತಿದ್ದ ಕ್ರೆಡಿಟ್ ಕಾರ್ಡ್ ಸಂಸ್ಥೆಯು, ನಮ್ಮನ್ನು ಪೇಪರ್‌ಲೆಸ್ ಬಿಲ್‌ಗೆ ಬಹಳ ಹಿಂದೆ ಪರಿವರ್ತಿಸಿದ್ದರು. ಕೆಲವು ವರ್ಷಗಳ ಹಿಂದೆ, ಪ್ರತಿ ತಿಂಗಳು ಕ್ರೆಡಿಟ್ ಕಾರ್ಡ್ ಕಂಪನಿಯ ಬಿಲ್‌ಗಳು ಬಂದು ಮೇಲ್‌ಬಾಕ್ಸ್‌ನಲ್ಲಿ ಬೀಳುತ್ತಿದ್ದವು. ಅವುಗಳಲ್ಲಿ ಕೆಲವೊಂದನ್ನು ತೆರೆಯುತ್ತಿದ್ದೆವು. ಹೆಚ್ಚಿನವು ತೆರೆಯದೇ ಟ್ರ್ಯಾಶ್ ಚೀಲಕ್ಕೆ ಬೀಳುತ್ತಿದ್ದವು. ಆದರೆ, ನಾವು ಕೊಡು-ಕೊಳ್ಳುವ ವ್ಯವಹಾರದ ವಿವರಗಳು ನಮ್ಮ ಕಣ್ಣೆದುರು ಪೇಪರ್ ಬಿಲ್‌ನ ಮುಖೇನ ಜಾಹೀರಾಗುತ್ತಿತ್ತು. ಆದರೆ, ಈಗ ಹಾಗಿಲ್ಲ. ಎಲ್ಲವೂ ಪೇಪರ್‌ಲೆಸ್ ಬಿಲ್ ಆದ್ದರಿಂದ, ತಿಂಗಳಿಗೊಮ್ಮೆ "ನಿಮ್ಮ ಬಿಲ್ ರೆಡಿ ಇದೆ" ಎಂದು ಅವರೊಂದು ಇ-ಮೇಲ್ ಕಳಿಸುತ್ತಾರೆ. ಅದು ನಮ್ಮ ಇ-ಮೇಲ್‌ನ ಜಂಕ್ ಅಥವಾ "ಫೋಕಸ್" ಇಲ್ಲದ ಮತ್ತೊಂದು ಫೋಲ್ಡರ್ ಅಥವಾ ಟ್ಯಾಗ್‌ನಲ್ಲಿ ಸೇರಿ ಅಗಾಧವಾದ ಡಿಜಿಟಲ್ ಟ್ರ್ಯಾಶ್ ಎನ್ನುವ ಶರಧಿಯನ್ನು ಸೇರಿಕೊಂಡು ಬಿಟ್ಟಿರುತ್ತದೆ. ಒಂದು ರೀತಿಯಲ್ಲಿ ಈ ರೀತಿಯ ಇ-ಮೇಲ್‌ಗಳು ತಾವು ಹುಟ್ಟುತ್ತಲೇ ಸಮುದ್ರವನ್ನು ಸೇರುವ ನದಿಗಳು ಇದ್ದಹಾಗೆ! ಪೇಪರ್‌ಲೆಸ್ ಎಂದು, ಕಂಪನಿಯವರು ತಮ್ಮ ತಮ್ಮ ಪೇಪರ್-ಪ್ರಿಂಟ್-ಪೋಸ್ಟಲ್ ಖರ್ಚನ್ನೇನೋ ಕಡಿಮೆ ಮಾಡಿಕೊಂಡರು, ಆದರೆ, ಅದರ ಉಳಿತಾಯವನ್ನು ಬಳಕೆದಾರರಾದ ನಮಗೇನಾದರೂ ಹಂಚಿದ್ದಾರೆಯೇ ಎಂದು ಯೋಚಿಸಿಕೊಳ್ಳಬೇಕು. ಕೆಲವು ಕಂಪನಿಗಳು ಹಾಗೆ ಮಾಡುತ್ತಿವೆ. ಜೊತೆಗೆ ಈ ಪೇಪರ್‌ಲೆಸ್ ವ್ಯವಸ್ಥೆಯಿಂದ ನಮ್ಮ ಪೋಸ್ಟಲ್ ವ್ಯವಸ್ಥೆ ಸೊರಗುತ್ತಿದೆ ಎನ್ನುವುದು ಬೇರೆ ವಿಷಯ. ಪರಿಸರ ಪ್ರೇಮಿ ಬದಲಾವಣೆ ಎಂದು ಪೇಪರ್‌ಲೆಸ್ ವಿತರಣೆ ಒಳ್ಳೆಯದೇ, ಆದರೆ ಬಳಕೆದಾರರಿಗೆ ಅದರಿಂದ ಏನಾಗಿದೆ, ಏನಾಗಿಲ್ಲ ಎನ್ನುವುದು ಮುಖ್ಯ.

ವರ್ಷದ ಕೊನೆಯ ಬಿಲ್ ಅನ್ನು ನೋಡುತ್ತಿದ್ದ ಹಾಗೆ, ಅದರಲ್ಲಿ ಹಲವಾರು ರಿಕರಿಂಗ್ ಚಾರ್ಜ್‌ಗಳು ಗಮನಕ್ಕೆ ಬಂದವು. ಯಾವತ್ತೋ ಒಂದು ದಿನ ಫೋಟೋ ಎಡಿಟ್ ಮಾಡಿ ನೋಡುತ್ತೇನೆ ಎಂದು ಟ್ರೈ ಮಾಡಿ ಬದಿಗಿಟ್ಟ App ಒಂದು ಪ್ರತೀ ತಿಂಗಳು ಚಾರ್ಜ್ ಮಾಡುತ್ತಲೇ ಇತ್ತು. ಬ್ಯಾಸ್ಕೆಟ್‌ಬಾಲ್ ಸೀಸನ್ ಮುಗಿದು ಹೋದರೂ ಮತ್ತೆ ನಿಲ್ಲದಂತೆ ಪ್ರತಿತಿಂಗಳೂ ಬಿಲ್ ನಡೆಯುತ್ತಿತ್ತು. ಈ ಮಿಲೆನಿಯಲ್‌ಗಳ ಮಾತು ಕೇಳಿ ಮನೆಯ ಕೇಬಲ್ ಅನ್ನು ಕಟ್ ಮಾಡಿ ಸಂತೋಷ ಪಟ್ಟಿದ್ದೆವಲ್ಲಾ, ಆ ಸಂತೋಷ ಒಂದೇ ಸಮ ಹಾರಿ ಹೋಗುವಂತೆ ಅನೇಕ ಟಿವಿ/ಸ್ಟ್ರೀಮಿಂಗ್‌ಗಳ ಚಾರ್ಜುಗಳಿದ್ದವು. ನನ್ನ ಸ್ನೇಹಿತರ ಕುಟುಂಬದ ಪ್ರತಿ ತಿಂಗಳ ಸ್ಟ್ರೀಮಿಂಗ್ ಸರ್ವೀಸ್ ಬಿಲ್ ಸುಮಾರು 320 ಡಾಲರ್ ಆಗುತ್ತದೆ ಎಂದು ಕೇಳಿ ಹೌಹಾರಿ ಹೋಗಿದ್ದೆ. ಆದರೆ, ನನ್ನ ಖರ್ಚುಗಳೇನೂ ಕಡಿಮೆ ಇರಲಿಲ್ಲ.

ಮೊದಲೆಲ್ಲ ಮನೆ ಮಂದಿ ಎಲ್ಲಾ ಒಂದು ಅಥವಾ ಎರಡು ಟಿವಿಗಳ ಮುಂದೆ ಕುಳಿತು ನಮಗೆ ಬೇಕಾದ ಕಾರ್ಯಕ್ರಮವನ್ನು ನಮ್ಮ ಅಗತ್ಯ ಮತ್ತು ಸಮಯಕ್ಕೆ ತಕ್ಕಂತೆ ನೋಡುತ್ತಿದ್ದೆವು. ಆದರೆ ಈಗ ಹಾಗಿಲ್ಲ, ಮನೆಯಲ್ಲಿರುವ ಜನರೆಲ್ಲರೂ ತಮತಮಗೆ ಬೇಕಾದ ಸ್ಟ್ರೀಮಿಂಗ್ ಸರ್ವೀಸ್ ಅನ್ನು ತಮಗೆ ಬೇಕಾದ ಸಮಯದಲ್ಲಿ ನೋಡಬಹುದಾದ ಸಾಧ್ಯತೆ ಇದೆ. ಕಿವಿಗೆ ಒಂದು ಹೆಡ್‌ಫೋನ್ ಹಾಕಿಕೊಂಡರಂತೂ ಒಂದೇ ಮನೆಯಲ್ಲಿ ಒಂದೇ ಸೋಫಾದಲ್ಲಿ ಕುಳಿತು ಅವರವರಿಗೆ ಬೇಕಾದ ಶೋಗಳನ್ನು ನೋಡಬಹುದಾದ ಭಾಗ್ಯ ಒದಗಿಬಂದಿದೆ! ಕಾಯುವುದು ಎಂದರೆ ಏನು ಎಂದು ತಿಳಿಯದ ಈ ವಾತಾವರಣದಲ್ಲಿ ಒಂದು ವೆಬ್‌ಸೀರಿಸ್ ಅಥವಾ ಸೀರಿಯಲ್‌ನ ಎಲ್ಲ ಎಪಿಸೋಡ್‌ಗಳನ್ನೂ ಒಂದೇ ರಾತ್ರಿಯಲ್ಲಿ ನೋಡಿ (ಮಿತಿಮೀರಿ ತಿಂದು) ಜೀರ್ಣಿಸಿಕೊಳ್ಳಬಹುದಾದ (ಕಕ್ಕಬಹುದಾದ) ವ್ಯವಸ್ಥೆ ಇದೆ.

ಇನ್ನು ಈ ಸರ್ವಿಸುಗಳ ಬಿಲ್ ಅನ್ನು ನೋಡುತ್ತಾ ಬನ್ನಿ: Prime, Netflix, Hulu, Disney+, Showtime, HBO, ESPN, Sling, Zee, Udaya, ಹೀಗೆ ಹಲವಾರು OTT ಸರ್ವೀಸುಗಳು ನಮ್ಮನ್ನು ಚೆನ್ನಾಗಿ ಉಜ್ಜುತ್ತಲೇ ಇವೆ. ವಿಶೇಷವೆಂದರೆ, ಒಂದೇ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಅಕೌಂಟುಗಳು, ಸರ್ವಿಸ್ ಸಬ್‌ಸ್ಕ್ರಿಪ್ಷನ್ನುಗಳು ಇರುವ ಸಾಧ್ಯತೆಯೂ ಇರುವುದರಿಂದ ಒಂದು ಕುಟುಂಬದ ಒಂದು ತಿಂಗಳ ಎಂಟರ್‌ಟೇನ್‌ಮೆಂಟ್ ಬಜೆಟ್ ಈಗ ಮೊದಲಿಗಿಂತಲೂ ಹೆಚ್ಚು ಎನ್ನುವುದು. ಆಗೆಲ್ಲ ಒಂದು ಕೇಬಲ್ ಸರ್ವೀಸ್‌ಗೆ ತಿಂಗಳಿಗೆ ಎಂಬತ್ತು ಅಥವಾ ತೊಂಬತ್ತು ಡಾಲರ್ ಕೊಟ್ಟು ಮುಗಿಸುತ್ತಿದ್ದೆವು. ನೋಡುತ್ತಿದ್ದೆವೋ ಬಿಡುತ್ತಿದ್ದೆವೋ, ಆದರೆ ಲೋಕಲ್ ಚಾನೆಲ್‌ಗಳಿಂದ ಹಿಡಿದು, ವೆದರ್, ಸಿನಿಮಾ, ಆಟೋಟ ಮೊದಲಾದ ಎಲ್ಲ ಸೇವೆಗಳೂ ಒಂದೇ ವ್ಯವಸ್ಥೆಯಲ್ಲಿ ಇರುತ್ತಿತ್ತು. ಈಗ ನಮ್ಮ ಮನೆಯ ಪ್ರತಿ ತಿಂಗಳ ಇಂಟರ್ನೆಟ್ ಬಿಲ್ ಒಂದೇ, ನೂರು ಡಾಲರ್ ಹತ್ತಿರ ಬರುತ್ತದೆ, ಅದರ ಬೆನ್ನೆಲುಬಿನ ಮೇಲೆ ನಿಂತುಕೊಂಡ ಈ ಸ್ಟ್ರೀಮಿಂಗ್ ಸರ್ವೀಸುಗಳು ಒಂದು ರೀತಿ ರಕ್ತ ಪೀಪಾಸುಗಳಾಗಿ ಕಂಡುಬರುತ್ತವೆ. ಜನರನ್ನು ಎಷ್ಟು ಹಿಂಡಿದರೂ ಅಷ್ಟು ಬರಲಿ ಎನ್ನುವ ಮನಸ್ಥಿತಿ ಉಳ್ಳವರ ಹಾಗೆ. ಉದಾಹರಣೆಗೆ, ಜನವರಿ ಬಂದಾಗ ಎಲ್ಲ ಕಡೆಗೆ Gym ಮೆಂಬರ್‌ಶಿಪ್ ಆರಂಭವಾಗುತ್ತವೆ. ಆದರೆ ಫೆಬ್ರುವರಿ ಬರುವಷ್ಟರಲ್ಲಿ ಎಷ್ಟೋ ಜನರು ಹೋಗೋದೇ ಇಲ್ಲ. ಇವರೆಲ್ಲರೂ ಈ ಪೇಪರ್‌ಲೆಸ್ ಬಿಲ್‌ನ ತಂತ್ರಕ್ಕೆ ಬಿದ್ದು ಪ್ರತೀ ತಿಂಗಳೂ ತಮಗೆ ಬೇಡವಾದ ಅಥವಾ ತಾವು ಬಳಸಲಾರದ ಸೇವೆಗೆ ದಂಡ ಕಟ್ಟುವವರೇ!

***

ವರ್ಷದ ಕ್ರೆಡಿಟ್ ಕಾರ್ಡ್ ಬಿಲ್‌ಗಳನ್ನೆಲ್ಲ ನೋಡಿ ಎಲ್ಲಿ ಯಾರು ಯಾರು ಎಷ್ಟು ಎಷ್ಟು ನಮ್ಮನ್ನು ಉಜ್ಜಿಕೊಂಡಿದ್ದಾರೆ ಎಂದು ಒಂದು ಪಟ್ಟಿ ಮಾಡಿಕೊಂಡು ಯಾವುದನ್ನು ಇಟ್ಟುಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂದು ಪಟ್ಟಿ ಮಾಡಿಕೊಂಡೆ. ಮೂರು ಮತ್ತು ಆರು ತಿಂಗಳಲ್ಲಿ ಒಮ್ಮೆಯೂ ಬಳಸದ "ಸೇವೆ"ಗಳನ್ನು ತತ್‌ಕ್ಷಣವೇ ಕ್ಯಾನ್ಸಲ್ ಮಾಡಿದೆ. ಜೊತೆಗೆ ನಮಗೆಲ್ಲ ಟನ್‌ಗಟ್ಟಲೆ ಸ್ಮಾಲ್‌ಪ್ರಿಂಟ್‌ನಲ್ಲಿ Terms & Conditions ಗಳಿಗೆ ಸಹಿ ಹಾಕಿಸಿಕೊಂಡು, ಯಾವತ್ತೋ ಒಂದು ದಿನ ಮಕ್ಕಳು ಪ್ರಯತ್ನಿಸಿ ಮತ್ತೆ ಎಂದೂ ಉಪಯೋಗಿಸದ ರಿಕರಿಂಗ್ ಚಾರ್ಜುಗಳ ಮೇಲೆ ನಮ್ಮಕ್ರೆಡಿಟ್ ಕಾರ್ಡ್ ಕಂಪನಿಯ ಮುಖೇನ ದಾವಾ ಹಾಕಿದೆ. ಅವುಗಳನ್ನ fradulent ಚಾರ್ಜ್ ಅನ್ನದೇ ಇನ್ನೇನೆಂದು ಕರೆಯಬೇಕು? ಒಂದು ಫೋಟೋ ಎಡಿಟ್ ಮಾಡುವ App, ಪ್ರತಿ ತಿಂಗಳಿಗೆ $9.99 ಉಜ್ಜಿಕೊಳ್ಳುತ್ತದೆಯಲ್ಲಾ ಅದನ್ನ ನೋಡಿಯೇ ಹೊಟ್ಟೆ ಉರಿಯುತ್ತದೆ! ಕ್ರೆಡಿಟ್ ಕಾರ್ಡ್ ಕಂಪನಿಯವರು ನನ್ನ ಕರೆಗೆ ಮನ್ನಿಸಿ ಆರು ತಿಂಗಳ ಈ ಎಲ್ಲ ಅನಗತ್ಯ ಚಾರ್ಜುಗಳನ್ನು ಮನ್ನಾ ಮಾಡಿ ನನ್ನ ಹಣ ನನಗೆ ಹಿಂತಿರುಗಿಸಿದರು.

ಜನವರಿಯಿಂದ ಮೊದಲ್ಗೊಂಡು ನನ್ನ ಕ್ರೆಡಿಟ್ ಕಾರ್ಡ್ ಬಿಲ್ ಅನ್ನು ಮತ್ತೆ ಮೊದಲಿದ್ದ ಹಾಗೆ ಪೇಪರ್ ಬಿಲ್‌ಗೆ ಬದಲಾಯಿಸಿದೆ. ಈಗ ಎರಡು ತಿಂಗಳುಗಳಿಂದ ಅವರು ಒಂದು ಬಿಲ್ ಅನ್ನು ಕಳಿಸುತ್ತಾರೆ, ಅದನ್ನು ನಾನು ನೋಡಿ, ನನಗೆ ಗೊತ್ತಿರದ ಯಾವುದೇ ಚಾರ್ಜ್‌ಗಳು ಇವೆಯೇ ಎಂದು ನೋಡಿ ಮತ್ತೆ ರಿಸೈಕಲ್‌ಗೆ ಹಾಕುತ್ತೇನೆ. ಇದು ಪರಿಸರ ಪ್ರೇಮಿಯ ನಡೆ ಎನ್ನುವುದೇ ನನ್ನ ಸಮರ್ಥನೆ. ತಮ್ಮ ತಮ್ಮ 'ಸೇವೆ' ಯನ್ನು ಮಾರುವ ರಕ್ತ ಪೀಪಾಸು ಕಂಪನಿಗಳ ನಡುವೆ ಈ ದೇಶದಲ್ಲಿ, ಅಥವಾ ಇನ್ಯಾವುದೇ ದೇಶದಲ್ಲಿ ನಮ್ಮನ್ನು ನಾವು ಚೆನ್ನಾಗಿ ನೋಡಿಕೊಳ್ಳುವ ಅಗತ್ಯ ದಿನೇದಿನೇ ಹೆಚ್ಚುತ್ತಲೇ ಇದೆ. ಆದ್ದರಿಂದ, ಪ್ರತಿ ಆರೋಗ್ಯವಂತ ಕುಟುಂಬ ಮತ್ತೆ ಹಲವಾರು ರೀತಿಯಲ್ಲಿ ಪರಿಸರ ಸ್ನೇಹಿ ಯೋಜನೆಗಳಿಗೆ ಕೈ ಒಡ್ಡಬಹುದು. ತಮ್ಮ ತಮ್ಮ ಬ್ಯಾಲೆನ್ಸ್‌ಶೀಟ್‌ಗಳನ್ನು ಬೆಳೆಸುವ ಗುರಿಯನ್ನು ಹೊತ್ತ ಬಕಾಸುರ ಕಂಪನಿಗಳು ಪರಿಸರವನ್ನು ಕಾಪಾಡುವುದು ಅಷ್ಟರಲ್ಲಿಯೇ ಇದೆ. ಬಿಲಿಯನ್ ವರ್ಷಗಳಿಂದ ಇನ್ನೂ ಬದುಕಿ ಉಸಿರಾಡುತ್ತಿರುವ ಈ ವಿಶ್ವ ತನ್ನನ್ನು ತಾನು ಚೆನ್ನಾಗಿ ನೋಡಿಕೊಳಬಲ್ಲದು. ಈ ಹುಲು ಮಾನವ ತಾನೇ ಹುಟ್ಟಿಸಿ ಹೊರಹಾಕಿದ ತ್ಯಾಜ್ಯದಿಂದ ತನ್ನನ್ನು ತಾನೇ ಒಂದು ದಿನ ಮುಳುಗಿಸಿಕೊಳ್ಳುತ್ತಾನೆಯೇ ವಿನಾ, ಮಾನವನಿಂದ ಈ ಪರಿಸರ ಉಳಿಯುತ್ತದೆ ಎನ್ನುವುದನ್ನು ಈ ಪರಿಸರವೂ ನಂಬಿಕೊಂಡಿಲ್ಲ.

***

ನಮ್ಮಲ್ಲಿ ಪ್ರತಿ ಎರಡು ಮಂಗಳವಾರಕ್ಕೊಮ್ಮೆ ನಮ್ಮ ಕೌಂಟಿಯವರು ಪ್ರತಿ ಮನೆಯಿಂದ ರಿಸೈಕಲ್ ವಸ್ತುಗಳನ್ನು ಸಂಗ್ರಹಿಸುವುದು ವಾಡಿಕೆ. ನಾನು ನಮ್ಮ ಒಂದು ಬಕೆಟ್‌ನಲ್ಲಿ ಇಟ್ಟಿರುವ ಪ್ಲಾಸ್ಟಿಕ್ ಬಾಟಲ್ ಮತ್ತು ಮೆಟಲ್ ಕ್ಯಾನುಗಳನ್ನು ಹಾಗೂ ಒಟ್ಟಿಗೆ ಮಡಚಿಟ್ಟಿರುವ ರಟ್ಟಿನ ಪೆಟ್ಟಿಗೆಗಳ ಸಂಗ್ರಹವನ್ನು ಉಳಿದವರಿಗೆ ಹೋಲಿಸಿ, ನಮ್ಮ ಬೀದಿಯಲ್ಲಿ ಉಳಿದವರು ಎಷ್ಟು ರಿಸೈಕಲ್ ವಸ್ತುಗಳನ್ನು ಇರಿಸಿರುತ್ತಾರೆ ಎಂದು ನೋಡುತ್ತಿರುತ್ತೇನೆ. ನಮ್ಮ ಪಕ್ಕದ ಮನೆಯವರಲ್ಲಿ ನಮ್ಮ ಮನೆಯಷ್ಟೇ ಜನರಿದ್ದರೂ ಅವರು ರಿಸೈಕಲ್ ಮಾಡುವ ಪ್ಲಾಸ್ಟಿಕ್ ವಸ್ತುಗಳು ನಮಗಿಂತ ಮೂರು ಅಥವಾ ನಾಲ್ಕು ಪಟ್ಟು ಹೆಚ್ಚು. ನಾನು ಒಂದು ದಿನ 'ಏಕೆ ಹೀಗೆ?' ಎಂದು ಕೇಳಿದ್ದಕ್ಕೆ, ಅವರ ಮನೆಯ ಮಕ್ಕಳು ಮನೆಯಲ್ಲಿದ್ದರೂ ಪ್ಲಾಸ್ಟಿಕ್ ಬಾಟಲಿಯಿಂದಲೇ ನೀರನ್ನು ಕುಡಿಯುತ್ತಾರೆ, ಎಷ್ಟು ಹೇಳಿದರೂ ಕೇಳೋದಿಲ್ಲ, ಎಂದರು. ಮನೆಯಲ್ಲಿ ಫಿಲ್ಟರ್ ನೀರಿನ ವ್ಯವಸ್ಥೆ ಇದ್ದರೂ ಹೀಗೆ ಯಥೇಚ್ಛವಾಗಿ ಪ್ಲಾಸ್ಟಿಕ್ ಬಾಟಲಿಯನ್ನು ಬಳಸುವವರು, ತಮ್ಮ ತಮ್ಮ ಪೇಪರ್ ಬಿಲ್ ನಿಲ್ಲಿಸುವುದರಿಂದ ಪರಿಸರವನ್ನು ಕಾಪಾಡುತ್ತಾರೆ ಎಂದು ನಾನಂತೂ ಅಂದುಕೊಂಡಿಲ್ಲ. ನಾವು ಮನೆಯಲ್ಲಿದ್ದಾಗಲೆಲ್ಲ, ಇವತ್ತಿಗೂ ಸ್ಟೀಲ್, ಗಾಜು ಮತ್ತು ಪೇಪರ್ ಲೋಟ ಮತ್ತು ತಟ್ಟೆಗಳನ್ನು ಬಳಸುತ್ತೇವೆಯೇ ಹೊರತು, ಪ್ಲಾಸ್ಟಿಕ್ ವಸ್ತುಗಳಲ್ಲ, ಅದರಿಂದ ನಮ್ಮ ಪ್ಲಾಸ್ಟಿಕ್ ಉತ್ಪನ್ನ ಎಷ್ಟು ಸಾಧ್ಯವೋ ಅಷ್ಟು ಮಿತಿಯಲ್ಲಿದೆ.

ಕ್ಯಾಪಿಟಲಿಸ್ಟಿಕ್ ವ್ಯವಸ್ಥೆಯಲ್ಲಿ, ನಮ್ಮ ಯೋಗಕ್ಷೇಮವನ್ನು ನಾವೇ ನೋಡಿಕೊಳ್ಳಬೇಕಾದ ಅಗತ್ಯವಿರುವುದರಿಂದಲೇ, ಅಮೇರಿಕದ ಮಾತುಕತೆಗಳಲ್ಲಿ "Take care!" ಎನ್ನುತ್ತಾರೆ, ಜೊತೆಗೆ ನಮ್ಮ ಹಣ ಹೀರುವ ರಕ್ತ ಪೀಪಾಸು ಕಂಪನಿಗಳ ಬಿಲ್ ಅನ್ನು ನೋಡುವ ಸಲುವಾಗಿ ಒಂದಿಷ್ಟು ಬಿಲ್‌ಗಳನ್ನು ಪ್ರತಿ ತಿಂಗಳು ಪೇಪರ್ ಮೂಲಕ ತರಿಸಿದರೆ ಅದರಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಯೋಚಿಸದಿರುವುದೇ ಈ ಹೊತ್ತಿನ ತತ್ವ!



# ಅಧ್ಯಾಯ-1: ಪರಿಪೂರ್ಣ ಆರೋಗ್ಯದೊಂದಿಗೆ ನಾನು ಆರಂಭಿಸುತ್ತೇನೆ

ಅನುವಾದ: ದಾಶರಥಿ ಘಟ್ಟು    ಮೂಲ: ಪಾಲ್ ಕಲಾನಿಧಿ *(When Breath Becomes Air)*

ಕರ್ತನ ಕರುಣಾಮಯ ಕೈ ನನ್ನ ಮೇಲೆ ಇತ್ತು; ಅದು ಕರ್ತನ ಆತ್ಮದ ಮೂಲಕ ನನ್ನನ್ನು ಹೊರಗೆ ತಂದು ಸಂಪೂರ್ಣವಾಗಿ ಎಲುಬುಗಳು ತುಂಬಿರುವ ಕಣಿವೆಯ ನಡುವೆ ನನ್ನನ್ನು ಬಿಟ್ಟಿತು.

ಅವುಗಳ ಸುತ್ತಲೂ ನನ್ನನ್ನು ಹಾದುಹೋಗುವಂತೆ ಮಾಡಿತು; ಅಗೋ, ತೆರೆದಿರುವ ಆ ಕಣಿವೆಯಲ್ಲಿ ಎಲುಬುಗಳು ಲೆಕ್ಕವಿಲ್ಲದಷ್ಟು ಬಿದ್ದಿದ್ದವು ಮತ್ತು ಆ ಎಲುಬುಗಳೆಲ್ಲಾ ಒಣಗಿಹೋಗಿದ್ದವು.

ಕರ್ತನು ನನಗೆ ಹೇಳಿದ್ದು-"ಮಾನವ ಪುತ್ರನೇ, ಈ ಎಲುಬುಗಳು ಜೀವಿಸುತ್ತವೆಯೇ?"

-ಎಝೆಕಿಲ್ 37:1-3, ಕಿಂಗ್ ಜೇಮ್ಸ್ ಅನುವಾದ

**ನಾ**ನು ಎಂದಿಗೂ ವೈದ್ಯನಾಗುವುದಿಲ್ಲ ಎಂದು ನನಗೆ ಚೆನ್ನಾಗಿ ಗೊತ್ತಿತ್ತು. ನಾನು ನಮ್ಮ ಮನೆಯ ಅನತಿ ದೂರದಲ್ಲಿದ್ದ ಮರುಭೂಮಿಯ ಉಸುಕಿನ ಮೇಲೆ ಅಂಗಾತ ಅಡ್ಡಾಗಿ ವಿಶ್ರಮಿಸುತ್ತಿದ್ದೆ. ನನ್ನ ಅನೇಕ ನೆಂಟರಂತೆ ವೈದ್ಯನಾಗಿದ್ದ ನನ್ನ ಕಾಕ, ಆ ದಿನ ಬೆಳಿಗ್ಗೆ "ನೀನು ಮುಂದೆ ಏನು ಮಾಡಬೇಕು ಎಂದುಕೊಂಡಿದ್ದೀ?" ಎಂದು ಕೇಳಿದ. ನಾನು ಕಾಲೇಜು ಸೇರಲು ಹೊರಟಿದ್ದುದರಿಂದ ಆ ಪ್ರಶ್ನೆ ಸಹಜವೇ ಆಗಿತ್ತು. ಆದರೆ ನನ್ನ ತಲೆಯಲ್ಲಿ ಅದರ ಬಗ್ಗೆ ಯಾವ ನಿಖರತೆಯೂ ಇರಲಿಲ್ಲ. ನನ್ನ ಉತ್ತರಕ್ಕಾಗಿ ಅವನೇನಾದರೂ ಬಲವಂತ ಮಾಡಿದ್ದಿದ್ದರೆ, ಬಹುಶಃ "ನಾನು ಲೇಖಕನಾಗುತ್ತೇನೆ" ಎಂದಿರುತ್ತಿದ್ದೆ. ಆದರೆ, ನಿಜ ಹೇಳಬೇಕೆಂದರೆ ಆ ಸಮಯದಲ್ಲಿ ಕೆರಿಯರ್ ನ ಯೋಚನೆಗಳು ನನಗೆ ಅಸಂಗತವಾಗಿ ತೋರುತ್ತಿದ್ದವು. ಇನ್ನು ಕೆಲವೇ ವಾರಗಳಲ್ಲಿ ನಾನು ಅರಿಝೋನಾದ ಆ ಪುಟ್ಟ ಪಟ್ಟಣವನ್ನು ಬಿಟ್ಟು ಹೊರಟಿದ್ದೆ. ಕೆರಿಯರ್ ಏಣಿಯನ್ನು ಹತ್ತಲು ಹೊರಟ ಒಬ್ಬ ಯುವಕನಿಗಿಂತಲೂ, ವಿಮೋಚನಾ ವೇಗ (escape velocity)ವನ್ನು ಗಳಿಸಿ ಜ್ವಾಜ್ವಲ್ಯಮಾನವಾಗಿ ಹೊಳೆಯುವ ಅಲೌಕಿಕ ವಿಶ್ವಕ್ಕೆ ಇನ್ನೇನು ಹಾರಲು ಸಿದ್ಧವಿರುವ, ಪರಮಾಣು ಕೇಂದ್ರದ ಸುತ್ತಲೂ ಪರಿಭ್ರಮಿಸುತ್ತಿರುವ ಎಲೆಕ್ಟ್ರಾನಿನಂತೆ ನಾನಿದ್ದೆ.

ಬಟಾಬಯಲಿನ ಆ ಬರಡು ಭೂಮಿಯ ಮೇಲೆ ಮಲಗಿ, ನಾನು 15,000 ಜನ ಸಂಖ್ಯೆಯ ನನ್ನ ಪುಟ್ಟ ಪಟ್ಟಣ ಮತ್ತು 600 ಮೈಲಿ ದೂರದ ಸ್ಟ್ಯಾನ್ಫೋರ್ಡ್ ವಿದ್ಯಾಲಯದ ವಿದ್ಯಾರ್ಥಿನಿಲಯದ ನನ್ನ ರೂಮು ಇವುಗಳ ಬಗ್ಗೆ ಯೋಚಿಸುತ್ತಿದ್ದೆ.

ವೈದ್ಯಕೀಯ ವೃತ್ತಿ ಎಂದರೆ ನನಗೆ ತೋರುವುದು ಕೆಲವು ಕೊರತೆಗಳು- ವಿಶೇಷವಾಗಿ, ನನ್ನ ಬಾಲ್ಯದಲ್ಲಿ ನನ್ನ ತಂದೆ ಬೆಳಗಾಗುವ ಮುನ್ನವೇ ತನ್ನ ಕೆಲಸಕ್ಕೆ ಹೋಗಿ, ಕತ್ತಲೆಯಾದ ಮೇಲೆ ಮನೆಗೆ ಬರುತ್ತಿದ್ದುದು. ನಾನು ಹತ್ತು ವರ್ಷದವನಿದ್ದಾಗ, ನನ್ನ ತಂದೆ ನಮ್ಮ ಕುಟುಂಬವನ್ನು ನ್ಯೂಯಾರ್ಕಿನ ಬ್ರಾಂಕ್ಸ್ ವಿಲ್ ನಿಂದ ಅರಿಝೋನಾದ ಕಿಂಗ್ ಮ್ಯಾನ್ ಗೆ ಸ್ಥಳಾಂತರಿಸಿದರು. ಉತ್ತರ ಮ್ಯಾನ್ಹಾಟನ್ ನ ಪ್ರತಿಷ್ಠಿತ ಬಡಾವಣೆಯಿಂದ ನಾವೆಲ್ಲಾ ಎರಡು ಪರ್ವತ ಶ್ರೇಣಿಗಳ ನಡುವೆ ಚಾಚಿಕೊಂಡ ಮರುಭೂಮಿಯ ಕೊಳ್ಳದಲ್ಲಿದ್ದ ಈ ಪಟ್ಟಣದಲ್ಲಿ ನೆಲೆಸಿದೆವು. ಈ ದಾರಿಯಲ್ಲಿ ಹೋಗುವವರು ತಮ್ಮ ವಾಹನಗಳಿಗೆ 'ಪೆಟ್ರೋಲ್ ತುಂಬಿಸಲು ಅನುಕೂಲವಿರುವ ಜಾಗ' ಎಂದು ಮಾತ್ರ ಈ ಸ್ಥಳದ ಬಗ್ಗೆ ಹೊರ ಜಗತ್ತಿಗೆ ಗೊತ್ತು. ಎಲ್ಲಾ ಋತುಗಳಲ್ಲೂ ಲಭ್ಯವಿರುವ ಸೂರ್ಯನ ಬಿಸುಪು ಮತ್ತು ಕಡಿಮೆ ಜೀವನ ವೆಚ್ಚ (cost of living) ನಮ್ಮ ತಂದೆಯನ್ನು ಈ ನಗರಕ್ಕೆ ಆಕರ್ಷಿಸಿತು. ಇಲ್ಲದಿದ್ದರೆ 14, 10, ಮತ್ತು 8 ವರ್ಷ ವಯಸ್ಸಿನ ತನ್ನ ಮಕ್ಕಳು ಅವರಿಗಿಷ್ಟವಾದ ಕಾಲೇಜಲ್ಲಿ ಕಲಿಯಲು ಆಗುವ ವೆಚ್ಚವನ್ನು ಅವನು ಹೇಗೆ ತಾನೇ ಭರಿಸಲು ಸಾಧ್ಯ? ಮತ್ತೂ ಮುಖ್ಯವಾಗಿ ತನ್ನದೇ ಆದ ಕಾರ್ಡಿಯಾಲಜಿ ಪ್ರಾಕ್ಟೀಸನ್ನು ಆರಂಭಿಸುವ ಅವಕಾಶವೂ ಅವನನ್ನು ಈ ನಗರದೆಡೆಗೆ ಸೆಳೆಯಿತು. ತನ್ನ ರೋಗಿಗಳ ಬಗೆಗಿನ ಅಪಾರ ಕಾಳಜಿ ಮತ್ತು ಸಮರ್ಪಣೆಗಳಿಂದ ಅವನು ಈ ಜಾಗದ ಜನರ ಗೌರವವನ್ನು ಬಲು ಬೇಗ ಗಳಿಸಿಕೊಂಡ. ತಡ ರಾತ್ರಿಗಳಲ್ಲಿ ಮತ್ತು ವಾರದ ರಜಾ ದಿನದಲ್ಲಿ ಅವನನ್ನು ನಾವು ನೋಡುತ್ತಿದ್ದುದಷ್ಟೆ. ಅವನು ಮಧುರ ಪ್ರೇಮ, ಕಠೋರ ಆದೇಶ ಮತ್ತು ಪ್ರೀತಿಯ ಅಪ್ಪುಗೆಗಳ ಮಿಶ್ರಣವಾಗಿದ್ದ. "ಯಾವುದರಲ್ಲೇ ಆಗಲಿ 'ನಂಬರ್ ಒನ್' ಆಗುವುದು ಬಹಳ ಸುಲಭ. ನಂಬರ್ ಒನ್ ವ್ಯಕ್ತಿ ಯಾರು ಎಂಬುದನ್ನು ಹುಡುಕು, ಅವನಿಗಿಂತ ಒಂದು ಅಂಕ ಹೆಚ್ಚು ಗಳಿಸು" ಎಂಬ ಘೋಷಣೆಗಳನ್ನು ಪದೇ ಪದೇ ಮಾಡುತ್ತಿದ್ದ. ಅವನು ತನ್ನ ಮನಸ್ಸಿನಲ್ಲಿ ಒಂದು ಒಪ್ಪಂದಕ್ಕೆ ಬಂದಂತಿತ್ತು...ಅದೆಂದರೆ ಇಂತಹ ಪ್ರಾಮಾಣಿಕ ಆದೇಶಗಳನ್ನು ಕೊಡುವುದರಿಂದ ತಾನು ಎಲ್ಲಾ ಜವಾಬ್ದಾರಿಯುತ ತಂದೆಯರ ಸಮಾನದಲ್ಲಿದ್ದೇನೆ ಎಂಬ ಭಾವನೆ. ಇವೆಲ್ಲದರಿಂದಲೂ ನಾನು ತಿಳಿದುಕೊಂಡಿದ್ದೇನೆಂದರೆ, 'ವೈದ್ಯನಾಗಲು ತೆರಬೇಕಾದ ಬೆಲೆ, ಅವನ ಬದುಕಿನ ರೀತಿ ಮತ್ತು ಅವನ ಘೋಷಣೆಗಳ ಸಾಧನೆ ಆಗಿದ್ದರೆ, ಆ ಬೆಲೆ ತುಂಬಾ ಹೆಚ್ಚು' ಎಂದು.

ನಗರ ವಲಯದಿಂದ ಹೊರಗೆ, ಸರ್ಬಿಟ್ ಪರ್ವತಗಳ ತಪ್ಪಲಲ್ಲಿ, ಮೆಸ್ಕ್ವಿಟ್, ಟಂಬಲ್ ವೀಡ್ ಮತ್ತು ದೋಣಿಯ ಹುಟ್ಟಿನ ಆಕಾರದ ಪಾಪಾಸು ಕಳ್ಳಿಗಳಿಂದ ಅಲಂಕಾರಗೊಂಡ ಕೆಂಪು ಬಂಡೆಗಳ ಬರಡು ಭೂಮಿಯ ಮಧ್ಯೆ ಇದ್ದ ನಮ್ಮ ಮನೆ, ನಾನು ಬಿದ್ದುಕೊಂಡ ಜಾಗದಿಂದ ಚೆನ್ನಾಗಿ ಕಾಣುತ್ತಿತ್ತು. ಧೂಳು ತುಂಬಿದ ಬೃಹತ್ ಸುಂಟರಗಾಳಿಗಳು ಅಗೋಚರ ಪಿಶಾಚಿಗಳಂತೆ ಇಲ್ಲಿ ಎಲ್ಲಿಂದಲೋ ಉದ್ಭವವಾಗಿ, ದೃಷ್ಟಿಯನ್ನು ಮಂಕಾಗಿಸಿ, ಎಲ್ಲಿಯೋ ಅದೃಶ್ಯವಾಗಿಬಿಡುತ್ತವೆ. ಬಯಲು ವಿಸ್ತಾರವಾಗಿ ಹಬ್ಬಿ, ದೂರದಲ್ಲೆಲ್ಲೋ ಧಡಕ್ಕನೆ ಪಾತಾಳಕ್ಕೆ ಕುಸಿದು ಹೋಗುತ್ತದೆ. ನಮ್ಮ ನಾಯಿಗಳಾದ ಮ್ಯಾಕ್ಸ್ ಮತ್ತು ನಿಪ್ ಗೆ, ಈ ಬೆಟ್ಟ ಗುಡ್ಡಗಳಲ್ಲಿ ಅಂಡಲೆಯುವ ತಮ್ಮ ನಿರಾಳ ಸ್ವಾತಂತ್ರ್ಯ ಒಂದಿಷ್ಟೂ ಬೇಸರ ಬರಿಸಿಲ್ಲ. ಪ್ರತಿ ದಿನ ಆಯಾಸವಿಲ್ಲದೆ ಸಾಹಸ ಯಾತ್ರೆಯನ್ನು ಕೈಗೊಂಡು,

ಅವು ಜಿಂಕೆಯ ಕಾಲನ್ನೋ, ಹೆಮ್ಮೊಲದ ಅಳಿದುಳಿದ ಅಂಗಗಳನ್ನೋ, ಬಿಸಿಲಿಗೆ ಬಣ್ಣಗೆಟ್ಟ ಕುದುರೆಯ ತಲೆ ಬುರುಡೆಯನ್ನೋ, ತೋಳದ ದವಡೆ ಮೂಳೆಯನ್ನೋ ತಮ್ಮ ಬಾಯಿ ತೊಡವಿಗಾಗಿ ಹೊತ್ತುಕೊಂಡು ಬರುತ್ತವೆ.

ನಾನು ಮತ್ತು ನನ್ನ ಗೆಳೆಯರು ಕೂಡಾ ಇಲ್ಲಿನ ಈ ಸ್ವಾತಂತ್ರ್ಯವನ್ನು ಇಷ್ಟಪಡುತ್ತೇವೆ. ಅಪರಾಹ್ನದಲ್ಲಿ ನಾವು ವಿವಿಧ ಪ್ರಾಣಿಗಳ ಎಲುಬುಗಳು ಮತ್ತು ಅಪರೂಪದ ಮರಳುಗಾಡಿನ ಕೊಲ್ಲಿಗಳ ಅನ್ವೇಷಣೆಯಲ್ಲಿ ಸುತ್ತಾಡಿದ ದಿನಗಳಿಗೆ ಲೆಕ್ಕವೇ ಇಲ್ಲ. ಈ ಮುಂಚಿನ ವರ್ಷಗಳನ್ನು ನಾನು ವಿರಳ ಕಾಡುಗಳಿಂದ ಆವೃತವಾದ ನಾರ್ತ್ ಈಸ್ಟ್ ನ ಉಪನಗರಗಳಲ್ಲಿ ಕಳೆದಿದ್ದೆ. ಅಲ್ಲೆಲ್ಲಾ ರಸ್ತೆಯ ಇಕ್ಕೆಲೆಗಳಲ್ಲಿ ಸಾಲು ಮರಗಳಿದ್ದವು. ಆ ಹಿನ್ನೆಲೆಯಲ್ಲಿ, ಈಗಿರುವ ವಿಂಡೀ ಮರುಭೂಮಿ ನನ್ನಲ್ಲಿ ವಿಚಿತ್ರ ಆಕರ್ಷಣೆ ಮೂಡಿಸಿತ್ತು. ನನಗಾಗ ಹತ್ತು ವರ್ಷ ವಯಸ್ಸು. ನಾನೊಬ್ಬನೇ ಬರಡು ಭೂಮಿಯ ಕಲ್ಲು ಬಂಡೆಗಳಲ್ಲಿ ಅಲೆದಾಡಲು ಹೊರಟಿದ್ದೆ. ಆ ನನ್ನ ಮೊದಲ ಚಾರಣದಲ್ಲಿ ನನಗೊಂದು ಬೇಸಾಯಗಾರರು ಉಪಯೋಗಿಸುವ ವಂದರಿ ಸಿಕ್ಕಿತು. ನಾನು ನನ್ನ ಬೆರಳುಗಳಿಂದ ಅದನ್ನು ಬೆದಕಿ, ಅದರ ಮುಚ್ಚಳವನ್ನು ಕಷ್ಟಪಟ್ಟು ಎಬ್ಬಿಸಿದೆ. ಅಲ್ಲಿ, ನನ್ನ ಮುಖದಿಂದ ಕೆಲವೇ ಇಂಚುಗಳಲ್ಲಿ, ಬೆಳ್ಳಿಯ ಬಣ್ಣದ ರೇಷ್ಮೆ ಎಳೆಗಳ ಮೂರು ಜೇಡನ ಬಲೆಗಳು. ಪ್ರತಿ ಬಲೆಯಲ್ಲೂ ಅಡ್ಡಾದಿಡ್ಡಿ ಕಾಲು ಹಾಕಿ ಓಡಾಡುತ್ತಿದ್ದ ಥಳಥಳಿಸುವ ಉಬ್ಬಿದ ಕಪ್ಪು ಕಾಯಗಳು. ಅವುಗಳಲ್ಲಿ ಎದೆ ಝಲ್ಲೆನಿಸುವ ರಕ್ತ ವರ್ಣದ ಅವರ್ ಗ್ಲಾಸ್ ಪ್ರಜ್ವಲಿಸುತ್ತಿತ್ತು. ಪ್ರತಿ ಜೇಡದ ಹತ್ತಿರ, ತುಡಿಯುತ್ತಿರುವ ಬಿಳಚಿಕೊಂಡ ಚೀಲದಿಂದ ಅಸಂಖ್ಯಾತ 'ಬ್ಲಾಕ್ ವಿಡೋ' ಜೇಡಗಳು ಜನ್ಮ ತಾಳುತ್ತಿದ್ದವು. ಭಯದಿಂದ ನಡುಗುತ್ತಾ ನಾನು ವಂದರಿಯ ಮುಚ್ಚಳವನ್ನು ಧಡಾರನೆ ಮುಚ್ಚಿದೆ. ನಾನು ನಡುಗಿ ಹಿಂದಕ್ಕೆ ಮುಗ್ಗರಿಸಿದೆ. "ಬ್ಲಾಕ್ ವಿಡೋ ಜೇಡ ಕಚ್ಚುವುದಕ್ಕಿಂತ ಮಾರಣಾಂತಕ ಸಂಗತಿ ಇನ್ಯಾವುದೂ ಇಲ್ಲ" ಎಂಬಂತಹ ಹಳ್ಳಿಗಾಡಿನ ಎಚ್ಚರಿಕೆ, ಆ ಜೇಡಗಳ ಅಮಾನವೀಯ ಮನೋಭಾವ, ಅವುಗಳ ಪ್ರಜ್ವಲಿಸುವ ಕಡುಗಪ್ಪು ಬಣ್ಣ ಮತ್ತು ಅವುಗಳ ದೇಹದಲ್ಲಿ ಎದ್ದು ಕಾಣುವ ಹೊಳೆಯುವ ಕೆಂಪು ಅವರ್ ಗ್ಲಾಸ್ - ಇವುಗಳೆಲ್ಲದರ ಮಿಶ್ರ ಭೀತಿಯಿಂದ ನಾನು ತತ್ತರಿಸಿ ಹೋದೆ. ಅನೇಕ ವರ್ಷ ಅದು ದುಃಸ್ವಪ್ನದಂತೆ ನನ್ನನ್ನು ಕಾಡುತ್ತಲೇ ಇತ್ತು.

ಈ ಮರುಭೂಮಿ ನಮ್ಮಲ್ಲಿ ಭೀತಿಯ ಸರಣಿಯನ್ನೇ ಅನಾವರಣಗೊಳಿಸಿತು: ವಿಷಪೂರಿತ ಟರಂಟುಲಾ ಜೇಡಗಳು, ಬಂಡೆಯ ಸಂದುಗಳಲ್ಲಿ ಅಡಗಿಕೊಂಡಿರುವ ಕಪ್ಪು ಚೇಳುಗಳು, ವುಲ್ಫ್ ಸ್ಪೈಡರ್, ಭೀಭತ್ಸವಾಗಿ ಕಾಣುವ ತೊಗಟೆ ಚೇಳುಗಳು, ಚಾವಟಿ ಚೇಳುಗಳು, ಸಹಸ್ರಪಾದಿಗಳು ಮತ್ತು ಡೈಮಂಡ್ ಬ್ಯಾಕ್, ಸೈಡ್ ವಿಂಡರ್, ಹಾಗೂ ಮೊಜಾವೆ ಗ್ರೀನ್ ಸರ್ಪಗಳು- ಒಂದೇ, ಎರಡೇ? ದಿನಗಳೆದಂತೆ ನಮಗೆ ಈ ಜಂತುಗಳ ಇರವು ಅಭ್ಯಾಸವಾಗಿ ಹೋಯಿತು. ಒಂದು ದಿನ ನಾನು ಮತ್ತು ನನ್ನ ಗೆಳೆಯರು ಒಂದು ವುಲ್ಫ್ ಸ್ಪೈಡರ್ ನ ಗೂಡನ್ನು ಕಂಡಾಗ, ದೊಡ್ಡ ಗೊದ್ದವನ್ನು ಅದರ ಎಲ್ಲೆಯಲ್ಲಿ ಎಸೆದು, ಆ ಗೊದ್ದ ಜೇಡನ ವ್ಯೂಹದಿಂದ ತಪ್ಪಿಸಿಕೊಳ್ಳಲು ಪರದಾಡುವುದನ್ನೂ, ಬಲೆಯ ಎಳೆಗಳಲ್ಲಿ ಅದರ ಪರದಾಟ ಉಂಟುಮಾಡುವ ಕಂಪನವನ್ನೂ ನೋಡುತ್ತಾ, ಜೇಡ ಆ ಗೂಡಿನ ಕಂದರದಿಂದ ಮಿಂಚಿನಂತೆ ಪ್ರತ್ಯಕ್ಷವಾಗಿ ದುರ್ದೈವೀ ಗೊದ್ದವನ್ನು ತನ್ನ ದವಡೆಗಳಿಂದ ಸೆಳೆದುಕೊಳ್ಳುವ ಆಸ್ಫೋಟಕ ಕ್ಷಣವನ್ನು ನಿರೀಕ್ಷಿಸುತ್ತಿದ್ದೆವು.

ಈ "ಹಳ್ಳಿಗಾಡಿನ ಸಂಗತಿಗಳು" ನಗರ ಪ್ರದೇಶದ ಐತಿಹ್ಯಗಳಿಗೆ ನನ್ನ ಗ್ರಾಮೀಣ ಪ್ರದೇಶದ ಸಹೋದರ ಸಂಬಂಧಿಯಾಯಿತು. ನಾನು ಇಂತಹ ಕಪೋಲ ಕಲ್ಪಿತ ಸಂಗತಿಗಳನ್ನು ತಿಳಿದುಕೊಳ್ಳಲು ಪ್ರಾರಂಭಿಸಿದಾಗ, ಈ ಮರುಭೂಮಿಯ ಜಂತುಗಳಿಗೆ ನನ್ನ ಕಾಲ್ಪನಿಕ ಪ್ರಪಂಚ ಅಮಾನುಷ ಶಕ್ತಿಗಳನ್ನು ಆರೋಪಿಸಿತು. ಹೀಗಾಗಿ, ವಿಷಪೂರಿತ 'ಗಿಲಾ' ದೈತ್ಯ ಹಲ್ಲಿ ಗ್ರೀಕ್ ಪುರಾಣದ 'ಗೋರ್ಗಾನ್' ದೈತ್ಯನಿಗಿಂತ ಕಡಿಮೆಯೆಂದು ಅನಿಸಲಿಲ್ಲ. ಕೆಲವು ಕಾಲ ಈ ಮರಳುಗಾಡಲ್ಲಿ ಬದುಕಿದ ಮೇಲೆ, ಹಳ್ಳಿಗಾಡಿನ ಕೆಲವು 'ಸಂಗತಿಗಳು' ಬರೀ ಕಟ್ಟು ಕಥೆಗಳು ಎಂದು ಗೊತ್ತಾಯಿತು. ಅಂತಹ ಒಂದು ಉದಾಹರಣೆ-ತಲೆಯೆಲ್ಲಾ ಕೊಂಬಿರುವ ಮೊಲದ ಮುಖದ ಜಾಕಲೋಪ್. ಇದು ನಗರವಾಸಿಗಳಿಗೆ ಭಯ ಹುಟ್ಟಿಸಿ ಮಜಾ ತೆಗೆದುಕೊಳ್ಳಲು ಸ್ಥಳೀಯರು ಹುಟ್ಟಿಸಿದ ಕಾಲ್ಪನಿಕ ಮೃಗ. "ಚಿರತೆಯ ಒಂದು ಪ್ರಭೇಧ ಕಳ್ಳಿ ಪೊದೆಗಳೊಳಗೆ ವಾಸಿಸುತ್ತದೆ. ಅದು ತನ್ನ ಬಲಿಯನ್ನು ಹಿಡಿಯಲು ಗಾಳಿಯಲ್ಲಿ 10 ಅಡಿ ಚಿಮ್ಮುತ್ತದೆ" ಎಂದು ಜರ್ಮನಿಯಿಂದ ಬಂದಿದ್ದ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲು, ನಾನೊಮ್ಮೆ ಇಡೀ ಒಂದು ಗಂಟೆ ವ್ಯಯಿಸಿದ್ದೆ. ಆದರೆ ಮರಳುಗಾಡಿನ ಕಥೆಗಳಲ್ಲಿ ಸುಳ್ಳು ಯಾವುದು, ಸತ್ಯ ಯಾವುದು ಎಂಬುದನ್ನು ತಿಳಿಯುವುದೇ ಕಷ್ಟ. ಅವರು ಹೇಳುವ ಪ್ರತಿ ಅಸಂಬದ್ಧ ಸಂಗತಿಯ ಜೊತೆಗೆ ಒಂದು ಸಧೃಡ ಸತ್ಯ ಸಂಗತಿಯೂ ಇರುತ್ತದೆ. "ಬೂಟುಗಳನ್ನು ಹಾಕಿಕೊಳ್ಳುವ ಮುಂಚೆ ಒಳಗಡೆ ಚೇಳು ಸೇರಿಕೊಂಡಿಲ್ಲ ಎಂಬುದನ್ನು ದೃಢಪಡಿಸಿಕೋ" ಎಂಬುದು ಅಂತಹ ಒಂದು ಒಳ್ಳೆಯ ಉದಾಹರಣೆ.

ನಾನು ಹದಿನಾರನೇ ವಯಸ್ಸಿನಲ್ಲಿದ್ದಾಗ, ನನ್ನ ತಮ್ಮ ಜೀವನ್ ನನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಸ್ಕೂಲಿಗೆ ಬಿಡುವುದು ನನ್ನ ಕೆಲಸವಾಗಿತ್ತು. ಒಂದು ದಿನ ಬೆಳಿಗ್ಗೆ, ಎಂದಿನಂತೆಯೇ ನಾನು ಹೊರಡುವುದು ತಡವಾಗಿತ್ತು. ಮನೆಯ ಬಾಗಿಲಿನ ಹತ್ತಿರ ನಿಂತು ಜೀವನ್ ಎಂದಿನಂತೆ ನನ್ನ ಮೇಲೆ ಕಿರಿಚಾಡುತ್ತಿದ್ದ. "ಇವತ್ತೂ ನಿನ್ನಿಂದಾಗಿ ನನಗೆ ಡಿಟೆನ್ಷನ್ ಸಿಗುತ್ತದೆ" ಎಂದು ಒದರುತ್ತಿದ್ದ. ನಾನು ಕೈಗೆ ಸಿಕ್ಕ ಬಟ್ಟೆ ಹಾಕಿಕೊಂಡು, ಮೆಟ್ಟಲುಗಳನ್ನು ಧಡ ಧಡ ಇಳಿದು, ಮುಂದಿನ ಬಾಗಿಲನ್ನು ಧಡಾರನೆ ತೆರೆದು, ಹೊರಗೆ ಓಡಿದಾಗ... ಮಂಪರಿನಲ್ಲಿ ಮಲಗಿದ್ದ ಆರಡಿ ಉದ್ದದ ಬುಡಬುಡಿಕೆ ಹಾವಿನ (rattle snake) ಮೇಲೆ ಹೆಜ್ಜೆ ಇಟ್ಟೇ ಬಿಡುತ್ತಿದ್ದೆ. ಬುಡಬುಡಿಕೆ ಹಾವನ್ನು ಸಾಯಿಸಿದರೆ, ಅದರ ಸಂಗಾತಿ ಮತ್ತು ಮರಿಗಳು ಮನೆಗೆ ಬಂದು, ಅಲ್ಲೇ ಹುತ್ತ ಕಟ್ಟಿಕೊಂಡು ಶಾಶ್ವತವಾಗಿ ವಾಸಿಸುತ್ತವೆ ಎಂಬ 'ಕಂಟ್ರೀ ಫ್ಯಾಕ್ಟ್' ಈ ಕಡೆ ಪ್ರಚಲಿತದಲ್ಲಿದೆ. ಈಗೇನು ಮಾಡುವುದು? ಅದನ್ನು ಸಾಯಿಸಿದರೆ, ಅಂತಹ ಎಷ್ಟು ಹಾವುಗಳು ನಮ್ಮ ಮನೆ ಹುಡುಕಿಕೊಂಡು ಬರುತ್ತವೆಯೋ ಗೊತ್ತಿಲ್ಲ! ನಾವು ಅದನ್ನು ಹೇಗಾದರೂ ಮಾಡಿ ಬಯಲಿಗೆ ಬಿಸಾಕಲು ನಿರ್ಧರಿಸಿದೆವು. ನಮ್ಮಲ್ಲೊಬ್ಬ ಸನಿಕೆ ಹಿಡಿದ, ಇನ್ನೊಬ್ಬ ತೋಟದ ಕೈಗವಸು ತೊಟ್ಟು ದಿಂಬಿನ ಚೀಲವನ್ನು ಹಿಡಿದು ನಿಂತ. ನಾವಿಬ್ಬರೂ ಹರ ಸಾಹಸ ಮಾಡಿ, ಆ ಹಾವು ದಿಂಬಿನ ಚೀಲದೊಳಕ್ಕೆ ಹೋಗುವಂತೆ ಮಾಡಿದೆವು. ನಂತರ, ನಾನು ಒಲಿಂಪಿಕ್ ಹ್ಯಾಮರ್ ಆಟಗಾರನಂತೆ ಆ ಚೀಲವನ್ನು ಬೀಸಿ ಮನೆಯ ಹೊರಗಿನ ಬಯಲಿನಲ್ಲಿ ಆದಷ್ಟು ದೂರಕ್ಕೆ ಒಗೆದೆ. ಅಮ್ಮನಿಂದ ಬಯ್ಸಿಕೊಳ್ಳುವುದನ್ನು ತಪ್ಪಿಸಿಕೊಳ್ಳಲು, ಮಧ್ಯಾಹ್ನ ಹೋಗಿ ಆ ದಿಂಬಿನ ಚೀಲವನ್ನು ಅಲ್ಲಿಂದ ಮರೆಯದೆ ತಂದಿಡಬೇಕು ಎಂದುಕೊಂಡೆ. **(ಸಶೇಷ)**



# ಆಗು ನೀ ಅದ್ಭುತ ವಾಗ್ಮಿ


**ಅರ್ಚನಾ ಆಚಾರ್ಯ** , ನ್ಯೂ ಜೆರ್ಸಿ

"ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ" ವಂತೆ.

ಮಾತನಾಡುವುದು ಒಂದು ಅದ್ಭುತ ಕಲೆ. ನಮ್ಮ ದೈನಂದಿನ ಚಟುವಟಿಕೆಗಳಲ್ಲಿ, "ಹಾಗೆ ಸುಮ್ಮನೆ" ಯಥೇಚ್ಛವಾಗಿ, ಮಾತನಾಡುವುದು ಸುಲಭವಿರಬಹುದು. ಆದರೆ ಎಲ್ಲರ ಸಮ್ಮುಖದಲ್ಲಿ, ಎಲ್ಲರನ್ನುದ್ದೇಶಿಸಿ ಮಾತನಾಡಲು ಹಿಂಜರಿಯುವುದು ಸರ್ವೇಸಾಮಾನ್ಯ. ಹಾಗಿರುವಾಗ, ಅಮೇರಿಕಾದಲ್ಲಿರುವ, ಆಂಗ್ಲಭಾಷೆಯನ್ನೇ ಹೆಚ್ಚಾಗಿ ಕೇಳಿ-ಮಾತನಾಡಿ ರೂಡಿಯಾಗಿರುವ ಕನ್ನಡ ಶಾಲೆಯ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಸಂಭಾಷಿಸಲು ಇನ್ನೂ ಕಠಿಣವಾಗಿರಬಹುದಲ್ಲವೇ? ಈ ನಿಟ್ಟಿನಲ್ಲಿ ನ್ಯೂ ಜೆರ್ಸಿ ಬೃಂದಾವನ ಕನ್ನಡ ಸಂಘದ 'ಬೃಂದಾವನ ಕನ್ನಡ ಕಲಿಸೋಣ ಶೈಕ್ಷಣೀಯ ಸರಣಿ'-ಸಂಕ್ಷಿಪ್ತವಾಗಿ 'ಬೃಂಕ್ಷೈ ಸರಣಿ'ಯ ಮೂರನೆಯ ಕಾರ್ಯಕ್ರಮವಾಗಿ ಕಳೆದ ನವೆಂಬರ್ ೨೧ರಂದು "ಆಗು-ನೀ ಅದ್ಭುತ ವಾಗ್ಮಿ" ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಬೃಂಕ್ಷೈ- ಸರಣಿ ಆರಂಭವಾದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿಕೊಟ್ಟು ಎಲ್ಲರನ್ನೂ ಕಾರ್ಯಕ್ರಮಕ್ಕೆ ಸ್ವಾಗತಿಸಲಾಯಿತು. ತದನಂತರ ಈ ಕಾರ್ಯಕ್ರಮದಲ್ಲಿ ೫-೮ ವರ್ಷದ ಮಕ್ಕಳು, ಶ್ರೀಮತಿ ರೋಹಿಣಿ ಮಹೇಶ್ ಹಾಗೂ ಶ್ರೀಮತಿ ಪೂರ್ಣಿಮಾ ರಮೇಶ್ ಅವರೊಡನೆ ತಮ್ಮ ಕಾಲ್ಪನಿಕ ಕಥಾಲೋಕದಲ್ಲಿ ಸುಮಾರು ಒಂದು ಗಂಟೆಯ ಕಾಲ ಭಾಗಹಿಸಿದರೆ, ೯ ವರ್ಷದ ಮೇಲ್ಪಟ್ಟ ವಿದ್ಯಾರ್ಥಿಗಳು, ಶ್ರೀ ಸತ್ಯನಾರಾಯಣ್ ಕೃಷ್ಣಮೂರ್ತಿ ಹಾಗೂ ಶ್ರೀಮತಿ ಉಮಾ ಮೂರ್ತಿಯವರ ಮಾರ್ಗದರ್ಶನದಲ್ಲಿ ಸುಲಲಿತವಾಗಿ ವಿಷಯಾಧಾರಿತ ಭಾಷಣ ಮಾಡುವ ಬಗ್ಗೆ ತಿಳಿದುಕೊಂಡರು.

ಆಂಗ್ಲ ಭಾಷೆಯಲ್ಲಿ ಅರಳು ಹುರಿದಂತೆ ಮಾತನಾಡುವ ಅಮೆರಿಕಾದ ಮಕ್ಕಳು, ಮನೆಯಲ್ಲಿ ಹಾಗೂ ಕನ್ನಡ ಶಾಲೆಗಳಲ್ಲಿ ಮಾತ್ರ ಉಪಯೋಗಿಸುವ ಮಾತೃಭಾಷೆ-ಕನ್ನಡದಲ್ಲಿ, ವಿವಿಧ ವಿಷಯಗಳ ಕುರಿತು, ಈ ಕಾರ್ಯಾಗಾರದಲ್ಲಿ ಕಲಿತ ಮಾರ್ಗಸೂಚಿಗಳನ್ನು ಅಳವಡಿಸಿ, ಸುಲಭವಾಗಿ ಮಾತನಾಡಿ "ಅದ್ಭುತ ವಾಗ್ಮಿ" ಎನಿಸಿಕೊಂಡರು. ಯಶಸ್ವಿಯಾಗಿ ನಡೆದ ಈ ಕಾರ್ಯಾಗಾರದ ಬಗ್ಗೆ ಹಲವು ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತ ಪಡಿಸಿದರು. ಅವರಲ್ಲಿ ಕೆಲವರ ಅನಿಸಿಕೆಗಳು .




ಕಥೆ ಹೇಳೋದು ಕಲಿತ್ವಿ

ನನಗೆ 'ಆಗು ನೀ ಅದ್ಭುತ ವಾಗ್ಮಿ' ಕಾರ್ಯಾಗಾರ ತುಂಬಾ ಇಷ್ಟ ಆಯ್ತು. ಯಾಕೆಂದ್ರೆ, ಅದರಲ್ಲಿ ತುಂಬ ಮಜವಾದ ಚಟುವಟಿಕೆ ಮಾಡಿದ್ವಿ. ನಾವು ಚಿತ್ರ ನೋಡಿ ಕಥೆ ಹೇಳೋದು ಕಲಿತ್ವಿ. ನಮ್ಮ ಶಿಕ್ಷಕರು ಕಥೆನಾ ಇನ್ನು ಚೆನ್ನಾಗಿ ಹೇಳೋಕ್ಕೆ ಸಲಹೆಗಳು ಕೊಟ್ಟರು. ಕಥೆ ಹೇಳುವಾಗ ಅನಿಮೇಷನ್ ಉಪಯೋಗಿಸೋದು, ಕಥೆಗೆ ತಕ್ಕಂತೆ ಭಾವನೆ ಮತ್ತೆ ಧ್ವನಿ ಬದಲಾಯಿಸುವುದು, ಆಮೇಲೆ ತಲೆಯಲ್ಲಿ ಚಿತ್ರ ಮಾಡುವ ವಿವರಗಳನ್ನು ಉಪಯೋಗಿಸೋದನ್ನು ಹೇಳಿಕೊಟ್ಟರು. ಅದಕ್ಕೆ ಈ ಕಾರ್ಯಾಗಾರ ತುಂಬ ಚೆನ್ನಾಗಿತ್ತು.

- ಶ್ರೇಯಾ ಸತೀಶ್ (ಹಲ್ಸ್‌ಬರೋ ಕನ್ನಡ ಶಾಲೆ)






ಬೃಂಕ್ಷೈ ಸರಣಿಯ ಮತ್ತೊಂದು ಕಾರ್ಯಾಗಾರ 'ಆಗು ನೀ ಅದ್ಭುತ ವಾಗ್ಮಿ' ಯಲ್ಲಿ ನಾವು ಹೇಗೆ ತಯಾರಿ ಮಾಡ್ಬೇಕು, ನಮ್ಮ ಪ್ರಸ್ತುತಿ ಯಾವೆಲ್ಲ ಅಂಶಗಳನ್ನೊಳಗೊಂಡಿರಬೇಕು ಅಂತ ಚೆನ್ನಾಗಿ ವಿವರಿಸಿದರು. ನಾವೆಲ್ಲರೂ ಕೊಟ್ಟ 3 ವಿಷಯಗಳಲ್ಲಿ ನಮಗಿಷ್ಟವಾದ ವಿಷಯವನ್ನಾರಿಸಿಕೊಂಡು 1-2 ನಿಮಿಷ ಮಾತಾಡಿದೆವು. ಆಮೇಲೆ ನಾವು ಇನ್ನೂ ಚೆನ್ನಾಗಿ ಹೇಗೆ ನಮ್ಮ ವಿಷಯಗಳನ್ನು ಹೇಳಬಹುದು ಎಂದು ತಿಳಿಸಿ ಹೇಳಿದರು. ನಾನು ಎಂದೂ ಈ ತರ ಪಬ್ಲಿಕ್ ಸ್ಪೀಕಿಂಗ್ ಮಾಡುವುದರಲ್ಲಿ ಆಸಕ್ತಿ ತೋರಿದವನಲ್ಲ, ಆದರೂ ಈ ಕಾರ್ಯಾಗಾರ ತುಂಬಾ ಇಂಟರೆಸ್ಟಿಂಗ್ ಆಗಿತ್ತು. ನನಗೆ ಸ್ಟೇಜ್ fear ಹೇಗೆ ಹೋಗಲಾಡಿಸಬಹುದು ಎಂಬ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ನೀಡಿದ್ದರೆ ಚೆನ್ನಾಗಿತ್ತು ಅನ್ನಿಸ್ತು!

- ನಿಹಾರ್ ತಂತ್ರಿ






ಭಾಷಣದ ಕಾರ್ಯಾಗಾರ (Public Speaking)

ಜನವರಿ ಅದ್ಭುತ ವಾರದಲ್ಲಿ ನಾವು
ಬಹಳ ವಿಷಯಗಳನ್ನು ಕಲಿತೆವು. ನಾನು ಈ
ಮುಂಚೆ ಇಂಗ್ಲಿಷ್ ಭಾಷೆಯಲ್ಲಿ ಪಬ್ಲಿಕ್
ಸ್ಪೀಕಿಂಗ ಕಾರ್ಯಾಗಾರದಲ್ಲಿ ಭಾಗವಹಿಸಿದ್ದೆ. ನಾನು
ಮೊದಲ ಬಾರಿಗೆ ಕನ್ನಡದಲ್ಲಿ ಭಾಷಣದ
ಕಾರ್ಯಾಗಾರದಲ್ಲಿ ಭಾಗವಹಿಸಿದ್ದು. ನಾವು ಹೇಗೆ
ವಿಷಯವನ್ನು ಆರಿಸಿಕೊಳ್ಳಬೇಕು, ಮತ್ತು ಅದನ್ನು
ಯಾವ ರೀತಿ ಹೇಳಬೇಕು ಎಂದು ಕಲಿತೆವು.
ನಮಗೆ ಹೇಳಿಕೊಟ್ಟ ಶಿಕ್ಷಕರು ತುಂಬಾ ಚೆನ್ನಾಗಿ
ವಿವರಿಸಿದ್ದಾರೆ. ಮುಂದೆ ಈ ತರಹದ
ಕಾರ್ಯಾಗಾರದಲ್ಲಿ ಭಾಗವಹಿಸಲು ಇಷ್ಟಪಡುತ್ತೇನೆ.

-ಸಿರಿ ನಾಗಣ್ಣನವರ್






ನನಗೆ ಭಾಷಣದ ಕಾರ್ಯಾಗಾರ
ತುಂಬಾ ಇಷ್ಟ ಆಯಿತು. ನನಗೆ ಇಷ್ಟವಾದ
ವಿಷಯವೆಂದರೆ ಭಾಷಣದಲ್ಲಿ ಮೂರು
ಭಾಗಗಳಿವೆ: ಹುಕ್, ಬಾಡಿ, ಮತ್ತು
ತೀರ್ಮಾನ. ನನ್ನ ಗುಂಪಿಗೆ ನಮ್ಮ
ಮೆಚ್ಚಿನ ಟೀವಿ ಕಾರ್ಯಕ್ರಮದ ಬಗ್ಗೆ
ಮಾತನಾಡಲು ಹೇಳಿದರು. ನಾನು
Young Sheldon ಬಗ್ಗೆ ಮಾತನಾಡಿದೆ. ಅವರು
ಇಷ್ಟ ಪಟ್ಟು ಇನ್ನೂ ಉತ್ತಮಗೊಳಿಸುವುದರ
ಬಗ್ಗೆ ತಿಳಿಸಿದರು. ಉಮಾ ಆಂಟೀ ಮತ್ತು
ಸತ್ಯಾ ಅಂಕಲ್ ಗೆ ಧನ್ಯವಾದಗಳು!


-ವಿಹಾನ್ ಆತ್ರೇಯಸ್





ಭಾಷಣದ ಕಾರ್ಯಾಗಾರ

ನನ್ನ ಜೀವನದ ಎಲ್ಲ ಕಲಿಯುವ
ಅನುಭವಗಳಲ್ಲಿ, ಈ ಭಾಷಣದ ತರಬೇತಿ
ಕಾರ್ಯಾಗಾರ ಒಂದು ವಿಶೇಷ ಅನುಭವ-
ವಾಗಿತ್ತು. ನೀವು ತರಬೇತಿ ಕೊಟ್ಟ ರೀತಿ
ನನಗೆ ಬಹಳ ಇಷ್ಟವಾಯಿತು. ಈ
ಕಾರ್ಯಾಗಾರದಲ್ಲಿ ವಿಷಯದ ವಿಡಿಯೋ,
ಭಾಷಣದ ತರಬೇತಿ ನಂತರ ತಿದ್ದಿ ನಮ್ಮ
ತಪ್ಪುಗಳನ್ನು ಸರಿ ಪಡಿಸಿದ್ದು ತುಂಬಾ
ಚೆನ್ನಾಗಿತ್ತು. ಈ ತರಬೇತಿಯಲ್ಲಿ ನಾವೆಲ್ಲ
ಮಾತನಾಡಿಕೊಂಡು ಭಾಗವಹಿಸಿದೆವು.
ಎಲ್ಲರಿಗೂ ಮಾತಾಡಲು ಅವಕಾಶವಿತ್ತು.
ಒಂದು ಭಾಷಣವನ್ನು ಹೇಗೆ ಶುರು ಮಾಡಬೇ
ಕು ಎಂದು ತಿಳಿಸಿದಿರಿ. ಇದು ನನಗೆ ತುಂಬಾ
ಸಹಾಯವಾಗುತ್ತದೆ. ಇದರ ಜೊತೆ ವಿಡಿಯೋ



ನೋಡುವುದು ಬಹಳ ಖುಷಿ ಕೊಟ್ಟಿತು.
ಈ ತರಬೇತಿಯಲ್ಲಿ ಭಾಗವಹಿಸಲು
ಅವಕಾಶ ಕೊಟ್ಟ ಬೃಂದಾವನಕ್ಕೆ
ಧನ್ಯವಾದಗಳು. ನಾನು ಇನ್ನು ಮುಂದೆ
ವೇದಿಕೆಯಲ್ಲಿ ಮಾತಾಡುವಾಗ ಈ
ಅನುಭವವನ್ನು ಯಾವತ್ತೂ ನೆನೆಯುತ್ತೇನೆ

ಥ್ಯಾಂಕ್ಯು
ಆದಿತ್ಯ ಕಟ್ಟಿಮನಿ

ನನಗೆ ಭಾಷಣ ಕಾರ್ಯಾಗಾರ ಒಂದು ಒಳ್ಳೆಯ ಅನುಭವವಾಗಿತ್ತು. ಇದರಲ್ಲಿ ನಾನು ಭಾಷಣದ ವಿಷಯಕ್ಕೆ ಹೇಗೆ ತಯಾರಿ ಮಾಡಬೇಕು ಮತ್ತು ಅದನ್ನು ಹೇಗೆ ಮಂಡಿಸಬೇಕು ಎಂದು ಕಲಿತೆನು. ನಮಗೆ ಒಂದು ವಿಷಯದ ಬಗ್ಗೆ ಮಾತನಾಡುವ ಅವಕಾಶದಲ್ಲಿ ಲೇಖಕರ ಬಗ್ಗೆ ಬರೆದು ಮಾತನಾಡಿದೆ. ನಂತರ ನಾವು ಇನ್ನು ಚೆನ್ನಾಗಿ ಹೇಗೆ ಮಾಡಬಹುದು ಎಂದು ತಿಳಿಸಿ ಕೊಟ್ಟರು. ಸ್ವಲ್ಪ ಸಮಯದಲ್ಲಿ ಬಹಳ ಪ್ರಮುಖವಾದ ಅಂಶಗಳನ್ನು ಕಲಿಸಿದಕ್ಕೆ ಧನ್ಯವಾದಗಳು.


— ನಿಶಾಂಕ ಶಿವಪುರ



ಶ್ರೀಹಾನ್ ಕುಪ್ಪಾಡ್

ನಮಸ್ಕಾರ, ನನಗೆ ಇತ್ತೀಚೆಗೆ ಉತ್ತಮ ಭಾಷಣಕಾರನಾಗುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರಕಿತು. ಉಮಾ ಹಾಗೂ ಸತ್ಯರವರು ನಾವು ಹೇಗೆ ತಯಾರಾಗಬೇಕು ಎಂದು ತಿಳಿಸಿದರು. ನಾವು ಸಭೆಯನ್ನು ಹೇಗೆ ನಮ್ಮ ಕಡೆ ಸೆಳೆಯುವ ಉಪಾಯಗಳನ್ನು ತಿಳಿಸಿದರು. ಅದರಲ್ಲೂ ಸ್ಪಷ್ಟ ಮಾತುಗಳ ಮಹತ್ವವನ್ನು ತಿಳಿಸಿದರು. ನಾನು ಕಾರ್ಯಕ್ರಮದಲ್ಲಿ ಬಿಲ್ ಗೇಟ್ಸ್ ನನ್ನ ಆದರ್ಶ ವ್ಯಕ್ತಿ ಎಂದು ಭಾಷಣ ಮಾಡಿದೆ. ನನ್ನ ಎಲ್ಲ ಒರೆ ಕೊರೆಗಳನ್ನು ತಿದ್ದಿದ ಹಿರಿಯರಾದ ಉಮಾ ಹಾಗೂ ಸತ್ಯರವರಿಗೆ ಧನ್ಯವಾದಗಳು.






## ಆಗುವೆವು ನಾವು ಅದ್ಭುತ ವಾಗ್ಮಿಗಳು





# ಕಾಲಾಯ ತಸ್ಮೈ ನಮಃ

*ಪರಿಮಳಾ ಕೌಜಲಗಿ, ಬೆಂಗಳೂರು*

ರಾಜನೊಬ್ಬನಿದ್ದ. ಬಹಳ ದಿನಗಳಿಂದ ಅವನಿಗೆ ಮಕ್ಕಳೇ ಇರಲಿಲ್ಲ. ಕೊನೆಗೊಮ್ಮೆ ಅವನಿಗೆ ಹೆಣ್ಣುಮಗುವೊಂದು ಜನಿಸಿತು. ಚಂದಿರನಂತೆ ದುಂಡು ಮುಖ. ಹಾಲಿನಂಥ ಬಣ್ಣ. ತುಂಬಾ ಸುಂದರವಾಗಿದ್ದ ಆ ಮಗುವನ್ನು ನೋಡಿ ರಾಜ ಬಹಳ ಸಂತೋಷಪಟ್ಟ.

ಆ ಮಗು ಬೇಗ ಬೇಗ ಬೆಳೆಯುತ್ತ ೫-೬ ವರ್ಷದ ಕನ್ಯೆಯಾಗಿ, ರೇಷ್ಮೆ ಲಂಗ, ಆಭರಣ ತೊಟ್ಟು, ಗೆಜ್ಜೆ ಕಾಲಿನಿಂದ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತ ಅರಮನೆ ತುಂಬ ಓಡಾಡುವುದನ್ನು ನೋಡಬೇಕೆಂಬ ಆತುರ ರಾಜನಿಗೆ. ತಕ್ಷಣ ಮಂತ್ರಿಗಳನ್ನು ಬರಹೇಳಿ, ಪ್ರಸಿದ್ಧ ವೈದ್ಯರನ್ನೆಲ್ಲ ಕರೆಸಿ ತನ್ನ ಆಸೆಯನ್ನು ಹೇಳಿಕೊಂಡ. ಆದರೆ ಎಲ್ಲರ ಉತ್ತರ ಒಂದೇ, "ರಾಜ, ಅದು ಸಾಧ್ಯವಿಲ್ಲದ ಮಾತು." ಆದರೆ ರಾಜನಿಗೆ ಕಾಯುವಷ್ಟು ವ್ಯವಧಾನವಿರಲಿಲ್ಲ. ರಾಜಧಾನಿಯಲ್ಲೆಲ್ಲ ಡಂಗುರ ಹೊಡೆಸಿದ, 'ಯಾರಾದರೂ ಬೇಗನೇ ಮಗಳನ್ನು ಬೆಳೆಯುವಂತೆ ಮಾಡುವವರಿದ್ದರೆ ಬನ್ನಿ' ಎಂದು.

ನಿರುದ್ಯೋಗಿ ತರುಣನೊಬ್ಬ ರಾಜನ ಹುಚ್ಚುತನದ ಲಾಭ ಪಡೆಯಲು ಯೋಜನೆಯೊಂದನ್ನು ಹಾಕಿಕೊಂಡು ಬಂದ. "ರಾಜ, ನನಗೆ ಕಾಡಿನಲ್ಲಿ ವಿಶೇಷವಾಗಿ ಬೆಳೆಯುವ ನಾರು-ಬೇರುಗಳ ಪರಿಚಯವಿದೆ. ನಾನು ರಾಜಕುಮಾರಿಯನ್ನು ಬೇಗನೆ ಬೆಳೆಯುವಂತೆ ಮಾಡಬಲ್ಲೆ." ರಾಜನಿಗೆ ಬಹಳ ಖುಷಿ, "ನಿನಗೇನು ಸೌಲಭ್ಯಗಳು ಬೇಕು ಹೇಳು, ನಾನು ಒದಗಿಸುತ್ತೇನೆ. ನಾಳೆಯಿಂದಲೇ ಬಂದು ಆರೈಕೆ ಶುರುಮಾಡು" ಎಂದ. ಆದರೆ ಆ ತರುಣ ಅದಕ್ಕೆ ಒಪ್ಪಲಿಲ್ಲ. "ನಾನು ಮಗುವನ್ನು ಕರೆದುಕೊಂಡು ಕಾಡಿನಲ್ಲೇ ಇರಬೇಕಾಗುತ್ತದೆ. ಕಾರಣ ಮಗುವನ್ನು ನನ್ನ ಜೊತೆಗೇ ಕಳುಹಿಸಿ. ಕಾಲಕಾಲಕ್ಕೆ, ನಾನು ಬಂದು ಬೆಳವಣಿಗೆಯ ವರದಿ ಒಪ್ಪಿಸುತ್ತೇನೆ" ಎಂದ.

ಒಲ್ಲದ ಮನಸ್ಸಿನಿಂದ ರಾಜ ಅದಕ್ಕೆ ಒಪ್ಪಿಕೊಂಡ. ಆ ತರುಣ ಅದೂ ಇದೂ ಖರ್ಚಿಗೆಂದು ಸಾಕಷ್ಟು ಹಣ ಪಡೆದುಕೊಂಡು, ಮಗುವನ್ನು ಕರೆದುಕೊಂಡು ಹೋದ. ವರದಿ ಒಪ್ಪಿಸುವ ನೆಪದಲ್ಲಿ ಆಗಾಗ ಬಂದು ಮತ್ತೆ ಹಣ ಪಡೆದುಕೊಂಡು ಹೋಗುತ್ತಿದ್ದ. ಸಮಯ ಸರಿಯುತ್ತಿತ್ತು. ವರ್ಷಗಳು ಉರುಳಿದವು. ರಾಜ್ಯಭಾರದ ಒತ್ತಡದಲ್ಲಿ ರಾಜ ಮಗಳ ವಿಷಯ ಮರೆತೇಬಿಟ್ಟಿದ್ದ.

ಮುಂದೊಂದು ದಿನ ಆ ತರುಣ ರಾಜಕುಮಾರಿಯನ್ನು ಕರೆದುಕೊಂಡು ಬಂದು ರಾಜನೆದುರಿಗೆ ನಿಂತು ಹೇಳಿದ, "ರಾಜಾ, ನೋಡು ನಿನ್ನ ಮಗಳು ಎಷ್ಟು ಬೇಗ ಬೆಳೆಯುವಂತೆ ಮಾಡಿದ್ದೇನೆ. "ರಾಜನಿಗೆ ಆಶ್ಚರ್ಯ! ಎಷ್ಟೋ ವರ್ಷಗಳ ನಂತರ ಬೆಳೆದು ನಿಂತಿದ್ದ ರಾಜಕುಮಾರಿಯನ್ನು ನೋಡಿ ಖುಷಿಯೋ ಖುಷಿ. ಆ ತರುಣನಿಗೆ ಮತ್ತೆ ಕೈತುಂಬ ಬಹುಮಾನ ಕೊಟ್ಟು ಕಳುಹಿಸಿದ. ಸಭೆಯಲ್ಲಿದ್ದವರೆಲ್ಲ ಮನದಲ್ಲೇ ರಾಜನ ಹುಚ್ಚುತನಕ್ಕೆ ನಕ್ಕರು!



ಬಹುಶಃ ನಮ್ಮೆಲ್ಲರ ಬದುಕು ಕೂಡ ಆತುರದ ಮನಸ್ಸಿನ ರಾಜನಂತೇ ಆಗಿದೆ ಎಂದರೆ ತಪ್ಪಿಲ್ಲ. ಎಲ್ಲದಕ್ಕೂ ಆತುರ, ಅವಸರ. Slow and steady wins the race ಎನ್ನುವುದನ್ನು ನಾವು ಮರೆತೇಬಿಟ್ಟಿದ್ದೇವೆ. ಧಾವಂತದ ಬದುಕಿನಲ್ಲಿ ನಾವು ಎಷ್ಟೊಂದು ಅಮೂಲ್ಯ ವಿಷಯಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದರ ಅರಿವು ನಮಗಿಲ್ಲ. ರಾಜ ತನ್ನ ಮಗಳ ಮುದ್ದಾದ ಬಾಲ್ಯವನ್ನು ನೋಡುವುದನ್ನು ಕಳೆದುಕೊಂಡಂತೆ.

ನಾವು ಎಷ್ಟೇ ಆತುರಪಟ್ಟರೂ ಕೆಲವೊಂದು ಸಂಗತಿಗಳು ಸಮಯ ಬಂದಾಗಲೇ ಫಲ ನೀಡುತ್ತವೆ.

ಮೊಗ್ಗು ಹೂವಾಗಿ, ಕಾಯಾಗಿ, ಹಣ್ಣು ಸಿಗಲು ಕಾಲಾವಕಾಶ ಬೇಕೇ ಬೇಕು. ಮದ್ದು ಕುಡಿದ ತಕ್ಷಣ ಎದ್ದು ಕೂಡಲು ಸಾಧ್ಯವಿಲ್ಲ. ಮದ್ದು ಕೆಲಸ ಮಾಡಲು ಸಮಯ ಬೇಕು. ಸಹಿಸಲು ಸಾಧ್ಯವೇ ಇಲ್ಲ ಎನ್ನುವ ದುಃಖವನ್ನು, ಕಹಿ ಘಟನೆಗಳನ್ನು ಮರೆಸುವಂತೆ ಮಾಡುವುದು ಕಾಲ ಮಾತ್ರ.

ಹೀಗೆ ಈ ಕಾಲ ಅಥವಾ ಸಮಯ ಎನ್ನುವುದು ನಿಜಕ್ಕೂ ಅದ್ಭುತವಾದದ್ದು. ಮನುಷ್ಯರಿಗೆ ಅದರ ಮೇಲೆ ವಿಜಯ ಸಾಧಿಸಲು ಸಾಧ್ಯವೇ ಇಲ್ಲ. ಅದರ ನಿಯಮನ ಕೇವಲ ಭಗವಂತನೊಬ್ಬನಿಂದಲೇ ಸಾಧ್ಯ. ಅದಕ್ಕೇ ಅವನನ್ನು ಕಾಲರೂಪೀ ಪರಮಾತ್ಮ ಎನ್ನುವುದು.

ಹಿಂದೆಲ್ಲ ಹಿರಿಯರು ಹೇಳುತ್ತಿದ್ದರು, "ಸಮಯ ಬಂದಾಗ ಎಲ್ಲವೂ ಸರಿ ಹೋಗುತ್ತದೆ" ಎಂದು. ಆದರೆ ಕಾಯುವ ಸಹನೆ ಮಾತ್ರ ನಮ್ಮಲ್ಲಿ ಖಂಡಿತ ಇರಬೇಕು.



# ಕಾರ್ಟೂನ್ ಪ್ರಪಂಚದಲ್ಲಿ ಕಳೆದುಹೋಗಿರುವ ಕಂದಮ್ಮಗಳು

**ಶ್ರೀಲಕ್ಷ್ಮಿ**, *ಬೆಂಗಳೂರು*

ಬಣ್ಣ-ಬಣ್ಣದ ಸಾಮಾನುಗಳು ಎಳೆಯ ಕಣ್ಣುಗಳಿಗೆ ಬೇಗನೆ ಆಕರ್ಷಿತವಾಗಿಬಿಡತ್ತೆ. ಅದಕ್ಕೆ ಅಲ್ಲವೇ? ತೊಟ್ಟಿಲಿನಲ್ಲಿ ಮಲಗುವ ಪುಟಾಣಿ ಮಗು ನೋಡಲೆಂದು ತಿರುಗುವ ಗೊಂಬೆಯನ್ನು ತೊಟ್ಟಿಲ ಮೇಲೆ ಕಟ್ಟೋದು. ಆ ವಯಸ್ಸಿನ ಮಗುವಿಗೆ ಚೆನ್ನಾಗಿದೆ ಎಂದು ಹೇಳಲು ಬರದಿದ್ದರೂ ಸಹ ಆ ತಿರುಗುವ ರಾಟೆಯನ್ನು ನೋಡುವ ಮಗು ಕೈ ಕಾಲುಗಳನ್ನು ಬಡಿಯುತ್ತಾ, ಹೊಟ್ಟೆಯನ್ನು ಮೇಲೆತ್ತಿ ಅದನ್ನು ಹಿಡಿಯುವ ಪ್ರಯತ್ನಕ್ಕೆ ಮುಂದಾಗುವುದು. ನಂತರದ ದಿನಗಳಲ್ಲಿ ಶಬ್ದ ಮಾಡುವ ಬಣ್ಣ ಬಣ್ಣದ ಗಿಲಕಿಗಳು ಅವರ ಇಷ್ಟದ ಆಟಿಕೆಯಾಗುವುದು. ಆಮೇಲೆ ಕೀ ಕೊಟ್ಟು ಆಡುವ ಗೊಂಬೆ, ತಳ್ಳಿದರೆ ಮುಂದೆ ಹೋಗುವ ಗೊಂಬೆ, ಒಂದರ ಮೇಲೊಂದು ಜೋಡಿಸುವ ಗೊಂಬೆ ಹೀಗೆ ಮಕ್ಕಳು ಇಷ್ಟಪಟ್ಟು ಆಡುವ ಆಟಿಕೆಗಳ ಪಟ್ಟಿ ಉದ್ದವಾಗುವುದು. ಗೊಂಬೆಗಳೊಂದಿಗೆ ಮಕ್ಕಳ ಆಟ ನೋಡಲು ಚಂದ ಮಾತ್ರವಲ್ಲದೆ ಅದು ಅವರ ಸರ್ವೋನ್ಮುಖ ಬೆಳವಣಿಗೆಗೂ ಸಹಾಯಕಾರಿ. ಮಕ್ಕಳು ಆಡುವಾಗ ಅವರ ಕೈ, ಕಿವಿ, ಕಣ್ಣಿನ ಸಮನ್ವಯ ಉತ್ತಮಗೊಳಿಸುವುದಕ್ಕು ಸಹ ಆಟಿಕೆಗಳು ಸಹಾಯ ಮಾಡುತ್ತದೆ. ಗೊಂಬೆಗಳ ಲೋಕದಲ್ಲಿ ಮಕ್ಕಳು ಬೆಳೆಯುವುದು ಸ್ವಭಾವಿಕ.

ನಂತರದ ದಿನಗಳಲ್ಲಿ ಅವರಿಗೆ ಮನೆಯ ಪುಟ್ಟ ಪರದೆಯ ಮೇಲೆ ಕಾಣುವ ವರ್ಣಮಯ ಚಿತ್ರಗಳು ಇಷ್ಟವಾಗುವುದು. ಅದನ್ನು ನೋಡಲು ಹಂಬಲಿಸುವರು. ಅರ್ಥವಾಗದಿದ್ದರೂ ಸಹ ಚಲನಯುಕ್ತ ಗೊಂಬೆಗಳಂತೆ ಕಾಣುವ ಚಿತ್ರಗಳು ಎಳೆಯ ಮನಸ್ಸುಗಳನ್ನು ಸೆಳೆದು ಬಿಡುತ್ತದೆ. ಪೋಷಕರು ತಮ್ಮ ಮಕ್ಕಳು ಸ್ವಲ್ಪ ಸಮಯ ಸುಮ್ಮನೆ ಟಿವಿ ನೋಡುತ್ತಾ ಕೂರುವುದು ತಮಗೆ ಒಂದು ರೀತಿಯ ರೆಸ್ಟ್ ಟೈಮ್ ಎಂದು ಪರಿಗಣಿಸಿಬಿಡುವರು. ಆದರೆ ತಿಳಿಯದೆ ಈ ವೀಕ್ಷಣೆಯ ಅವಧಿ ಹೆಚ್ಚುತ್ತಾ ಹೋಗುವುದು. ಮಕ್ಕಳು ಗಲಾಟೆ ಮಾಡುತ್ತಿದ್ದರೆ ಸುಮ್ಮನಿರಿಸುವ ಸಾಧನವು ಟಿವಿಯೇ ಆಗಿಬಿಡುವುದು. ಕಾರ್ಟೂನ್ ತಾನೆ ನೋಡ್ತಾರೆ? ಪರ್ವಾಗಿಲ್ಲ ಅನ್ನೋ ಸಮಾಧಾನ ತಂದೆ ತಾಯಿಗಳಿಗೆ. ಆದರೆ ಮಕ್ಕಳ ಸ್ಕ್ರೀನ್ ಟೈಂ ಹೆಚ್ಚಳಕ್ಕೆ ತಾವೇ ಕಾರಣವಾಗುತ್ತಿರುವ ಅರಿವು ಮೂಡುವುದೇ ಇಲ್ಲ.

ಹೀಗೆ ಮಕ್ಕಳು ಕ್ರಮೇಣ ಮೊಬೈಲ್ ವೀಕ್ಷಣೆಗೆ ಜಾರುವರು. ಒಂದೆರಡು ಸಲ ಹಾಕಿ ತೋರಿಸಿದರೆ ಸಾಕು. ಕಷ್ಟವೇ ಇಲ್ಲದೆ ಸುಲಭವಾಗಿ ಕರಗತ ಮಾಡಿಕೊಂಡುಬಿಡುತ್ತಾರೆ. ಅದೇ ರೂಢಿಯಾಗುತ್ತಾ ಹಠದ ಸ್ವಭಾವವು ಹೆಚ್ಚುತ್ತದೆ. 'ಊಟ ಮಾಡಿಸುವಾಗ, ಮೊಬೈಲ್ ಇರಬೇಕು, ಇಲ್ಲದಿದ್ರೆ ತಿನ್ನೋಲ್ಲ' ಇದು ಇಂದಿನ ಚಿಕ್ಕ ಮಕ್ಕಳ ಅತಿ ದೊಡ್ಡ ಡಿಮ್ಯಾಂಡ್ ಆಗಿಬಿಟ್ಟಿದೆ. ಕಥೆ ಹೇಳುತ್ತಾ, ಕೈ ತುತ್ತು ಹಾಕುತ್ತಾ, ಮನೆಯಾಚೆಯ ಕಟ್ಟೆಯ ಮೇಲೆ ಕೂರಿಸಿ ಹಾರಾಡುವ ಹಕ್ಕಿಗಳನ್ನು ತೋರಿಸುತ್ತ, ಗಿಡ ಮರಗಳು, ಹೂವು ಹಣ್ಣುಗಳ ಪರಿಚಯ ಮಾಡಿಸುತ್ತ ತಿನ್ನಿಸುವ ಪರಿಪಾಠವೆಲ್ಲಾ ಹೋಗಿ, ಮೊಬೈಲ್ ಒಳಗಿನ ಪ್ರಪಂಚವನ್ನೇ ಅವರಿಗೆ ಪ್ರಿಯವಾಗಿಸಿಬಿಟ್ಟಿದ್ದೇವೆ. ಇದಲ್ಲದೆ ಅವರು ಕಾರ್ಟೂನ್ ವೀಕ್ಷಣೆಯ ಮೂಲಕ ತುಂಬಾ ವಿಷಯಗಳನ್ನು ಕಲಿಯುತ್ತಿದ್ದಾರೆ ಎಂಬ ಒಣ ಜಂಬ ಒಂದಿಷ್ಟು ತಂದೆ ತಾಯಂದಿರದು. ಏಕೆ? ಹಿಂದೆಲ್ಲಾ ಮೊಬೈಲ್ ಇಲ್ಲದೆ ಮಕ್ಕಳು ತಿನ್ನುತ್ತಿರಲಿಲ್ಲವೇ? ಒಳ್ಳೆಯ ವರ್ಣಮಯ ಕಥೆ ಪುಸ್ತಕಗಳಿಂದ ಅವರು ಕಲಿಯುವುದಿಲ್ಲವೇ? ಸ್ವಲ್ಪ ಸಮಯದ ವೀಕ್ಷಣೆ ಅವರಿಗೆ ಮನರಂಜನೆ ಎಂದು ಪರಿಗಣಿಸೋಣ. ಆದರೆ ಗಂಟೆಗಟ್ಟಲೆ ಅದನ್ನೇ ನೋಡುತ್ತಾ ಕೂರುವುದರಿಂದ ಅವರ ಎಳೆಯ ಕಣ್ಣುಗಳಿಗಷ್ಟೇ ಅಲ್ಲ, ಮನಸ್ಸು ಮತ್ತು ದೇಹಕ್ಕು ತೊಂದರೆಯೇ. ಆಡುತ್ತಾ ನಲಿಯುತ್ತ ಕಳೆಯುವ ದಿನಗಳನ್ನು ಟಿವಿ, ಕಂಪ್ಯೂಟರ್, ಮೊಬೈಲ್ ಗಳಲ್ಲಿನ ಕಾರ್ಟೂನ್ಗಳು, ಗೇಮ್ಸ್ ಗಳು ಕಟ್ಟಿ ಹಾಕುತ್ತಿವೆ.

ಕಾರ್ಟೂನ್ ಕ್ಯಾರೆಕ್ಟರ್ಸ್ ಇಷ್ಟವಾಗುತ್ತಿದ್ದಂತೆ, ಆ ಕ್ಯಾರೆಕ್ಟರ್ಸ್ ಹಾಕಿಕೊಳ್ಳುವ ಉಡುಪಿನ ಬಣ್ಣಗಳು ಇಷ್ಟವಾಗುತ್ತದೆ, ಆ ಕಾರ್ಟೂನ್ ಗಳ ಧ್ವನಿಯನ್ನು ಅನುಕರಣೆ ಮಾಡುವುದು ಹೀಗೆ ಕಾರ್ಟೂನ್ ಪ್ರಪಂಚದಲ್ಲಿ ತೇಲಲು ಪ್ರಾರಂಭಿಸುವರು. ಏನಾದರೂ ಕೊಳ್ಳಲು ಹೋದಾಗಲು ಸಹ ಆ ಕಾರ್ಟೂನ್ ಚಿತ್ರಗಳಿರುವ ವಸ್ತುಗಳನ್ನೇ ಹುಡುಕಲು ಪ್ರಾರಂಭಿಸುವರು. ಕಾರ್ಟೂನ್ಸ್ ಇಷ್ಟಪಡುವುದರಲ್ಲಿ ತಪ್ಪಿಲ್ಲ ಆದರೆ ದಿನದ ಬಹುಪಾಲು ಸಮಯ ಅದಕ್ಕೆ ಮೀಸಲಿಡುವುದು ಖಂಡಿತ ತಪ್ಪಾಗುವುದು. ಬೆಳೆಯುತ್ತಿದ್ದಂತೆ ಬೇರೆ ಬೇರೆ ಕಾರ್ಟೂನ್ ಕ್ಯಾರೆಕ್ಟರ್ಗಳು ಇಷ್ಟವಾಗತೊಡಗುವುದು, ಮೊಬೈಲ್ ನೋಡುವ ಹಂಬಲ ಹೆಚ್ಚಾದಂತೆಲ್ಲ ಮುಂದೊಂದು ದಿನ ಗೇಮಿಂಗ್ ಕಡೆಯೂ ಮಕ್ಕಳು ಮನಸ್ಸು ಮಾಡುವರು.

ನಾವು ಸಹ ಟಾಮ್ ಅಂಡ್ ಜೆರ್ರಿ, ಮಿಕ್ಕಿ ಮೌಸ್, ಜಂಗಲ್ ಬುಕ್, ವಿನಿ ದ ಪೂ, ನಾಡಿ ಇಂತಹ ಕಾರ್ಟೂನ್ ಪ್ರೋಗ್ರಾಮ್ ಗಳನ್ನು ನೋಡುತ್ತಲೇ ಬೆಳೆದೆವು ಆದರೆ ಆಗ ಟಿವಿಯಲ್ಲಿ ಪ್ರಸಾರವಾಗುತ್ತಿದ್ದ ಸಮಯ ಮಾತ್ರ ನಮ್ಮ ವೀಕ್ಷಣೆಯ ಸಮಯವಾಗಿರುತ್ತಿತ್ತು. ಇಂದಿನ ಕಾರ್ಟೂನ್ ವೀಕ್ಷಣೆ ಹಾಗಲ್ಲವಲ್ಲ ಸಮಯದ ಮಿತಿಯೇ ಇಲ್ಲದೆ ಒಂದಾದ ಮೇಲೊಂದು ನೋಡುತ್ತಲೇ ಇರುವುದು. ಯಾವುದೇ ಒಂದು ಅತಿಯಾದರೆ ಅಪಾಯವೇ ಅಲ್ಲವೇ?

ಮಕ್ಕಳು ಬೇರೆ ಮಕ್ಕಳೊಂದಿಗೆ ಆಡಿ, ನಲಿದು, ಪುಸ್ತಕದ ಆಸಕ್ತಿ ಬೆಳೆಸಿಕೊಂಡು, ಒಂದೆರಡು ಹವ್ಯಾಸಗಳಲ್ಲಿ ತೊಡಗಿಸಿಕೊಂಡು, ಮನೆಯಲ್ಲಿ ಎಲ್ಲರೊಂದಿಗೆ ಖುಷಿಯಿಂದ ಸಮಯ ಕಳೆಯುತ್ತಾ ಉಳಿದ ಸ್ವಲ್ಪ ಸಮಯ ಟಿವಿ ಮೊಬೈಲ್ ಗೆ ಮೀಸಲಿಡಬೇಕು ಹೊರತು ಬೇರೆಲ್ಲದರ ಸಮಯವನ್ನು ಪರದೆಯ ಸಮಯಕ್ಕೆ ಕೊಟ್ಟರೆ ಅವರ ಸರ್ವತೋಮುಖ ಬೆಳವಣಿಗೆ ಕುಂಟಿತಗೊಳ್ಳುವುದು ಅಲ್ಲವೇ? ಯೋಚಿಸಿ...



# ಕಗ್ಗದ ಸಿರಿ - 3

**ನಾಗರತ್ನ,** ಬೆಂಗಳೂರು

**ಅಂ**ತರಂಗವನೆಲ್ಲ ಬಿಚ್ಚಿ ತೋರಿಪನಾರು? ।

ಅಂತರಗಭೀರಗಳ ತಾನೆ ಕಂಡವನಾರ್? ॥
ಗಂತಿಗಳು ಗಂಟುಗಳು ಮಡಿಪುಮಡಿಪುಗಳಲ್ಲಿ ।
ಸ್ವಂತಕೇ ದುರ್ದರ್ಶ - ಮಂಕುತಿಮ್ಮ ॥-ಕಗ್ಗ-194

ಮನುಷ್ಯನ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಅಥವಾ ಅಂತರಂಗವನ್ನು ಪದರ ಪದರವಾಗಿ ಬಿಚ್ಚಿ ತೋರಿಸುವವರಾರು? ಇದು ಬಹು ಕ್ಲಿಷ್ಟಕರ. ಮನುಷ್ಯನ ಅಂತರಾಳದಲ್ಲಿ ಬಿಡಿಸಲಾರದ ಗಂಟುನಂಟುಗಳು, ಗೋಜಲು, ಸಿಕ್ಕುಗಳು, ತೆರೆಯಲಾರದ ಪರದೆಗಳು ಹತ್ತು ಹಲವಾರು. ಗಾಳಿಗಿಂತಲೂ ವೇಗವಾದ, ಬೆಳಕಿಗಿಂತಲೂ ತೀಕ್ಷ್ಣವಾದ, ವಜ್ರಕ್ಕಿಂತಲೂ ಕಠಿಣವಾದ ಹಾಗು ಬೆಣ್ಣೆಯಷ್ಟೇ ಮೃದುವಾದ ಮನುಜನ ಮನಸ್ಸು ನೀಲ ಸಾಗರದಂತೆ ವಿಸ್ತಾರವಾದುದು, ಆಳವಾದುದು, ಗಹನವಾದುದು ಮತ್ತು ಅಷ್ಟೇ ನಿಗೂಢವಾದುದೂ ಸಹ. ಸಹಸ್ರಾರು ಭಾವನೆಗಳ, ಆಲೋಚನೆಗಳ ತರಂಗಗಳು ನಿರಂತರವಾಗಿ ಅಪ್ಪಳಿಸಿ ಮನವನ್ನು ಕದಡುತ್ತಲೇ ಇರುತ್ತವೆ. ಇದನ್ನು ನಿಯಂತ್ರಿಸುವುದು ಅಸಾಧ್ಯ. ನಮ್ಮ ಮನದಂತರಾಳವನ್ನು ಅರಿಯುವುದು ನಮಗೇ ಸಾಧ್ಯವಿಲ್ಲದಾಗ, ಇನ್ನು ಅನ್ಯರಿಗೆ ಅದನ್ನು ವೇದ್ಯ ಪಡಿಸುವುದು ಸಾಧ್ಯವೇ? ನಾನಾ ಬಗೆಯ ರಾಗ-ಭಾವಗಳು, ಕಾಮನೆಗಳು, ಚಿಂತೆ-ಚಿಂತನೆಗಳು ಆಂತರ್ಯದಲ್ಲಿ ಮನೆಮಾಡಿರುವ ನಮ್ಮ ಮನ್ಮಾನಸದ ವಿಶ್ಲೇಷಣೆ ಬಹುಕಷ್ಟ. ಇದನ್ನೇ 'ಸ್ವಂತಕೇ ದುರ್ದರ್ಶ' ಎಂದಿರುವರು ಮಾನ್ಯ ಗುಂಡಪ್ಪನವರು. ಇಂದ್ರಿಯಗೋಚರ ಪ್ರಪಂಚವನ್ನೇ ನಿಜವೆಂದು ತಿಳಿದು ಕೇವಲ ಅದರ ಒಡನಾಟದಲ್ಲಿಯೇ ನಮ್ಮ ಜೀವನವನ್ನು ವ್ಯರ್ಥವಾಗಿ ಕಳೆದುಬಿಡುತ್ತೇವೆ. ಭೌತಿಕಪ್ರಪಂಚವನ್ನು ಮೀರಿದ ನಮ್ಮ ಮನದಂತರಾಳವನ್ನು ಅರಿಯುವ ಬಗೆ ಹೇಗೆ?

ದೇವದಾನವರ ರಣರಂಗ ಮಾನವಹೃದಯ ।
ಭಾವ ರಾಗ ಹಠಂಗಳವರ ಸೇನೆಗಳು ॥
ಭೂವಿಭವಜಯಗಳ ಭ್ರಾಂತಿಯಲಿ ಮರೆಯುವರು ।
ಜೀವಾಮೃತವನವರು - ಮಂಕುತಿಮ್ಮ ॥-ಕಗ್ಗ-192

ಸೂಕ್ಷ್ಮವಾಗಿ ನಮ್ಮ ಮನದಂತರಾಳವನ್ನು ನಾವು ಅವಲೋಕಿಸಿದಾಗ ನಮಗೆ ಗೋಚರಿಸುವುದು ನಮ್ಮೊಳಗೇ ಇರುವ, ಆದರೆ ಅಗೋಚರವಾಗಿರುವ ಎರಡು ವಿಭಿನ್ನ ಮುಖಗಳು. ಈ ಎರಡೂ ಮುಖಗಳಿಗೂ ಘರ್ಷಣೆ ನಿರಂತರವಾಗಿ ಸಾಗುತ್ತಲೇ ಬಂದಿದೆ. ಅದಕ್ಕಾಗಿಯೇ ಡಿವಿಜಿಯವರು ಮಾನವನ ಹೃದಯವನ್ನು ರಣರಂಗವೆಂದು ಕರೆದಿರುವರು. ಅಂತಾದರೆ ಈ ಎರಡು ಮುಖಗಳ ಸಂಕೀರ್ಣತೆ ಎಂತಹುದಿರಬೇಕು?!! ಗುಣಸ್ವಭಾವವೆಂತಹುದು? ಏಕೀ ನಿರಂತರ ಹೋರಾಟ?!! ಈ ಸಮರವು ಧರ್ಮ ಹಾಗು ಅಧರ್ಮಗಳ ನಡುವಿನ ಕದನ. ದೇವ-ದಾನವರ ನಡುವಿನ ಯುದ್ಧ. ಅಂದರೆ ನಮ್ಮೊಳಗಿರುವ ದೈವೀಗುಣಗಳಿಗೂ ಹಾಗು ರಾಕ್ಷಸೀಗುಣಗಳಿಗೂ ನಡೆಯುತ್ತಿರುವ ನಿರಂತರ ತಿಕ್ಕಾಟ, ಕಾದಾಟ. ಒಮ್ಮೊಮ್ಮೆ ಒಂದೊಂದರ ಕೈ ಮೇಲಾಗುತ್ತದೆ. ಈ ಕಾರಣದಿಂದಲೇ ಸದಾ ನಮ್ಮ ಮನವು ದ್ವಂದ್ವದಲ್ಲಿ ಸಿಲುಕಿ ಒದ್ದಾಡುತ್ತಿರುತ್ತದೆ ಹಾಗು ಖಚಿತವಾದ ನಿರ್ಧಾರ ತಳೆಯುವಲ್ಲಿ ವಿಫಲವಾಗುತ್ತದೆ. ಪ್ರತಿಯೊಬ್ಬರಲ್ಲಿಯೂ ಸಕಾರಾತ್ಮಕ ಹಾಗು ನಕಾರಾತ್ಮಕ ಗುಣಗಳಿದ್ದು, ಕೇವಲ ಅದರ ಪ್ರಮಾಣದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. ಗುಣಪ್ರಮಾಣದ ವ್ಯತ್ಯಾಸದಿಂದ ಒಬ್ಬ ವ್ಯಕ್ತಿಯನ್ನು ರಾಮನೆಂದೋ ಅಥವಾ ರಾವಣನೆಂದೋ ಗುರುತಿಸುತ್ತಾರೆ. ರಾಗ-ಭಾವಗಳು, ಕೋಪತಾಪಗಳು, ದ್ವೇಷಮಾತ್ಸರ್ಯಗಳ ಕಪಿಮುಷ್ಟಿಗೆ ಸಿಲುಕಿದ ಮಾನವನ ಚಪಲಚಂಚಲ ಚಿತ್ತವು ಯುಕ್ತಾಯುಕ್ತತೆಗಳ ವಿವೇಚನೆಯನ್ನು ಕಳೆದುಕೊಂಡು ಒಂದು ಬಗೆಯ ಭ್ರಾಂತಿಗೆ ಸಿಲುಕುತ್ತದೆ. ಆ ಭ್ರಾಂತಿಯಲ್ಲಿ ಅದು ಇಂದ್ರಿಯಗೋಚರ ಪ್ರಪಂಚವೇ ಸತ್ಯವೆಂದೂ, ಅದರ ಭಾಗವಾದ ತಾನು ಚಿರಂಜೀವಿಯೆಂದೂ ಭ್ರಮಿಸುತ್ತದೆ. ಆತ್ಮೋದ್ಧಾರದ ಹಾದಿಯು ಕಾಣದಾಗಿ, ಆತ್ಮಾನುಸಂಧಾನದಿಂದ ದೊರೆಯಬಹುದಾದ ಶಾಶ್ವತ ಆನಂದವನ್ನು ಪಡೆಯುವಲ್ಲಿ ಮಾನವನು ವಿಫಲನಾಗುತ್ತಾನೆ. ಅಂತರ್ಮುಖಿಗಳಾಗಿ ಧ್ಯಾನ, ಭಕ್ತಿ, ಸಂಕೀರ್ತನೆ, ವಿರಕ್ತಿಗಳಿಂದ ದೊರೆಯಬಹುದಾದ ಜೀವನಾಮೃತವನ್ನು ಪಡೆದುಕೊಳ್ಳುವುದು ಬಹು ಮುಖ್ಯ. ಅದು ಸಾಧ್ಯವಾಗುವುದು ಚಂಚಲಚಿತ್ತವನ್ನು ಹಿಡಿತದಲ್ಲಿಟ್ಟುಕೊಂಡಾಗ ಮಾತ್ರ.

ಮಾನವನ ವ್ಯಕ್ತಿತ್ವವು ರಾವಣನ ದಶಶಿರದಂತೆ!! ಹತ್ತು ಹಲವಾರು ಮುಖಗಳು, ಮುಖವಾಡಗಳು! ಅವನು ಜಗಕೆ ಕಾಣಿಸಿಕೊಳ್ಳುವುದು ಬಗಬಗೆಯ ಮುಖವಾಡಗಳಲ್ಲಿ!!

ಮೊಗನಾಲ್ಕು ನರನಿಗಂತೆಯೇ ನಾರಿಗಂ ಬಗೆಯೆ ।
ಜಗಕೆ ಕಾಣಿಪುದೊಂದು, ಮನೆಯ ಜನಕೊಂದು ॥
ಸೊಗಸಿನೆಳಸಿಕೆಗೊಂದು, ತನ್ನಾತ್ಮಕಿನ್ನೊಂದು ।
ಬಗೆಯಷ್ಟೋ ಮೊಗವಷ್ಟು - ಮಂಕುತಿಮ್ಮ ॥-ಕಗ್ಗ-195

'ಗೋಮುಖವ್ಯಾಘ್ರ' ಎಂಬ ಉಕ್ತಿಯನ್ನು ನಾವು ಬಹಳ ಕಾಲದಿಂದಲೂ ಕೇಳುತ್ತ ಬಂದಿದ್ದೇವೆ. ತಮ್ಮ ನಿಜಸ್ವರೂಪವನ್ನು ಮರೆಮಾಚಿ, ಸಮಾಜದ ಕಣ್ಣಿಗೆ ಮಣ್ಣೆರಚುತ್ತಾ ಬರುತ್ತಿರುವ, ಹಸುವಿನಂತೆ ಸಾಧುವಾಗಿ ತೋರುವ ಆದರೆ ಒಳಗೆ ದುಷ್ಟಗುಣಗಳನ್ನು ಹೊಂದಿರುವ ಹುಲಿಯಂತಹ ಕಪಟ ಸ್ವರೂಪಿಗಳು ನಮ್ಮ ಸುತ್ತಮುತ್ತಲು ಎತ್ತೆತ್ತಲೂ ತುಂಬಿರುವರು.

ನಿಜವಾದ 'ನಾನು' ಯಾರು? ನನ್ನತನ ಎಂದರೇನು? ಇದೊಂದು ಯಕ್ಷಪ್ರಶ್ನೆ ನನಗೆ. ಉತ್ತರದ ಹುಡುಕಾಟ ನಡೆದೇ ಇದೆ. ನಮ್ಮ ತಂದೆ ದಿವಂಗತ ಕೃಷ್ಣಮೂರ್ತಿಯವರು ಬಹಳ ಶಾಂತಮೂರ್ತಿ, ಸಹನಾಸ್ವರೂಪಿ, ತಾಳ್ಮೆಯಲ್ಲಿ ಮೇರುಪರ್ವತ!! ಇದು ಸಮಾಜದ ಅಭಿಪ್ರಾಯ. ಆದರೆ ನಿಜಸ್ವರೂಪದಲ್ಲಿ ಅವರು ತೀವ್ರ ಮುಂಗೋಪಿ, ಸಹನೆ ಶೂನ್ಯ!! 'ಕೃಷ್ಣಮೂರ್ತಿ' ಹೆಸರಿಗೆ ಬದಲಾಗಿ 'ನರಸಿಂಹಮೂರ್ತಿ' ಎಂದು ಹೆಸರಿಡಬೇಕಿತ್ತು ಎನ್ನುತ್ತಿದ್ದ ನಮ್ಮಮ್ಮನ ಮಾತುಗಳು ಇಂದಿಗೂ ನೆನಪಾಗುತ್ತದೆ. ಏಕೀ ವೈರುಧ್ಯ? ಎಲ್ಲಿ ಸಹಜತೆ?!

ಪ್ರತಿಯೊಬ್ಬರೂ ತಮ್ಮ ನಿಜಸ್ವರೂಪವನ್ನು ಮರೆಮಾಚಿ, ಸಮಯಸಂದರ್ಭಗಳಿಗೆ ತಕ್ಕಂತೆ ಒಂದಿಲ್ಲೊಂದು ಮುಖವಾಡವನ್ನು ಧರಿಸಿ ಸಮಾಜದ ಮುಂದೆ ಬಂದು ನಿಲ್ಲುವರು. ಮಾನ್ಯ ಡಿವಿಜಿಯವರ ಪ್ರಕಾರ ನರನಾರಿಯರು ಸೇರಿದಂತೆ ಎಲ್ಲರಿಗೂ ನಾಲ್ಕುಬಗೆಯ ಮುಖಗಳಿವೆ. ಹೊರಜಗತ್ತಿಗೊಂದು ಮುಖವಾದರೆ, ಮನೆಯವರಿಗೆ ಮತ್ತೊಂದು, ತನಗೋಸುಗವೇ ಮೊಗದೊಂದು ಮತ್ತು ಕಡೆಯದಾಗಿ ಅಂತರಾಳದ ಆತ್ಮಸ್ವರೂಪದ ಮುಖವಿನ್ನೊಂದು. ಮನುಷ್ಯನಿಗಿರುವ ಹಲವಾರು ವ್ಯಕ್ತಿತ್ವಗಳನ್ನು ಮಾನ್ಯ ಗುಂಡಪ್ಪನವರು ಈ ಪ್ರಸ್ತುತ ಮುಕ್ತಕದಲ್ಲಿ ಪ್ರಸ್ತಾಪಿಸಿರುವರು.

ಪ್ರತಿಯೊಬ್ಬ ಮನುಷ್ಯನೂ ತನ್ನ ಅಂತರಂಗದ ವ್ಯಕ್ತಿತ್ವಕ್ಕಿಂತ ಭಿನ್ನವಾದ ಮುಖವನ್ನು ಜಗತ್ತಿಗೆ ತೋರುತ್ತಿರುತ್ತಾನೆ. ಸಮಯ-ಸಂದರ್ಭಗಳಿಗನುಸಾರವಾಗಿ ಜಗವು ಮೆಚ್ಚುವಂತಹ ಮುಖವಾಡವನ್ನೇ ಅವನು ಧರಿಸುತ್ತಾನೆ. ಇದಕ್ಕೆ ಕಾರಣ ಹಲವಾರು. ಅಸಹಾಯಕತೆಯೂ ಇರಬಹುದು ಅಥವಾ ಸ್ವಾರ್ಥವೂ ಇರಬಹುದು. 'ಸಮಾಜಸೇವಕ'ರೆನ್ನುವ ಮುಖವಾಡವನ್ನು ಧರಿಸಿ ವಂಚಿಸುವ ಸ್ವಾರ್ಥಸಾಧಕ ರಾಜಕಾರಣಿಗಳ ಮುಖವಾಡವೂ ಇಂತಹುದೇ!! ಮನೆಯವರ ಎದುರಿಗೆ ಮತ್ತೊಂದು ಮುಖವಾಡ. ತನ್ನ ಕುಂದುಕೊರತೆಗಳು, ಬಲಹೀನತೆಗಳು, ಕೀಳರಿಮೆಗಳನ್ನು ಮರೆಮಾಚಿ, ತಾನೇ ಸರಿ ಎಂಬ ಒಣಪ್ರತಿಷ್ಠೆಯ, ದರ್ಪದ ಮುಖವಾಡ ಮನೆಯವರೆದುರು. ನಾಟಕಮಂಡಳಿಯ ನಟರಿದ್ದಂತೆ!! ತನ್ನನ್ನು ತಾನೇ ವಿಮರ್ಶೆಮಾಡಿಕೊಳ್ಳುವುದು ಮತ್ತೊಂದು ಮುಖ. ತನ್ನ ಗುಣಾವಗುಣಗಳು, ಸತ್ಯಾಸತ್ಯತೆಗಳು, ಆಲೋಚನೆಗಳನ್ನು ಅಳೆದು ತೂಗಿ, ಸರಿತಪ್ಪುಗಳನ್ನು ಎಣಿಸಿಗುಣಿಸಿದರೂ ಏನನ್ನೂ ಮಾಡಲಾರದ ಅಸಹಾಯಕ ಮುಖವದು. ತನ್ನ ಆಸೆ ಆಶಯಗಳು, ಆದ್ಯತೆಗಳು, ನಿಜಸ್ವಭಾವಗಳ ಸತ್ಯದ ಅರಿವಿದ್ದರೂ ಕೂಡ ಅದನ್ನು ಹೊರಜಗತ್ತಿಗೆ ತೋರಿದರೆ ತನ್ನ ಅಸ್ತಿತ್ವಕ್ಕೆಲ್ಲಿ ಧಕ್ಕೆ ಬರುವುದೋ ಎಂದು ಹೆದರಿದ ಮನುಜನು ಸಾಮಾನ್ಯವಾಗಿ ಅದನ್ನು ಮರೆಮಾಚಿಯೇ ಬದುಕುತ್ತಾನೆ. ಆತ್ಮಾವಲೋಕನದ, ಆಧ್ಯಾತ್ಮಕ್ಷೇತ್ರದ ಮತ್ತೊಂದು ಮುಖವು ಬದುಕಿನ ಕರಾಳಸತ್ಯಕ್ಕೆ ಹಿಡಿದ ಕನ್ನಡಿ. ಈ ಜಗತ್ತಿನ ನಶ್ವರತೆ, ಅಶಾಶ್ವತ ಬದುಕಿನ, ಜೀವನ್ಮರಣಗಳ ಸತ್ಯವನ್ನು ಬಯಲುಮಾಡಿ ತೋರುತ್ತದೆ. ಆದರೆ ಮಾನವನ ಭ್ರಮಿತ ಮನವು ಈ ಸತ್ಯವನ್ನು ಸುಲಭವಾಗಿ ನಂಬುವುದಿಲ್ಲ. ಈ ಸೂಕ್ಷ್ಮಪದರಗಳ, ಮುಖವಾಡಗಳ ನಡುವೆ ನಿಜವಾದ ನನ್ನ ಸ್ವರೂಪವನ್ನು ಕಂಡುಕೊಳ್ಳುವುದು ಹೇಗೆ?

ಮನುಜಕುಲವೊಂದೊಬ್ಬನಿನ್ನೊಬ್ಬನಂತಿಲ್ಲ ।
ತನುವಂಗಗಳೊಳೊಂದು, ರೂಪ ಗುಣ ಬೇರೆ ॥
ಮನದೊಳೊಬ್ಬೊಬ್ಬನೊಂದೊಂದು ಪ್ರಪಂಚವಿಂ ।
ತನುವೇಕದೊಳ್ ಬಹುಳ - ಮಂಕುತಿಮ್ಮ ॥-ಕಗ್ಗ-238

ಹಲವಾರು ಮುಖವಾಡಗಳನ್ನು ಧರಿಸಿ ಜೀವಿಸುತ್ತಿರುವ ಮಾನವಸಂಕುಲದಲ್ಲಿ ಒಬ್ಬರಿದ್ದಂತೆ ಮತ್ತೊಬ್ಬರಿಲ್ಲ. ಒಂದೇ ತಾಯಿಯ ಗರ್ಭದಲ್ಲಿ ಜನಿಸಿದ ಮಕ್ಕಳಲ್ಲಿಯೇ ಸಾಮ್ಯತೆ ಕಂಡುಬರುವುದಿಲ್ಲ. ದೇಹದ ಅಂಗಾಗಗಳಲ್ಲಿ ಸಾಮ್ಯತೆಯಿದ್ದರೂ ಬಾಹ್ಯಸ್ವರೂಪವು ಬೇರೆ ಬೇರೆ. ಪ್ರತಿಯೊಬ್ಬರದೂ ಪ್ರತ್ಯೇಕ ವಿಚಾರಧಾರೆ. ಒಬ್ಬೊಬ್ಬರದೂ ಒಂದು ವಿಭಿನ್ನ ಪ್ರಪಂಚವಿದ್ದಂತೆ.

ಮಾನವಕುಲದ ಅಂಗಾಂಗರಚನೆಯಲ್ಲಿ ಸಾಮ್ಯತೆಯಿದ್ದರೂ ರೂಪ, ಬಣ್ಣ, ಆಕಾರಗಳಲ್ಲಿ ವ್ಯತ್ಯಾಸವಿದೆ. ಬಾಹ್ಯ ವ್ಯತ್ಯಾಸದಂತೆ ಆಂತರಿಕ ಗುಣಸ್ವಭಾವಗಳಲ್ಲಿಯೂ ಸಾಕಷ್ಟು ಭಿನ್ನತೆಗಳಿವೆ. ಪ್ರಾದೇಶಿಕ ಭಿನ್ನತೆಗನುಸಾರವಾಗಿ ಮಾನವನ ರೂಪ, ಬಣ್ಣ, ಆಕಾರ ಹಾಗು ಜೀವನಶೈಲಿಯು ನಿರ್ಧರಿಸಲ್ಪಡುತ್ತದೆ. ಅವನ ವ್ಯಕ್ತಿತ್ವವನ್ನು ಅಲ್ಲಿನ ಸಾಮಾಜಿಕ, ಧಾರ್ಮಿಕ ಹಾಗು ಸಾಂಸ್ಕೃತಿಕ ಪರಿಸರವು ಸ್ವಲ್ಪಮಟ್ಟಿಗಾದರೂ ಪ್ರಭಾವಿಸುತ್ತದೆ. ಹಾಗಾಗಿ ಸ್ವಭಾವಸಾಮ್ಯತೆಯಿರುವ ವ್ಯಕ್ತಿಗಳು ಕಂಡುಬರುವುದು ಬಹು ವಿರಳ. ಪ್ರತಿಯೊಬ್ಬರ ವ್ಯಕ್ತಿತ್ವದಲ್ಲಿ ಭಿನ್ನತೆಯಿದ್ದರೂ, ಅಂತರಾಳದಲ್ಲಿ ಅದನ್ನು ನಿರ್ಮಿಸುವ ಸಹಜಗುಣಗಳು ಎಲ್ಲರಲ್ಲಿಯೂ ಒಂದೇ ಆಗಿರುತ್ತದೆ. ದಯೆ, ಕರುಣೆ, ಶಾಂತಿಸಹನೆ, ಪ್ರೀತಿಪ್ರೇಮ, ಕಾಮಕ್ರೋಧ, ಮದಮಾತ್ಸರ್ಯಗಳು ಇತ್ಯಾದಿ ಭಾವಗಳ ಸಮಗ್ರ ಪರಿಪಾಕವೇ ಮನಸ್ಸು, ಬುದ್ಧಿ, ಚಿತ್ತ!! ಪಾಶವೀ ಭಾವನೆಗಳನ್ನು ದಮನಮಾಡಿ, ದೈವೀಗುಣಗಳನ್ನು ಕ್ರೋಡೀಕರಿಸಿಕೊಂಡಾಗ ಮನಸ್ಸಿನ ಶುದ್ಧಿ. ಬಸವಣ್ಣನವರು ಹೇಳಿರುವ 'ಇದೇ ಅಂತರಂಗ ಶುದ್ಧಿ; ಇದೇ ಬಹಿರಂಗ ಶುದ್ಧಿ:' ತತ್ತ್ವದ ಸಾರವೇ ಇದು. ಭಾವಶುದ್ಧಿ ನಮ್ಮನ್ನು ನಾವರಿಯುವುದರಲ್ಲಿ ಮೊದಲ ಹೆಜ್ಜೆ ಹಾಗು ಆತ್ಮಾನುಸಂಧಾನಕ್ಕೆ ದಾರಿ.

ಒರ್ವ ನಾನೆಂದು ನೀನೆಂತು ತಿಳಿಯುವೆ ಜಗದಿ? ।
ನೂರ್ವರಣಗಿಹರು ನಿನ್ನಾತ್ಮಕೋಶದಲಿ ॥
ಪೂರ್ವಿಕರು, ಜತೆಯವರು, ಬಂಧುಸಖಶತ್ರುಗಳು ।
ಸರ್ವರಿಂ ನಿನ್ನ ಗುಣ - ಮಂಕುತಿಮ್ಮ ॥-ಕಗ್ಗ-338

ಮಾನವನ ಈ ಪರಿಯ ಗುಣಸ್ವಭಾವದ ಮೂಲವೆಲ್ಲಿಯದು? ಅವನ ವ್ಯಕ್ತಿತ್ವನಿರ್ಮಾಣಕ್ಕೆ ಅವಶ್ಯವಿರುವ ಮೂಲ ಸಾಮಗ್ರಿಗಳು ಎರಡು ನೆಲೆಗಳಿಂದ ದೊರೆಯುವುದೆಂದು ಸ್ಥೂಲವಾಗಿ ಪರಿಗಣಿಸಬಹುದು. ಇಂದ್ರಿಯಗೋಚರ ಪ್ರಪಂಚದಿಂದ, ಪಂಚೇಂದ್ರಿಯಗಳ ಮೂಲಕ ಪಡೆಯುವ ವಿಷಯಸಾಮಾಗ್ರಿ ಮೊದಲನೆಯದು. ಮನದಂತರಾಳದ ಮಥನದಿಂದ ದೊರೆಯುವ ಹಾಲ್ಬೆಣ್ಣೆ ಎರಡನೆಯದು.

ಹುಟ್ಟಿದಾರಭ್ಯ ನಮ್ಮ ಈ ಜೀವನಪ್ರಯಾಣದಲ್ಲಿ ಸಹಪ್ರಯಾಣಿಕರಾಗಿ ಜೊತೆಗೆ ಬರುವ ನಮ್ಮ ಕುಟುಂಬ, ಬಂಧು - ಬಾಂಧವರು, ಗುರು - ಹಿರಿಯರು, ಶತ್ರು - ಮಿತ್ರರಾದಿಯಾಗಿ ಸರ್ವರೂ ನಮ್ಮ ವ್ಯಕ್ತಿತ್ವವನ್ನು ಒಂದಿಲ್ಲೊಂದು ರೀತಿಯಲ್ಲಿ ಪ್ರಭಾವಿಸುತ್ತಾರೆ. ಅಂದರೆ ನಾವು ಜೀವಿಸುತ್ತಿರುವ ಸಮಾಜದಿಂದ ಪ್ರೇರಿತರಾಗಿ ಪಡೆದುಕೊಂಡ ಗುಣಗಳು ಒಂದಾದರೆ, ಅನುವಂಶೀಯವಾಗಿ ರಕ್ತಗತವಾಗಿ ಹರಿದುಬಂದಿರುವ ಗುಣಗಳು ಮತ್ತೊಂದೆಡೆ. ಇದನ್ನು ನಾವು acquired characteristics ಮತ್ತು inherited characteristics ಎಂದು ಗುರುತಿಸುತ್ತೇವೆ. ಗರ್ಭಸ್ಥ ಶಿಶುವಿಗೆ ತಂದೆತಾಯಿಯರ ಗುಣಸ್ವಭಾವಗಳ ಜೊತೆಗೆ ಅವರ ಪೂರ್ವಿಕರ, ಅಂದರೆ ಹಿಂದಿನ ತಲೆಮಾರಿನವರ ಗುಣಗಳೂ ಸೇರಿಕೊಳ್ಳುತ್ತವೆ. ಮನೆಯ ಸದಸ್ಯರು, ನೆರೆಹೊರೆಯವರು, ಶಾಲಾವಾತಾವರಣ, ಶಿಕ್ಷಕರು, ಮಿತ್ರರು ಮತ್ತು ವಿದ್ಯಾಭ್ಯಾಸದ ಜೊತೆಗೆ ಲೋಕಾನುಭವಗಳೆಲ್ಲಾ ಸೇರಿ ಒಬ್ಬನ ವ್ಯಕ್ತಿತ್ವವು ರೂಪುಗೊಳ್ಳುತ್ತದೆ. ಆದ್ದರಿಂದಲೇ ಮಾನ್ಯ ಡಿವಿಜಿಯವರು 'ತಾನೊಬ್ಬ ಏಕಮೇವಾದ್ವಿತೀಯ ವ್ಯಕ್ತಿ', 'ತನ್ನಿಂದಲೇ ಎಲ್ಲವೂ' ಎಂದು ನೀ ತಿಳಿಯಬೇಡ ಎಂದಿರುವರು. ಮಾನವನು ಸ್ವಯಂಭೂ ಮೂರ್ತಿಯಲ್ಲ. ಆ ಕಲ್ಲು ಒಂದು ನಿರ್ದಿಷ್ಟ ರೂಪ ತಳೆಯುವುದರಲ್ಲಿ ನಾನಾ ಕಲಾವಿದರ ಕೈವಾಡವಿರುತ್ತದೆ. ಮಾನವನ ಗುಣಸ್ವಭಾವಗಳು ಸಂಪೂರ್ಣವಾಗಿ ಅವನದೇ ಅಲ್ಲ. ಅವನೊಳಗೆ ಅಡಗಿರುವ ನೂರಾರು ಜನರ ಗುಣಗಳ ಪರಿಪಾಕದ ಮಿಶ್ರಣವದು. ಆದ್ದರಿಂದಲೇ 'ಸರ್ವರಿಂ ನಿನ್ನ ಗುಣ' ಎಂದಿರುವರು ಡಿವಿಜಿಯವರು.

ಅನುವಂಶೀಯವಾಗಿ ದತ್ತವಾಗಿರುವ ಗುಣಗಳನ್ನು ಬದಲಿಸುವುದು ಕಷ್ಟವಾದರೂ, ಸಾಮಾಜಿಕವಾಗಿ ಲಭ್ಯವಿರುವ ಸಾಮಗ್ರಿಗಳಲ್ಲಿ ಉಚಿತವಾದುದು ಯಾವುದು? ಅನುಚಿತವಾದುದು ಯಾವುದು? ಇದು ನಮ್ಮ ವಿವೇಚನೆಗೆ ಬಿಟ್ಟದ್ದು. ಸ್ವಂತಾನುಭವದ ಹಿನ್ನೆಲೆಯಲ್ಲಿ ಹರಳುಗೊಂಡ ಜ್ಞಾನಭಂಡಾರದ ಸಹಾಯದಿಂದ ನಮ್ಮ ಜೀವನಕ್ಕೆ ಉಚಿತವಾದದ್ದನ್ನು ಅಳವಡಿಸಿಕೊಂಡಾಗ ಮಾತ್ರ ನಮ್ಮ ವ್ಯಕ್ತಿತ್ವವು ಒಂದು ಸಾಕಾರರೂಪ ತಳೆಯುತ್ತದೆ.

ಈ ಪ್ರಪಂಚವು ತನ್ನ ಬಣ್ಣವನ್ನು ಬಹು ಆಕರ್ಷಕವಾಗಿ ನಮ್ಮ ಮುಂದೆ ಹರಡಿ ಮೋಡಿಮಾಡುತ್ತದೆ. ಈ ಆಕರ್ಷಣೆಯ ಸೆಳೆತದ ಭ್ರಮೆಗೆ ಸಿಲುಕಿದ ನಾವು ಈ ಭೂಮಿಯ ಮೇಲಿನ ನಮ್ಮ ಜೀವನದ ನಿಜವಾದ ಉದ್ದೇಶ, ಅರ್ಥಗಳನ್ನು ಕಂಡುಕೊಳ್ಳುವಲ್ಲಿ ವಿಫಲರಾಗುತ್ತೇವೆ. ಅದನ್ನು ಅರಿತುಕೊಳ್ಳುವಷ್ಟರಲ್ಲಿ ಕಾಲವು ಮಿಂಚಿಹೋಗಿರುತ್ತದೆ.

ಭೂಮಿಯಮೇಲಿನ ಮಾನವನ ಪಯಣದ ಕಾಲಾವಧಿ ಬಹಳ ಕಡಿಮೆ. ಜೀವನಪರ್ಯಂತ ಅವನನ್ನು ಮೊದಲು ಕಾಡುವುದು ಹೊಟ್ಟೆರಾಯನ ಗೋಳು. 'ಹೊಟ್ಟೆರಾಯನ ನಿತ್ಯದಟ್ಟಹಾಸವೊ ಬಾಳು' ಎಂದಿದ್ದಾರೆ ಮಾನ್ಯ ಗುಂಡಪ್ಪನವರು. 'ಉದರನಿಮಿತ್ತಂ ಬಹುಕೃತವೇಷಂ'!!! ಉದರನಿರ್ವಹಣೆಗಾಗಿ ನಾನಾವೇಷಗಳನ್ನು ತಳೆಯುತ್ತಾನೆ ಮಾನವ. ಕೇವಲ ನಶ್ವರವಾದ ಭೌತಿಕ ಅಗತ್ಯತೆಗಳ ಪೂರೈಕೆಗಾಗಿ ಮಾತ್ರವಷ್ಟೇ ಈ ಜೀವನವೇ? ಈ ನಿರಂತರ ಬೇಡಿಕೆಗಳನ್ನು ಪೂರೈಸಿಕೊಳ್ಳುವುದರಲ್ಲಿಯೇ ಅವನ ಜೀವನದ ಪ್ರಯಾಣ ಕೊನೆಗೊಳ್ಳುತ್ತದೆ. ಇತಿಹಾಸದ ಪುಟಗಳಲ್ಲಿ ಧೂಳಾಗಿ ಕಳೆದುಹೋಗುತ್ತಾನೆ ಹುಲು ಮಾನವ. ಇದನ್ನು ಸರಿಪಡಿಸಿಕೊಳ್ಳುವುದೆಂತು?

ತಿದ್ದಿಕೊಳೊ ನಿನ್ನ ನೀಂ; ಜಗವ ತಿದ್ದುವುದಿರಲಿ ।
ತಿದ್ದಿಕೆಗಮೊಂದು ಮಿತಿಯುಂಟು ಮರೆಯದಿರು ॥
ಉದ್ದ ನೀಂ ಬೆರಳನಿತು ಬೆಳೆದೀಯೆ ಸಾಮಿಂದೆ ।
ಸ್ಪರ್ಧಿಯೇ ತ್ರಿವಿಕ್ರಮಗೆ? - ಮಂಕುತಿಮ್ಮ ॥-ಕಗ್ಗ-292

ನಮ್ಮ ಮನದಂತರಾಳದ ಲೋಪದೋಷಗಳನ್ನು, ಕುಂದುಕೊರತೆಗಳನ್ನು ಮೊದಲು ಅರಿತು ಅದನ್ನು ಸರಿಪಡಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಕುರಿತು ಮಾನ್ಯ ಡಿವಿಜಿಯವರು ಈ ಪ್ರಸ್ತುತ ಮುಕ್ತಕದಲ್ಲಿ ಪ್ರಸ್ತಾಪಿಸಿದ್ದಾರೆ.

ಇತರರ ಕುಂದುಕೊರತೆಗಳನ್ನು ಎತ್ತಿ ತೋರುವ ಬೆರಳು ತನ್ನಲ್ಲಿನ ಲೋಪದೋಷಗಳನ್ನು ನಿರ್ಲಕ್ಷಿಸುತ್ತದೆ. ಸಾಮಾನ್ಯವಾಗಿ ನಾವು ಇತರರ ತಪ್ಪುಗಳನ್ನು ತಿದ್ದುವುದಕ್ಕೆಯೇ ಮೊದಲು ಮುಂದಾಗುತ್ತೇವೆ. ಸಲಹೆಗಳನ್ನು ನೀಡಬಹುದಾದರೂ ಅದಕ್ಕೂ ಒಂದು ಮಿತಿಯಿರುವುದು ಉತ್ತಮ. ಮೊದಲು ನಮ್ಮನ್ನು ನಾವು ಸರಿಪಡಿಸಿಕೊಳ್ಳುವುದು ಮೊದಲಾಗಬೇಕು. ಅಂದರೆ ನಮ್ಮ ಅಂತರಾಳದ ಭಾವನೆಗಳು, ಆಲೋಚನೆಗಳು, ನಡೆ - ನುಡಿ ಸ್ವಭಾವ ಸಮಸ್ತವೂ ಸಕಾರಾತ್ಮಕವಾಗಿ ಬದಲಾಗಬೇಕು. ಮನಃಪೂರ್ವಕವಾಗಿ ಆಮೂಲಾಗ್ರ ಪರಿವರ್ತನೆಗಾಗಿ ಪ್ರಯತ್ನಿಸಿದರೂ ಸ್ವಪ್ರಯತ್ನದಿಂದ ಒಬ್ಬ ವ್ಯಕ್ತಿ ಎಷ್ಟರಮಟ್ಟಿಗೆ ಬೆಳೆಯಬಹುದು? ಬೆರಳೆತ್ತರಕ್ಕೆ ಬೆಳೆಯಬಹುದಷ್ಟೆ. ಅಂದರೆ ನಮ್ಮ ವ್ಯಕ್ತಿತ್ವ ವಿಕಾಸಕ್ಕೂ ಮಿತಿಯುಂಟು ಎಂದಾಯಿತು. ಪುರಾಣದ ತ್ರಿವಿಕ್ರಮನಂತೆ ಆಕಾಶದೆತ್ತರಕ್ಕೆ ಬೆಳೆಯಲು ಸಾಧ್ಯವೇ ಎನ್ನುತ್ತಾರೆ ಡಿವಿಜಿಯವರು. ವಾಮನನಾಗಿ ಬಂದ ಮಹಾವಿಷ್ಣುವು ತ್ರಿವಿಕ್ರಮನಾಗಿ ಬೆಳೆದುನಿಂತು ಎರಡು ಹೆಜ್ಜೆಗಳಲ್ಲಿ ಭೂಮ್ಯಾಕಾಶಗಳನ್ನು ಅಳೆದು, ಮೂರನೆಯ ಹೆಜ್ಜೆಯನ್ನು ಬಲಿಚಕ್ರವರ್ತಿಯ ಶಿರದ ಮೇಲಿರಿಸಿ ಅವನನ್ನು ಪಾತಾಳಕ್ಕೆ ಕಳುಹಿದ ಕತೆಯಿದು. ಭೂಮಿಯ ಶಬ್ದ, ನಾದ, ಸದ್ದು ಗದ್ದಲಗಳನ್ನು ಮೀರಿ, ಆಂತರಿಕವಾಗಿ ಬೆಳೆದು ಯೋಗಿಯಾಗಿ ನಿಲ್ಲುವುದು ಸಾಮಾನ್ಯನಿಗೆ ಸುಲಭವಲ್ಲ. ನಮಗಿರುವ ಅಲ್ಪಮತಿಯ ಮಿತಿಯಲ್ಲಿ ಜಗದ ಅಂಕು ಡೊಂಕುಗಳನ್ನು ತಿದ್ದಲು ಸಾಧ್ಯವೇ? ಆತ್ಮಾವಲೋಕನದಿಂದ ಮನಸ್ಸು, ಬುದ್ಧಿಗಳನ್ನು ಶುದ್ಧಮಾಡಿಕೊಂಡು, ನಮ್ಮ ಲೋಪದೋಷಗಳನ್ನು ಅರಿತು, ಅದನ್ನು ಒಪ್ಪಿ, ನಮ್ಮನ್ನು ನಾವು ತಿದ್ದಿಕೊಂಡಾಗ ಮಾತ್ರ ಭಾವಶುದ್ಧವಾದೀತು ಹಾಗು ಸ್ವಲ್ಪಮಟ್ಟಿಗಾದರೂ ಆಂತರಿಕವಾಗಿ ಬೆಳೆಯುವುದಕ್ಕೆ ಸಾಧ್ಯವಾದೀತು.



# ಸ್ವಾಮಿ ವಿವೇಕಾನಂದ ಜಯಂತಿ

ಆರ್. ಶ್ರೀಧರ್

ಶ್ರೀ ಸ್ವಾಮಿ ವಿವೇಕಾನಂದ ಎಂಬ ಹೆಸರು ಕೇಳಿದ ತಕ್ಷಣ ಮನಸ್ಸಿಗೆ ಬರುವುದು ಒಂದು ಗಟ್ಟಿ ವ್ಯಕ್ತಿತ್ವದ ಶಕ್ತಿಯ ಚಿಲುಮೆ ಎಂಬುದು. ಭಾರತ ಕಂಡ ಅತ್ಯಂತ ಶ್ರೇಷ್ಠ ದಾರ್ಶನಿಕರು, ಸಂತರು, ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ತ್ವಜ್ಞಾನಿಗಳು, ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಪರಿಗಣಿತರಾಗಿದ್ದವರು ಹಾಗೂ ಆಧ್ಯಾತ್ಮಯೋಗಿ ಇನ್ನು ಹಲವಾರು ಚಿತ್ರಗಳು ನಮ್ಮ ಕಣ್ಣ ಮುಂದೆ ಬರುತ್ತವೆ. ಅತ್ಯಂತ ಕಿರಿಯ ವಯಸ್ಸಿನಲ್ಲೆ ಪ್ರಪಂಚಗೆದ್ದ ಒಬ್ಬ ಮಹಾನ್ ಸಾಧಕರು. ಇವರು ಮೂಲತಃ ಬಂಗಾಳಿಯವರು ಹುಟ್ಟಿದ್ದು 12ನೆ ಜನವರಿ 1863ರಲ್ಲಿ ಆಗಿನ ಕಲ್ಕತ್ತ, ಬೆಂಗಾಲ್ ಪ್ರೆಸಿಡೆನ್ಸಿ, ಬ್ರಿಟಿಷ್ ಇಂಡಿಯಾದಲ್ಲಿ ಇಂದಿನ ಕೊಲ್ಕೊತ, ಪಶ್ಚಿಮ ಬಂಗಾಳ, ಭಾರತ. ಮೂಲ ಹೆಸರು ನರೇಂದ್ರ ನಾಥ ದತ್ತ. ತಂದೆ ವಿಶ್ವನಾಥ ದತ್ತ ಮತ್ತು ತಾಯಿ ಭುವನೇಶ್ವರಿ ದೇವಿ.



ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ 'ವಿವೇಕಾನಂದ' ಎಂಬ ಹೆಸರನ್ನು ಪಡೆದರು. ಮೂಲತಃ ಅವರು ಕಲ್ಕತ್ತೆಯ ಸ್ಕಾಟಿಷ್ ಚರ್ಚ್ ಕಾಲೇಜಿನಲ್ಲಿ ತತ್ತ್ವಶಾಸ್ತ್ರ ಅಧ್ಯಯನ ಮಾಡಿದರು.

ನರೇಂದ್ರರಿಗೆ ರಾಮಕೃಷ್ಣರ ಬಗ್ಗೆ ಮೊದಲ ಪರಿಚಯ ಆದದ್ದು ವಿಲಿಯಮ್ ಹೆಸ್ಟಿಯವರ ತರಗತಿಯಲ್ಲಿ. ಹೆಸ್ಟಿಯವರು ವಿಲಿಯಮ್ ವರ್ಡ್ಸ್‌ವರ್ತ್ ಅವರ "ದ ಎಕ್ಸ್‌ಕರ್ಶನ್" ಎಂಬ ಕವಿತೆಯಲ್ಲಿನ "ಸಮಾಧಿ" ಪದವನ್ನು ವಿವರಿಸುವಾಗ! ಸಮಾಧಿಯ ನಿಜವಾದ ಅರ್ಥ ತಿಳಿಯಲು ದಕ್ಷಿಣೇಶ್ವರದ ರಾಮಕೃಷ್ಣರನ್ನು ಒಮ್ಮೆ ಭೇಟಿ ನೀಡಿ ಎಂದು ಸಲಹೆ ಇತ್ತರು. ಆಗ ಗುರುಗಳನ್ನು ನೋಡಲು ನರೇಂದ್ರರು ಉತ್ಸುಕರಾದರು. ಮೊದ ಮೊದಲು ಅವರಿಗೆ ರಾಮಕೃಷ್ಣರ ಸಾಂಗತ್ಯ ಮತ್ತು ಬೋಧನೆಗಳು ಹಿಡಿಸದೆ ಹೋದರೂ ಕ್ರಮೇಣ ಅವರ ಸಾಮೀಪ್ಯ ಜೀವನದ ಪರಮ ಸತ್ಯಗಳನ್ನು ಅರಿಯಲು ಮತ್ತು ಒಬ್ಬ ಸಿದ್ಧಪುರುಷರಾಗಲು ಕಾರಣವಾಯಿತು.

ಅವರ ಮೇಲೆ ಗುರುಗಳ ಪ್ರಭಾವ ಎಷ್ಟಾಯಿತು ಎನ್ನುವುದಕ್ಕೆ ಒಮ್ಮೆ ಗುರುಗಳ ಆಜ್ಞೆಯಂತೆ ಕಾಳಿಮಾತೆಯನ್ನು ಪ್ರಾರ್ಥಿಸಲು ಹೋಗಿ ಲೌಕಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ವಿಫಲರಾಗಿ ಪ್ರತಿಬಾರಿಯೂ ಮುಕ್ತಿಗಾಗಿ ಕೇಳಿಕೊಳ್ಳಲಷ್ಟೇ ಶಕ್ತರಾದರು. ಕೊನೆಗೆ ಅವರು ಸರ್ವಸಂಗ ಪರಿತ್ಯಾಗ ಮಾಡಿ ರಾಮಕೃಷ್ಣರನ್ನು ಗುರುಗಳನ್ನಾಗಿ ಸ್ವೀಕರಿಸಿ, ಅವರು ತೋರಿದ ದಾರಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಅವರು ಆಧ್ಯಾತ್ಮಿಕ ವಿದ್ಯಾಭ್ಯಾಸವನ್ನು ಹೆಚ್ಚಾಗಿ ಮಾಡಲು ಇದೂ ಒಂದು ಕಾರಣವಾಯಿತು.

ಗುರುಗಳ ಮರಣಾನಂತರ ಅವರು ರಾಮಕೃಷ್ಣ ಮಿಷನ್ ನನ್ನು ಸ್ಥಾಪಿಸಿ ದೇಶ ವಿದೇಶಗಳಲ್ಲಿ ಅವರ ಬೋಧನೆಗಳನ್ನು ಪ್ರಚಾರಪಡಿಸಿದ ಕೀರ್ತಿ ಇವರದು. ಅದರಲ್ಲೂ ವಿಶ್ವದ ಧರ್ಮಗಳ ಸಂಸತ್ತು! ಸೆ.11.1893 ರಂದು ವಿಶ್ವದ ಕೊಲಂಬಿಯನ್ ಪ್ರದರ್ಶನದ ಭಾಗವಾಗಿ ಈಗಿನ ಚಿಕಾಗೋದ, ಆರ್ಟ್ ಇನ್ಸ್ಟಿಟ್ಯೂಟ್ನ ಶಾಶ್ವತ ಸ್ಮಾರಕ ಕಲಾ ಭವನದಲ್ಲಿ (ಇಂದು ಇದು ವಿಶ್ವದ ಕಾಂಗ್ರೆಸ್ ಸಹಾಯಕ ಕಟ್ಟದ ಎಂದು ಗುರುತಿಸಲ್ಪಟ್ಟಿದೆ) ಅವರು ಸರಸ್ವತಿಗೆ ವಂದಿಸಿ ತಮ್ಮ ಪಾಂಡಿತ್ಯವನ್ನು ಮಂಡಿಸಲು ಪ್ರಾರಂಭಿಸಿದರು. ಭಾಷಣದ ಮೊದಲು ಅವರು "ಸಿಸ್ಟರ್ಸ್ ಅಂಡ್ ಬ್ರದರ್ಸ್ ಆಫ್ ಅಮೇರಿಕ"! ಎಂದು ಸಂಬೋಧಿಸಿ ಮಾತು ಆರಂಭಿಸಿ, ಅಲ್ಲಿ ನೆರೆದಿದ್ದ 7 ಸಾವಿರ ಜನಸಮೂಹ ನಿಂತು ಹೊಡೆದ ಚಪ್ಪಾಳೆಯ ಮೆಚ್ಚುಗೆ ಸೂಚಿತ ಗೌರವ ಪಡೆದರು. ಅದು ಎರಡು ನಿಮಿಷಗಳ ಕಾಲ ನಡೆಯಿತು. ಮೌನವು ಪುನಸ್ಥಾಪಿಸಿದಾಗ ಅವರು ತಮ್ಮ ಭಾಷಣವನ್ನು ಮುಂದುವರೆಸುತ್ತ ವಿಶ್ವದ ಅತ್ಯಂತ ಪ್ರಾಚೀನ ವೈಧಿಕ ಕ್ರಮ ಅನುಸರಿಸಿದ ಸನ್ಯಾಸಿಗಳ, ಮತ್ತು ಜಗತ್ತಿಗೆ ಸಹಿಷ್ಣುತೆ ಮತ್ತು ಸಾರ್ವತ್ರಿಕ ಸ್ವೀಕಾರ ಎರಡರ ಮಹತ್ವನ್ನು ವಿವರಿಸಿ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಿಂದೂ ಧರ್ಮದ ಬಗೆಗೆ ಆಸಕ್ತಿಯನ್ನು ಕೆರಳಿಸಿದರು. ಅದರಂತೆ "ನ್ಯೂಯಾರ್ಕ್ ಮತ್ತು ಲಂಡನ್" ನಗರಗಳಲ್ಲಿ ವೇದಾಂತ ಕೇಂದ್ರಗಳನ್ನು ಸ್ಥಾಪಿಸಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಭಾಷಣ ಮಾಡಿದರು.

ಇವರ ಸಾಧನೆಗೆ ಎಣೆಯೇ ಇಲ್ಲ. ಪ್ರಮುಖವಾಗಿ ಯಾವುದೇ ದೇಶ ಅಭಿವೃದ್ಧಿಯಾಗಬೇಕಾದರೆ ಅಲ್ಲಿನ ಯುವ ಸಮುದಾಯ ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಎಂಬುದು ಅವರ ಪ್ರಬಲ ನಂಬಿಕೆಯಾಗಿತ್ತು. ಅವರ ಬೋಧನೆಗಳಲ್ಲಿ ಪ್ರಮುಖವಾದವು ದೇಶದ ಪ್ರತಿಯೊಬ್ಬ ಯುವಕನು ಕಬ್ಬಿಣದಂತೆ ಗಟ್ಟಿಯಾದ ದೇಹ, ಉಕ್ಕಿನಂತಹ ನರಗಳನ್ನು ಹೊಂದಿ ಅತ್ಯನ್ನತ ಆತ್ಮವಿಶ್ವಾಸ ಮತ್ತು ಧೃಡ ನಂಬಿಕೆಯುಳ್ಳವನಾಗಿರಬೇಕು ಮತ್ತು ಅದಕ್ಕಾಗಿ ಅವರು ಬ್ರಹ್ಮಚರ್ಯವನ್ನು ಅಭ್ಯಾಸಮಾಡಬೇಕು ಎಂಬುದಾಗಿತ್ತು.

ಸ್ವತಃ ಅವರೇ ಬ್ರಹ್ಮಚರ್ಯವನ್ನು ಪಾಲಿಸಿದ್ದು ಮತ್ತು ಅದರ ಮಹತ್ವವನ್ನು ಬೋಧಿಸಿದ್ದು ವಿಶೇಷ.

ನವಭಾರತವನ್ನು ಕಟ್ಟಲು ಗಟ್ಟಿ ಮನಸ್ಸಿನ ವ್ಯಕ್ತಿಗಳಿಂದ ಮಾತ್ರವೇ ಸಾಧ್ಯ. ಭಾರತವನ್ನು ಕಾಡುತ್ತಿರುವ ಬಡತನ, ಅಜ್ಞಾನ, ಅಂಧಕಾರ, ಅಪನಂಬಿಕೆಗಳನ್ನು ಹೋಗಲಾಡಿಸಲು, ನವ ನವೀನ ಯುವ ಚಿಂತನೆಗಳಿಂದ ಕೂಡಿದ, ಬೇಧ ಭಾವ ತೊರೆದು, ಜಾತಿ ಧರ್ಮ, ಮೇಲು ಕೀಳು, ಸಿರಿವಂತ ಬಡವ ಎನ್ನದೆ ನಾವೆಲ್ಲರು ಒಂದೇ ಎಂಬ ಮನಸ್ಥಿತಿ ಇರುವ ಸುಶಿಕ್ಷಿತ ಯುವಕರಿಂದ ಮಾತ್ರ ಸಾಧ್ಯ ಎನ್ನುವುದು ಸ್ವಾಮಿ ವಿವೇಕಾನಂದರ ಅಚಲ ನಂಬಿಕೆಯಾಗಿತ್ತು. ಇಷ್ಟಲ್ಲದೆ ವಿದೇಶದವರನ್ನೂ ನಮ್ಮ ಅಣ್ಣ ತಮ್ಮರಂತೆ ಬಂಧುಗಳಂತೆ ನೋಡಬೇಕು, ನಾವೆಲ್ಲ ಒಂದೆ ಎಂದು ಸಾರುವ ಅವರ "ವಿಶ್ವ ಬ್ರಾತೃತ್ವ" ತತ್ವ ಎಲ್ಲೆಡೆ ಇಂದಿಗೂ ಹೆಚ್ಚು ಪ್ರಸ್ತುತ ಮತ್ತು ಪ್ರಶಂಸನೀಯ.

ಇಡೀ ವಿಶ್ವವೇ ಭಾರತದ ಕಡೆ ತಿರುಗಿ ನೋಡಲು ಇವರ ತತ್ವಗಳೇ ಪ್ರಮುಖ ಕಾರಣವೆಂದರೆ ತಪ್ಪಾಗುವುದಿಲ್ಲ. ಅದರಲ್ಲೂ ಹಿಂದು ಧರ್ವ ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗದೆ ವಿಶ್ವದಾದ್ಯಂತ ಪ್ರಸಿದ್ಧಿಯಾಗಲು ಕಾರಣವಾಯಿತು. ಇವರ ಸಾಧನೆಗೆ ಮಾರು ಹೋಗದ ಮನಸುಗಳೇ ಇಲ್ಲವೆಂದೇ ಹೇಳಬಹುದು. ಅವರಲ್ಲಿ ಸ್ವಾಮಿ ರವೀಂದ್ರನಾಥ ಠಾಗೂರ್ ರವರು, ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಪ್ರಮುಖರು. ನಮ್ಮ ರಾಷ್ಟ್ರಕವಿ ಕುವೆಂಪು ಅವರು "ಸ್ವಾಮಿ ವಿವೇಕಾನಂದ" ಎಂಬ ಕೃತಿಯಲ್ಲಿ ವಿವೇಕಾನಂದರ ಚಿಂತನೆ, ಸಾಧನೆಗಳ ಕುರಿತು ಅದ್ಭುತವಾಗಿ ವಿವರಿಸಿದ್ದಾರೆ.

ಅಚಾರ್ಯ ರವೀಂದ್ರನಾಥ್ ಠಗೋರ್ ರವರು ವಿವೇಕಾನಂದರನ್ನು ಕುರಿತು ಹೇಳಿದ ಮಾತು "ನೀವು ಭಾರತವನ್ನು ತಿಳಿಯಬೇಕಾದರೆ ಸ್ವಾಮಿ ವಿವೇಕಾನಂದರನ್ನು ಅಭ್ಯಾಸ ಮಾಡಿ" ಎಂದು. ಅವರಿಗೆ ವಿವೇಕಾನಂದರೆಂದರೆ ಅಷ್ಟು ಗೌರವ. ಮಹಾತ್ಮ ಗಾಂಧಿಯವರು ಸಹ ಸ್ವಾಮಿ ವಿವೇಕಾನಂದರಿಂದ ಪ್ರೇರಿತರಾಗಿದ್ದರು ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ. ಹೀಗೆಯೇ ಹೇಳುತ್ತಾ ಹೋದರೆ ಇವರಿಂದ ಪ್ರೇರಿತ ವ್ಯಕ್ತಿಗಳ ದೊಡ್ಡ ಪಟ್ಟಿಯೇ ಸಿಗುತ್ತದೆ. ಅಷ್ಟು ಕಡಿಮೆ ವಯಸ್ಸಿನಲ್ಲೆ ಸಾಧಿಸಿದ ಅವರ ಪಾಂಡಿತ್ಯಕ್ಕೆ ಸರಿಸಾಟಿಗಳಿಲ್ಲ. ಅವರೇ ಹೇಳಿದಂತೆ ನಿಜವಾದ ಶಿಕ್ಷಣ ಎಂದರೆ " ಮನುಷ್ಯನ ಒಳಗಿರುವ ಸುಪ್ತ ಪ್ರತಿಭೆಯ ನೈಜ ಅನಾವರಣ" , " ಪ್ರಪಂಚದ ಬದಲಾವಣೆಗೆ ಶಿಕ್ಷಣವೇ ಪ್ರಮುಖ ಮತ್ತು ಪ್ರಧಾನ ಅಸ್ತ್ರ" "ಜ್ಞಾನ ಎಂಬುದು ಅನೇಕತೆಯಲ್ಲಿ ಏಕತೆಯನ್ನು ಕಾಣುವ ಒಂದು ಮಾರ್ಗ" ಈ ಎಲ್ಲ ಹೇಳಿಕೆಯನ್ನು ನೋಡಿದರೆ ಅವರಿಗೆ ಶಿಕ್ಷಣದ ಬಗ್ಗೆ ಎಂತಹ ನಂಬಿಕೆ ಮತ್ತು ಗೌರವವಿತ್ತು ಎಂದು ತೋರಿಸುತ್ತದೆ. ಇನ್ನು ಯುವಕರನ್ನು ಕುರಿತಾಗಿ ಹೇಳಿದ "ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬುದು ದೇಶದ ಎಲ್ಲ ಯುವಕರನ್ನು ಎಚ್ಚರಿಕೆಯ ಸಂದೇಶ ಇಂದಿಗೂ ಪ್ರಸ್ತುತ.

ಸ್ವಾಮಿಗಳ ಪ್ರಕಾರ ಪ್ರತಿಯೊಬ್ಬ ಯುವಕನೂ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ದೇಶ ಏಳಿಗೆಗಾಗಿ ತಮ್ಮ ಸರ್ವಸ್ವವನ್ನು ಮುಡಿಪಾಗಿಟ್ಟು, ಸಧೃಢ, ಆರೋಗ್ಯವಂತ, ಗುಣವಂತ, ಚಿಂತನಾಶೀಲ, ಕ್ರಿಯಾಶೀಲ ಸಮಾಜವನ್ನು ನಿರ್ಮಾಣ ಮಾಡಬೇಕು ಎಂಬುದು. ಇಂತಹ ಅಮೋಘ ವ್ಯಕ್ತಿತ್ವ ಹೊಂದಿದ್ದ ಸ್ವಾಮಿ ವಿವೇಕಾನಂದರು, ದಿ. 04/07/1902 ರಂದು ಬೇಲೂರು ಮಠದಲ್ಲಿ ಧ್ಯಾನ ಮಾಡುತ್ತಿರುವಾಗಲೆ ತಮ್ಮ ಕೊನೆ ಉಸಿರೆಳೆದು ಇಹ ಲೋಕವನ್ನು ತ್ಯಜಿಸಿದರು. ಅವರಿಗೆ ಕೇವಲ 39 ವರ್ಷ ವಯಸ್ಸಾಗಿತ್ತು. ಅಷ್ಟು ಚಿಕ್ಕ ವಯಸ್ಸಿನಲ್ಲಿ ಈ ಮಟ್ಟದ ಸಾಧನೆ, ಪಾಂಡಿತ್ಯವನ್ನು ಪಡೆದವರು ತುಂಬಾ ವಿರಳ. ಸ್ವಾಮಿಗಳ ಸಾವು ಒಂದು ತುಂಬಲಾರದ ನಷ್ಟ ಭರತಮಾತೆಯ ಹೆಮ್ಮೆ ಪುತ್ರ ನಮ್ಮನ್ನು ಅಗಲಿ ಒಂದು ಶತಮಾನವೇ ಕಳೆದರೂ ಇಂದಿಗೂ ಅವರು ಎಷ್ಟು ಪ್ರಸ್ತುತ ಎಂಬುದು ನಾವು ತಿಳಿಯಬೇಕು. ಮನುಷ್ಯನ ದೇಹಕ್ಕೆ ಸಾವಿದೆ ಆದರೆ ಆವರ ಚಿಂತನೆಗಳಿಗಿಲ್ಲ ಎಂಬುದನ್ನು ನಾವೆಲ್ಲರು ಅರಿಯಬೇಕು ಮತ್ತು ಇದನ್ನು ನಮ್ಮ ಮುಂದಿನ ಪೀಳಿಗೆಗೂ ತಲುಪಿಸಬೇಕು .

ಇಂದಿಗೂ ಅವರ ಜನ್ಮ ದಿನವಾದ ಜನವರಿ 12ರಂದು ನಮ್ಮ ದೇಶದಲ್ಲಿ "ರಾಷ್ಟ್ರೀಯ ಯುವ ದಿನವನ್ನಾಗಿ" ಆಚರಿಸಲಾಗುತ್ತದೆ. ಶಾಲೆಗಳಲ್ಲಿ ಮಕ್ಕಳಿಗೆ ವಿವೇಕಾನಂದರ ಶೈಕ್ಷಣಿಕ ಚಿಂತನೆಗಳು, ನಾಯಕತ್ವದ ಮಹತ್ವ, ಹಿಂದೂ ಧರ್ಮದ ನೈಜ ಪರಿಕಲ್ಪನೆ ಅರ್ಥ, ದೇಶ ಸೇವೆ ಇನ್ನು ಮುಂತಾದ ಹಲವಾರು ವಿಚಾರಗಳನ್ನು ತಿಳಿಸಲಾಗುತ್ತದೆ.

ಸ್ವಾಮಿ ವಿವೇಕಾನಂದರ ಆದರ್ಶ , ಚಿಂತನೆಗಳು ಮತ್ತು ಅವರ ಅಪರೂಪದ ವ್ಯಕ್ತಿತ್ವ ಶತ ಶತಮಾನಗಳು ಕಳೆದರೂ ಮಾಗದಂತಹ ಅಂಶವಾಗಿರುತ್ತದೆ. ಅವರ ನಿಸ್ವಾರ್ಥ ಮನೋಭಾವ, ಸೇವಾಪರತೆ, ಅಹಿಂಸಾವಾದ, ವಿಶ್ವ ಭ್ರಾತೃತ್ವ ಮತ್ತು ಅವರೇ ಹೇಳುವಂತೆ ಯಾರು ನಿಜವಾದ ವಿವೇಕದಲ್ಲಿ ಆನಂದ ಹೊಂದುತ್ತಾರೋ ಅವರೇ ವಿವೇಕಾನಂದರಾಗುತ್ತಾರೆ ಎಂದು.

ಸ್ವಾಮಿ ವಿವೇಕಾನಂದ ಎಂಬುದು ಒಬ್ಬ ವ್ಯಕ್ತಿಯಲ್ಲ ಅದು ಒಂದು ಅದ್ಭುತ ಶಕ್ತಿ, ಸ್ಪೂರ್ತಿಯ ಚಿಲುಮೆ, ಗುಣಗಳ ಭಂಡಾರ "ಜೈ ಹಿಂದ್ ".



# ಹಿರಿಯರ ಬವಣೆ

ಟಿ.ಆರ್.ಮಂಜುನಾಥ, ಬೆಂಗಳೂರು

ಸಮಾಜದಲ್ಲಿ ಪ್ರತಿಯೊಬ್ಬನಿಗೂ ತನ್ನದೇ ಆದ ಜವಾಬ್ದಾರಿ ಇರುತ್ತದೆ. ತಂದೆ ತಾಯಿ ಮಕ್ಕಳನ್ನು ಚೆನ್ನಾಗಿ ಸಾಕಿ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು . ಮಕ್ಕಳು ವಯಸ್ಸಾದ ತಂದೆತಾಯಿಗಳ ಯೋಗಕ್ಷೇಮ ನೋಡಿಕೊಳ್ಳಬೇಕು. ತಂದೆತಾಯಿ ಮಕ್ಕಳನ್ನು ಸರಿಯಾಗಿ ಸಾಕದಿದ್ದರೆ ಅವರು ಸಮಾಜ ಕಂಟಕರು. ಹಾಗೆಯೇ ತಂದೆ-ತಾಯಿಯನ್ನು ಅವರ ವಯಸ್ಸಾದ ಕಾಲದಲ್ಲಿ ಚೆನ್ನಾಗಿ ನೋಡಿಕೊಳ್ಳದ ಮಕ್ಕಳೂ ಸಮಾಜ ಘಾತುಕರೇ.

ಆದರೆ ಇತ್ತೀಚಿನ ದಿನಗಳಲ್ಲಿ ತಂದೆತಾಯಿ ಮಕ್ಕಳನ್ನು ಅವಲಂಬಿಸುವುದು ಕಡಿಮೆಯಾಗಿದೆ. ತಮ್ಮ ವಯಸ್ಸಾದ ಕಾಲಕ್ಕೆ ಬೇಕಾದ ಎಲ್ಲ ಸೌಕರ್ಯಗಳನ್ನು ಅವರೇ ಮಾಡಿಕೊಂಡಿರುತ್ತಾರೆ. ಆದರೆ ದುರ್ದೈವದ ಸಂಗತಿ ಎಂದರೆ ತಂದೆತಾಯಿಯರ ಈ ಸೌಕರ್ಯಗಳನ್ನೂ ಕಿತ್ತುಕೊಳ್ಳುವ ಮಕ್ಕಳು ಇರುವುದು. ಇತ್ತೀಚೆಗೆ ಹಿರಿಯರ ರಕ್ಷಣೆಗೆ ಕಾನೂನು ವ್ಯವಸ್ಥೆ ಇದೆ. ಆದರೆ ಇಲ್ಲಿಯವರೆಗೆ ಬಹಳ ಜನ ಹಿರಿಯರು ಮಕ್ಕಳಿಂದ ಕಷ್ಟ ಅನುಭವಿಸಿದ್ದಾರೆ. ಹಾಗೆಯೇ ಅಂತಹ ಮಕ್ಕಳಿಗೆ ಬುದ್ಧಿಕಲಿಸಿದವರೂ ಇದ್ದಾರೆ. ಅಂತಹ ಒಂದೆರಡು ಘಟನೆ ಇಲ್ಲಿದೆ.

ಸೋಮಶೇಖರ್ ಸರಕಾರಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಪತ್ನಿ ರಾಗಿಣಿ, ಮಗ ಶ್ಯಾಮಸುಂದರ ಅವರ ಸಂಸಾರ. ಅಧಿಕಾರಿಯಾಗಿ ಬೇರೆ ಬೇರೆ ಕಡೆ ಕೆಲಸ ಮಾಡ ಬೇಕಾದಿದ್ದುದರಿಂದ, ಇದ್ದ ಒಬ್ಬನೇ ಮಗನ ವಿದ್ಯಾಭ್ಯಾಸಕ್ಕೋಸ್ಕರ ತಮ್ಮ ಸಂಪಾದನೆಯಲ್ಲಿ ಬೆಂಗಳೂರಿನ ಜಯನಗರ ಬಡಾವಣೆಯಲ್ಲಿ ಒಂದು ಮನೆ ಕಟ್ಟಿಸಿ, ಹೆಂಡತಿ ಮಗನನ್ನು ಅಲ್ಲಿ ಬಿಟ್ಟು, ತಾವು ವರ್ಗವಾದ ಕಡೆಗೆ ಒಬ್ಬರೇ ಹೋಗುತ್ತಿದ್ದರು. ಶ್ಯಾಮಸುಂದರ ಇಂಜಿನಿಯರ್ ವಿದ್ಯಾಭ್ಯಾಸ ಮುಗಿಸಿ ಪ್ರತಿಷ್ಠಿತ ಖಾಸಗಿ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದ. ಸ್ವಲ್ಪ ಕಾಲದ ನಂತರ ಶ್ಯಾಮಸುಂದರ ಇಷ್ಟಪಟ್ಟ ಹುಡುಗಿ ವಿಮಲಳೊಂದಿಗೆ ಅವನ ಮದುವೆ ನೆರವೇರಿತು. ಎಲ್ಲರೂ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು.

ಸೋಮಶೇಖರ್ ನಿವೃತ್ತರಾದ 2 ವರುಷಗಳ ನಂತರ ಅವರ ಪತ್ನಿ ರಾಗಿಣಿ ತೀರಿಕೊಂಡರು. ಮನೆಯಲ್ಲಿ ಮಗ ಸೊಸೆಯೊಂದಿಗೆ ಸಂಸಾರ ಸಾಗತೊಡಗಿತು. ಪತ್ನಿ ಇದ್ದಾಗ ಸೋಮಶೇಖರ್ ಮನೆಯ ಎಲ್ಲ ಖರ್ಚಿಗೂ ಹಣ ಕೊಡುತ್ತಿದ್ದರು. ಮಗನಿಂದ ಏನೂ ಪಡೆಯುತ್ತಿರಲಿಲ್ಲ. ಆದರೆ ಪತ್ನಿ ತೀರಿಕೊಂಡ ಮೇಲೆ ಮಗ ಹೇಗೂ ಮಗ ದುಡಿಯುತ್ತಾನಲ್ಲಾ ಎಂದು, ಮನೆಯ ಖರ್ಚಿಗೆ ಹಣಕೊಡುವುದನ್ನು ನಿಲ್ಲಿಸಿದರು. ಇದರಿಂದ ತಮ್ಮ ಮಗ ಮತ್ತು ಸೊಸೆಯಲ್ಲಿ ಬಹಳ ಬದಲಾವಣೆ ಕಂಡರು. ಮಗ ಮತ್ತು ಸೊಸೆ ಪ್ರತಿಯೊಂದಕ್ಕೂ ಸಿಡುಕುತ್ತಿದ್ದರು. ಎರಡು ರೂಮಿದ್ದ ಆ ಮನೆಯಲ್ಲಿ ಒಂದು ರೂಮಿನಲ್ಲಿ ಸೋಮಶೇಖರ್, ಇನ್ನೊಂದರಲ್ಲಿ ಮಗ ಸೊಸೆ ಇದ್ದರು.

ಒಂದು ದಿನ ಶ್ಯಾಮಸುಂದರ ತಂದೆಗೆ ಹೇಳಿದ "ಅಪ್ಪಾ ನೀವು ಈ ರೂಮಿನಲ್ಲಿರುವುದು ವಿಮಲಳಿಗೆ ಬಹಳ ತೊಂದರೆಯಾಗಿದೆ. ಅವಳಿಗೆ ಸ್ನಾನ ಮಾಡಿ ಬರಲು ಬಹಳ ಸಂಕೋಚ ಆಗುತ್ತಿದೆ. ಆದ್ದರಿಂದ ಕೆಳಗೆ ಇರುವ ಗ್ಯಾರೇಜ್ ರೂಮಿನಲ್ಲಿ ನೀವು ವಾಸಮಾಡಿದರೆ ಅನುಕೂಲ' ಎಂದು ತಿಳಿಸಿದ. ಅದಕ್ಕೆ ಸೋಮಶೇಖರ್ 'ವಿಮಲ ನನಗೆ ಮಗಳಿದ್ದ ಹಾಗೆ. ಅವಳಿಗೆ ಯಾಕೆ ಮುಜುಗರ ಆಗಬೇಕು?' ಎಂದು ಕೇಳಿದರು. ಮಗ ಸಿಟ್ಟಿನಿಂದ 'ನಾನು ಹೇಳಿದಷ್ಟು ಮಾಡಿ' ಎಂದ. ಸೋಮಶೇಖರ್ ಏನೂ ಹೇಳಲಿಲ್ಲ. ಆ ಮನೆ ಹೇಗೂ ಅವರ ಹೆಸರಿನಲ್ಲಿತ್ತು. ಅದನ್ನು ಮಾರಿ ಬೇರೆ ಎಲ್ಲಾದರು ಹೋಗಿ ಒಬ್ಬರೇ ವಾಸ ಮಾಡುವ ನಿರ್ಧಾರ ಮಾಡಿದರು. ಅವರು ವಾರದ ನಂತರ ಮಗನಿಗೆ 'ನೀನು ಮತ್ತು ವಿಮಲಾ ಸಿಮ್ಲಾಕ್ಕೆ ಹೋಗಿ ಬನ್ನಿ. ಹದಿನೈದು ದಿವಸಕ್ಕೆ ಇರಲು ಎಲ್ಲಾ ವ್ಯವಸ್ಥೆ ಮಾಡಿದ್ದೇನೆ'. ಎಂದು ಅವನ ಕೈಗೆ ಟಿಕೆಟ್ ಮತ್ತು ಹೋಟೆಲ್ ವ್ಯವಸ್ಥೆಯ ಕಾಗದ ಪತ್ರಗಳನ್ನು ನೀಡಿದರು.

ಮಗ ಸೊಸೆಗೆ ಬಹಳ ಖುಷಿಯಾಯಿತು. ಇಬ್ಬರೂ ಸಿಮ್ಲಾಕ್ಕೆ ಹೊರಟು ನಿಂತರು. ಅವರು ಅತ್ತ ಹೋದ ನಂತರ ಸೋಮಶೇಖರ್ ತಮ್ಮ ಮನೆ ಮಾರುವ ಪ್ರಯತ್ನಕ್ಕೆ ತೊಡಗಿದರು. 15 ದಿವಸದಲ್ಲಿ ಮಾರಬೇಕಾಗಿದ್ದುದರಿಂದ 3 ಕೋಟಿ ಬೆಲೆ ಬಾಳುವ ಮನೆಯನ್ನು 2 ಕೋಟಿ 75 ಲಕ್ಷಕ್ಕೆ ಮಾರಬೇಕಾಗಿ ಬಂತು. ತಕ್ಷಣ ಸ್ವಲ್ಪ ದೂರದಲ್ಲಿ ಒಂದು ಸಣ್ಣ ಅಪಾರ್ಟ್ ಮೆಂಟ್ ಕೊಂಡರು. ತಮ್ಮ ಸಾಮಾನೆಲ್ಲವನ್ನು ಅಲ್ಲಿಗೆ ಸಾಗಿಸಿದರು. ಮಗನಿಗೆ ಹತ್ತಿರದಲ್ಲಿ ಒಂದು 2 ರೂಮಿನ ಬಾಡಿಗೆ ಮನೆ ಗೊತ್ತು ಮಾಡಿ, ಕೆಲಸಗಾರರ ಸಹಾಯದಿಂದ ಮಗನ ಸಾಮಾನನ್ನು ಅಲ್ಲಿಗೆ ಸಾಗಿಸಿ ಸರಿಯಾಗಿ ಜೋಡಿಸಿ ಇಟ್ಟರು. ತಮ್ಮ ಮೊಬೈಲ್ ಸಿಮ್ ಬದಲಾಯಿಸಿ, ತಾವು ಮಾರಿದ ಮನೆ ಕಿತ್ತು ಕಟ್ಟುತ್ತಿದ್ದುದರಿಂದ ಅಲ್ಲಿದ್ದ ವಾಚಮನ್ ಗೆ ತಮ್ಮ ಹೊಸ ಮೊಬೈಲ್ ನಂಬರನ್ನು ಕೊಟ್ಟು, ತನ್ನ ಮಗ ಬಂದು ವಿಚಾರಿಸಿದರೆ, ನನಗೆ ಈ ನಂಬರಿಗೆ ಕರೆ ಮಾಡುವಂತೆ ತಿಳಿಸಿದರು.

ಪ್ರವಾಸ ಮುಗಿಸಿ ಬಂದ ಮಗನಿಗೆ ಮನೆ ಕೆಡವಿ ಹೊಸ ಮನೆ ಕಟ್ಟುತ್ತಿದಿದ್ದನ್ನು ನೋಡಿ ಆಶ್ಚರ್ಯವಾಯಿತು. ತಕ್ಷಣ ತಂದೆಗೆ ಕರೆ ಮಾಡಿದ. ಆದರೆ ಕರೆಯನ್ನು ಯಾರೂ ಸ್ವೀಕರಿಸಲಿಲ್ಲ. ಆಗ ಅಲ್ಲಿದ್ದ ವಾಚಮನ್ ಹತ್ತಿರ ವಿಚಾರಿಸಿದ. ಅದಕ್ಕೆ ಅವನು ಈ ಮನೆಯನ್ನು ಅವರು ಮಾರಿದ್ದಾರೆ. ಎಂದು ಹೇಳಿ ಬಂದವರು ಹಳೆ ಓನರ್ ಮಗ ಎಂದು ತಿಳಿಯುತ್ತಲೇ ಸೋಮಶೇಖರ್ ನಂಬರಿಗೆ ಕರೆ ಮಾಡಿದನು. ಸೋಮಶೇಖರ್ ಒಂದು ಟ್ಯಾಕ್ಸಿ ಮಾಡಿಕೊಂಡು ಅಲ್ಲಿಗೆ ಬಂದು ಮಗನನ್ನು ನೋಡಿ, 'ನಾನು ಮನೆ ಮಾರಿದ್ದೇನೆ. ಬೇರೆ ಕಡೆ ಒಂದು ಸಣ್ಣ

ಅಪಾರ್ಟ್ ಮೆಂಟಿನಲ್ಲಿ ಮನೆ ಕೊಂಡಿದ್ದೇನೆ. ಊಟ ತಿಂಡಿ ನನ್ನ ಮನೆಗೆ ಕೊಡುವಂತೆ ವ್ಯವಸ್ಥೆ ಮಾಡಿಕೊಂಡಿದ್ದೇನೆ. ಒಳ್ಳೆಯ ಊಟ ತಿಂಡಿ ಬರುತ್ತದೆ. ಆದ್ದರಿಂದ ನನ್ನ ಚಿಂತೆ ನಿನಗೆ ಬೇಡ. ನಿನಗೆ ಇದೇ ಏರಿಯಾದಲ್ಲಿ ಒಂದು 2 ರೂಮಿನ ಬಾಡಿಗೆ ಮನೆ ಗೊತ್ತು ಮಾಡಿದ್ದೇನೆ. ಅದರಲ್ಲಿ ನಿನ್ನ ಎಲ್ಲ ಸಾಮಾನನ್ನು ಜೋಡಿಸಿ ಇಟ್ಟಿದ್ದೇನೆ. ಅದಕ್ಕೆ ಒಂದು ವರುಷದ ಬಾಡಿಗೆಯನ್ನೂ ಕೊಟ್ಟಿದ್ದೇನೆ. ಮುಂದಿನದು ನಿನಗೆ ಸೇರಿದ್ದು. ತಗೋ ಬೀಗದ ಕೈ' ಎಂದು ಅವನಿಗೆ ಬಾಡಿಗೆ ಮನೆ ವಿಳಾಸ ಮತ್ತು ಕೀ ಕೊಟ್ಟು ಬಂದ ಕಾರಿನಲ್ಲಿ ಹಾಗೆ ಹೊರಟು ಹೋದರು. ಮಗ ಸೊಸೆ ಪೆಚ್ಚಾಗಿ ನೋಡುತ್ತ ನಿಂತರು.

*************************

ಬೆಂಗಳೂರು ನಗರದ ಹೋಟೆಲ್ ಒಂದಕ್ಕೆ ಬಹಳ ಹಸಿದಿದ್ದ ವಯಸ್ಕರು ಬಂದರು. ನನಗೆ ಹಸಿವಾಗಿದೆ. ಒಂದು ಊಟದ ಬೆಲೆ ಎಷ್ಟು? ಎಂದು ಅಲ್ಲಿದ್ದ ಪರಿಚಾರಕನನ್ನು ಕೇಳಿದರು. ಅದಕ್ಕೆ ಆತ ಪೂರ್ತಿ ಊಟಕ್ಕೆ 60 ರೂಪಾಯಿ. ಪ್ಲೇಟ್ ಊಟಕ್ಕೆ 30 ರೂಪಾಯಿ ಎಂದ. ಅದಕ್ಕೆ ಅವರು 'ನನ್ನ ಹತ್ತಿರ ಕೇವಲ ಹತ್ತು ರೂಪಾಯಿ ಇದೆ. ಅದಕ್ಕೆ ಎಷ್ಟು ಬರುವುದೋ ಅಷ್ಟು ಕೊಡುವಿರಾ' ಎಂದು ಕೇಳಿದರು. ಇವರನ್ನು ಗಮನಿಸುತ್ತಿದ್ದ ಹೋಟೇಲಿನ ಮಾಲಿಕ ಪರಿಚಾರಕನನ್ನು ಕರೆದು 'ಅವರಿಗೆ ಪ್ಲೇಟ್ ಊಟ ಕೊಡಲು ಹೇಳಿದ. ಆದರೆ ಅವರು ಅದರಲ್ಲಿ 3 ಭಾಗ ಮಾಡಿ ತಮ್ಮ ಪಾಲನ್ನು ತಿಂದು, ಕೌಂಟರಿನಲ್ಲಿದ್ದ ಮಾಲೀಕನಿಗೆ ದುಡ್ಡುಕೊಡಲು ಬಂದರು. ಆಗ ಮಾಲೀಕ 'ನೀವು ದುಡ್ಡು ಕೊಡುವುದು ಬೇಡ. ಅದು ನಿಮ್ಮಲ್ಲೇ ಇರಲಿ. ಆದರೆ ನಿಮ್ಮನ್ನು ನೋಡಿದರೆ, ನಿಮಗೆ ಏನೋ ತೊಂದರೆಯಿಂದ ಹೀಗಾಗಿದೆ ಎನಿಸುತ್ತಿದೆ.' ಎಂದನು

ಅದಕ್ಕೆ ಆ ಹಿರಿಯರು 'ನನ್ನ ಹೆಸರು ವೆಂಕಟಭಟ್ಟ. ಖಾಸಗಿ ಕಂಪನೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೆ. ಪತ್ನಿ ಶುಭ ಮತ್ತು ಮಗ ಸುಧಾಮನೊಂದಿಗೆ ಬಾಡಿಗೆಮನೆಯಲ್ಲಿ ವಾಸಮಾಡುತ್ತಿದ್ದೆ. ಬರುವ ಸಂಬಳದಲ್ಲಿ ಮಗನನ್ನು ಚೆನ್ನಾಗಿ ಓದಿಸಿದೆ. ಸ್ವಲ್ಪ ಉಳಿತಾಯ ಮಾಡಿ ಒಂದು 2 ರೂಮಿನ ಚಿಕ್ಕ ಮನೆಯನ್ನು ಮಾಡಿಕೊಂಡೆ. ಮಗ ಒಳ್ಳೆಯ ಕಂಪನಿಗೆ ಕೆಲಸಕ್ಕೆ ಸೇರಿದ. ಅವನಿಗೆ ಮದುವೆಯಾಗಿ ಒಂದು ಮಗುವು ಆಯಿತು. ಎಲ್ಲವೂ ಚೆನ್ನಾಗಿ ನಡೆಯುತ್ತಿತ್ತು. ಈಗ್ಗೆ 2 ವರುಷದ ಹಿಂದೆ ನನ್ನ ಪತ್ನಿ ತೀರಿಕೊಂಡಳು. ನಾನು ನನ್ನ ಉಳಿತಾಯದ ಹಣವನ್ನು ನನ್ನ ಮಗನಿಗೆ ಕೊಟ್ಟೆ. 2 ತಿಂಗಳ ಹಿಂದೆ ನನ್ನ ಮಗ ತನಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿ "ಈ ಮನೆಯ ಮೇಲೆ ಸ್ವಲ್ಪ ಸಾಲ ತೆಗೆಯುತ್ತೇನೆ' ಅದಕ್ಕೆ ಮನೆಯನ್ನು ನನ್ನ ಹೆಸರಿಗೆ ಮಾಡಿಕೊಡು ಎಂದ. ಹೇಗೂ ನನ್ನ ನಂತರ ಈ ಮನೆ ಅವನಿಗೆ ಸೇರುತ್ತದೆ. ಅದ್ದರಿಂದ ಈಗಲೇ ಅವನ ಹೆಸರಿಗೆ ಮಾಡಿದರೆ ತೊಂದರೆ ಏನೂ ಇಲ್ಲ ಎಂದು ಭಾವಿಸಿ ಮನೆ ಅವನ ಹೆಸರಿಗೆ ಮಾಡಿದೆ. ಮನೆ ಅವನ ಹೆಸರಿಗೆ ಆದ ನಂತರ ನನ್ನ ಮಗ ಮತ್ತು ಸೊಸೆಯ ವರ್ತನೆಯಲ್ಲಿ ಬಹಳ ಬದಲಾವಣೆ ಆಯಿತು. ಸರಿಯಾಗಿ ಊಟ ಹಾಕದೆ ಬಯ್ಯುವುದು, ಹೀಯಾಳಿಸುವುದು ಶುರುವಾಯಿತು. ಆದರೂ ನಾನು ಕಟ್ಟಿದ ಮನೆ ಬಿಡಲಾರದೆ ಅಲ್ಲೇ ಇದ್ದೆ. ನಿನ್ನೆ ಸೊಸೆ ನನ್ನ ಮೇಲೆ ಕಳ್ಳತನದ ಆರೋಪ ಹೊರಿಸಿದಳು. ಮಗ ನನ್ನನ್ನು ಮನೆಯಿಂದ ಹೊರಗೆ ಹಾಕಿದ. ಕೈಯಲ್ಲಿರುವುದು ಬರೇ ಹತ್ತು ರೂಪಾಯಿ. ನಿನ್ನೆಯಿಂದ ಏನೂ ತಿಂದಿರಲಿಲ್ಲ. ಆದರೆ ಹೊಟ್ಟೆ ಕೇಳಬೇಕಲ್ಲ. ಅದಕ್ಕೆ ನಿಮ್ಮ ಹೋಟೆಲಿಗೆ ಬಂದೆ' ಎಂದರು. ಆಗ ಹೋಟೆಲ್ ಮಾಲೀಕ 'ಮುಂದೇನು ಮಾಡುವಿರಿ' ಎಂದು ಕೇಳಿದ. ಅದಕ್ಕೆ ಆ ಹಿರಿಯರು 'ಎಲ್ಲಾದರೂ ಕೂಲಿ ನಾಲಿ ಮಾಡಿ ಬದುಕಬೇಕಷ್ಟೆ' ಎಂದರು. ಅದಕ್ಕೆ ಮರುಗಿದ ಮಾಲೀಕ 'ನೀವು ನಮ್ಮ ಹೋಟೆಲ್ ನಲ್ಲಿಯೇ ಕೆಲಸ ಮಾಡಿಕೊಂಡು ಇರಿ' ಎಂದ. ಅದಕ್ಕೆ ಅವರು 'ನನಗೆ ಅಡುಗೆ ತಿಂಡಿ ಮಾಡಲು ಬರುವುದಿಲ್ಲ' ಎಂದರು. ಆಗ ಮಾಲೀಕ 'ನನ್ನ ಲಾಡ್ಜ್ ಒಂದಿದೆ. ನೀವು ಅಲ್ಲಿ ರೂಮುಗಳ ಸ್ವಚ್ಛತೆ, ಬಂದವರ ವ್ಯವಸ್ಥೆ ನೋಡಿಕೊಳ್ಳಿ. ನಿಮಗೆ ಕೆಲಸವೂ ಆಯಿತು. ನನಗೆ ಒಬ್ಬ ನಂಬಿಕಸ್ತ ಕೆಲಸದವರೂ ಆಯಿತು' ಎಂದ. ಅದಕ್ಕೆ ಒಪ್ಪಿದ ಹಿರಿಯರಿಗೆ 'ಈಗ ಮೊದಲು ಚೆನ್ನಾಗಿ ಊಟಮಾಡಿ' ಎಂದು ಹೇಳಿ ಅವರಿಗೆ ಊಟ ಕೊಟ್ಟು ನಂತರ ತನ್ನ ಲಾಡ್ಜಿಗೆ ಕಳುಹಿಸಿದ.

ಈ ಎರಡು ಕಥೆಗಳಲ್ಲಿ ಬರುವ ಹಿರಿಯರು ಹೇಗೋ ತಮ್ಮ ದಾರಿಯನ್ನು ತಾವು ಕಂಡುಕೊಂಡರು. ಆದರೆ ಎಷ್ಟೋ ಹಿರಿಯರು ಪಡಬಾರದ ಬವಣೆ ಅನುಭವಿಸಿದ್ದಾರೆ. ಅದು ನಿಜಕ್ಕೂ ಶೋಚನೀಯ.

ಈ ಕಥೆಗಳನ್ನು ಓದಿ ಎಲ್ಲರೂ ಹೀಗೆ ಎಂದು ತೀರ್ಮಾನಕ್ಕೆ ಬರಬೇಡಿ. ತಂದೆತಾಯಿಯರಿಗೆ ಗೌರವ, ಪ್ರೀತಿ ಆದರಗಳನ್ನು ತೋರಿ, ಅವರ ಬಗ್ಗೆ ತುಂಬಾ ಕಾಳಜಿ ವಹಿಸಿದ ಮಕ್ಕಳೂ, ಸೊಸೆಯಂದಿರೂ ಇದ್ದಾರೆ . ಈ ಕಥೆಗಳನ್ನು ಮುಂಬರುವ ಬೃಂದಾವನವಾಣಿ ಸಂಚಿಕೆಗಳಲ್ಲಿ ಓದಿ.





# ಋತುಸಂಹಾರ

ಎಸ್. ರಂಗನಾಥ್, ಬೆಂಗಳೂರು

ಋತುಸಂಹಾರ – 6 ಸರ್ಗಗಳಿಂದ ಕೂಡಿದ ಈ ಕಾವ್ಯ ಗ್ರೀಷ್ಮ ಋತುವಿನಿಂದ ಹಿಡಿದು ವಸಂತ ಋತುವಿನವರೆಗೂ ಎಲ್ಲಾ ಋತುಗಳ ಸ್ವಾಭಾವಿಕವಾದ ಅಪ್ರತಿಮ ಹಾಗೂ ಸರಳವಾದ ವರ್ಣನೆಯನ್ನು ಪ್ರಸ್ತುತಗೊಳಿಸುತ್ತದೆ.

**ಗ್ರೀಷ್ಮ ಋತು**

12. ಅತ್ಯಂತ ಕಾವೇರಿದ ಬಿಸಿಲಿನ ಉಷ್ಣತೆಯಿಂದ ಸಂತಪ್ತವಾಗಿ ಮಾರ್ಗದಲ್ಲಿಯೇ ಅತ್ಯಧಿಕವಾಗಿ ಕಾದಿರುವ ಧೂಳಿನ ರಾಶಿಗಳಿಂದ ಸುಡುತ್ತಿರುವ ಸರ್ಪವು ಕೆಳಮುಖವಾಗಿ ಪೂಂಕರಿಸುತ್ತಾ ನೇರವಾದ ಗಮನದಿಂದ ನವಿಲಿನ ಗರಿಗಡಿಯಲ್ಲಿ ವಿಶ್ರಮಿಸುತ್ತಿದೆ :-

ರವೇರ್ ಮಯೂಖೈರತಿಮಾತ್ರತಾಪಿತೋ ಭೃಶಂ ವಿದಹ್ಯಮಾನಃ ಪಥಿ ತಪ್ತಪಾಂಸುಭಿಃ |
ಅವಾಂಙ್ಮುಖೋ ಜಿಹ್ಮಗತಿಃ ಶ್ವಸನ್ ಫಣೀ ಮಯೂರಸ್ಯ ತಲೇ ನಿಷೀದತಿ || (1.13)

13. ಪ್ರಜ್ವಲಿಸುತ್ತಿರುವ ಅಗ್ನಿಯಂತೆ ಅತ್ಯಂತ ತೀಕ್ಷ್ಣವಾದ ಸೂರ್ಯನ ಕಿರಣಗಳಿಂದ ಬಳಲಿ ಬೆಂಡಾದ ಪ್ರಾಣ ಮತ್ತು ಶರೀರವುಳ್ಳ ನವಿಲುಗಳು ತನ್ನ ಗರಿಗಳ ನೆರಳಿನಲ್ಲಿ ಮುಖವನ್ನು ಇಟ್ಟು ಮಲಗಿರುವ ಅತ್ಯಂತ ಸಮೀಪದಲ್ಲಿರುವ ಸರ್ಪಗಳನ್ನೂ ಕೊಲ್ಲುವುದಿಲ್ಲ :-

ಹುತಾಗ್ನಿಕಲ್ಪೈಃ ಸವಿತುರ್ಗಭಸ್ತಿಭಿಃ ಕಲಾಪಿನಃ ಕ್ಲಾಂತಶರೀರಚೇತಸಾಃ |
ನ ಭೋಗಿನಂ ಘ್ನಂತಿ ಸಮೀಪವರ್ತಿನಂ ಕಲಾಪಚಕ್ರೇಷು ನಿವೇಶಿತಾನನಂ || (1.16)

14. ಹಣ್ಣಾದ ಎಲೆಗಳಿಂದ ತುಂಬಿದ ವೃಕ್ಷದಲ್ಲಿ ವಾಸಿಸುವ ಪಕ್ಷಿಗಳು ಶ್ವಾಸ ನಿಶ್ವಾಸವನ್ನು ನಡೆಸುತ್ತಿವೆ. ಬೇಸಿಗೆಯಿಂದ ಬಳಲಿರುವ ಕಪಿಗಳ ಸಮೂಹವು ಪರ್ವತದಲ್ಲಿರುವ ಹಸಿರಾದ ಗಿಡಗಳ ಆಶ್ರಯವನ್ನು ಆಶ್ರಯಿಸುತ್ತವೆ. ಕಾಡುಕೋಣಗಳ ಸಮೂಹ ನೀರಿಗಾಗಿ ಎಲ್ಲೆಡೆ ಓಡಾಡುತ್ತಿವೆ. ಮೃಗಗಳು ಧೈರ್ಯದಿಂದ ಕೆರೆ ಬಾವಿಗಳಿಗೆ ಬಂದು ನೀರನ್ನು ಕುಡಿಯುತ್ತಿವೆ :-

ಶ್ವಸಿತಿ ವಿಹಗವರ್ಗಃ ಶೀರ್ಣಪರ್ಣದ್ರುಮಸ್ಥಃ
ಕಪಿಕುಲಂ ಉಪಯಾತಿ ಕ್ಲಾಂತಂ ಅದ್ರೇಃ ನಿಕುಂಜಮ್ |
ಭ್ರಮತಿ ಗವಯಯೂಥಃ ಸರ್ವತಸ್ತೋಯಮಿಚ್ಛನ್
ಚರಭಕುಲಂ ಅಜಿಹ್ಮಂ ಪ್ರೋದ್ಧರತಿ ಅಂಬುಕೂಪಾತ್ || (1.23)

**ವರ್ಷಋತು**

15. ಅತ್ಯಧಿಕ ಬಾಯಾರಿಕೆಯಿಂದ ವ್ಯಾಕುಲಗೊಂಡ ಚಾತಕಪಕ್ಷಿ ಸಮೂಹದ ಪ್ರಾರ್ಥನೆಗೊಳಪಟ್ಟಿರುವ, ನೀರಿನ ಭಾರದಿಂದ ಬಗ್ಗಿ ತೂಗಾಡುತ್ತಿರುವ ಅತ್ಯಧಿಕ ಮಳೆಗೈಯ್ಯುವ ಕಿವಿಗಿಂಪಾಗಿ ಧ್ವನಿ ಉಂಟು ಮಾಡುವ ಮೋಡಗಳು ನಿಧಾನವಾಗಿ ಚಲಿಸತೊಡಗಿದೆ : -

ತೃಷಾಕುಲೈಶ್ಚಾತಕಪಕ್ಷಿಣಾಂ ಕುಲೈಃ ಪ್ರಯಾಚಿತಾಸ್ ತೋಯಭರಾವಲಂಬಿನಃ |
ಪ್ರಯಾಂತಿ ಮಂದಂ ಬಹುಧಾರವರ್ಷಿಣೋ ಬಲಾಹಕಾಃ ಶ್ರೋತ್ರಮನೋಹರಸ್ವನಾಃ || (2.3)

16. ಈ ವರ್ಷಋತುವಿನಲ್ಲಿ ಇಂಪಾಗಿ ಧ್ವನಿಗೈಯ್ಯುತ್ತಿರುವ ನವಿಲುಗಳು ಹೆಣ್ಣು ನವಿಲುಗಳೊಂದಿಗೆ ಸಮ್ಮಿಲನವನ್ನಪೇಕ್ಷಿಸಿ ತಮ್ಮ ಗರಿಗಳನ್ನು ಬಿಚ್ಚಿ ಪರಸ್ಪರ ಚುಂಬಿಸುತ್ತಾ ನರ್ತಿಸುತ್ತಿರುವುದು ಎಲ್ಲೆಡೆ ತೋರುತ್ತಿದೆ.

ಸದಾ ಮನೋಜ್ಞಂ ಸ್ವನದುತ್ಸವೋತ್ಸುಕಂ ವಿಕೀರ್ಣವಿಸ್ತೀರ್ಣಕಲಾಪಶೋಭಿತಂ |
ಸಸಂಭ್ರಮಾಲಿಂಗನಚುಂಬನಾಕುಲಂ ಪ್ರವೃತ್ತನೃತ್ಯಂ ಕುಲಂ ಅದ್ಯ ಬರ್ಹಿಣಾಮ್ || (2.6)

17. ಬಿಳಿಯ ಕಮಲದ ಕಾಂತಿಯಂತೆ ಪ್ರಕಾಶವನ್ನು ಹೊಂದಿರುವ ಮೋಡಗಳಿಂದ ಸ್ಪರ್ಶವಾಗಿರುವ ಕಲ್ಲುಬಂಡೆಗಳನ್ನು ಹೊಂದಿರುವ, ನಾಲ್ಕು ದಿಕ್ಕಿನಿಂದಲೂ ಧುಮುಕುತ್ತಿರುವ ನೀರಿನ ಝರಿಗಳಿಂದ ಶೋಭಿಸುತ್ತಿರುವ ಪರ್ವತಶ್ರೇಣಿಗಳು ನೃತ್ಯ ಮಾಡುತ್ತಿರುವ ನವಿಲುಗಳಿಂದ ಕಂಗೊಳಿಸುತ್ತಾ ಜನರನ್ನು ಉತ್ಕಂಠಿತರನ್ನಾಗಿ ಮಾಡುತ್ತವೆ.

ಸಿತೋತ್ಪಲಾಭಾಂಬುಧಚುಂಬಿತೋಪಲಾಃ ಸಮಾಚಿತಾಃ ಪ್ರಸ್ರವಣೈಃ ಸಮನ್ತತಃ |
ಪ್ರವೃತ್ತನೃತ್ಯೈಃ ಶಿಖಿಭಿಃ ಸಮಾಕುಲಾಃ ಸಮುತ್ಸುಕತ್ವಂ ಜನಯಂತಿ ಭೂಧರಾಃ || (2.16)

**ಶರದೃತು**

18. ಕಾಶಾಂಶುಕಾ ವಿಕಚಪದ್ಮಮನೋಜ್ಞವಕ್ತ್ರಾ
ಸೋನ್ಮಾದಹಂಸರವನೂಪುರನಾದರಮ್ಯಾ |
ಆಪಕ್ವಶಾಲಿರುಚಿರಾ ತನುಗಾತ್ರಯಷ್ಟಿ:
ಪ್ರಾಪ್ತಾ ಶರನ್ನವವಧೂರಿವ ರೂಪರಮ್ಯಾ || (3.1)

ಅರಳಿದ ತಾಳೆ ಪುಷ್ಪಗಳೇ ಶುಭ್ರವಸ್ತ್ರವಾಗಿರುವ, ವಿಕಸಿತ ಕಮಲಗಳೇ ಮನೋಹರವಾದ ಮುಖವಾಗಿರುವ, ಮದಮತ್ತವಾದ ಹಂಸಗಳ ಕಲರವವೇ ಕಾಲ್ಗೆಜ್ಜೆಯ ಧ್ವನಿಯಾಗಿರುವ, ಪರಿಪಕ್ವವಾದ ಶಾಲಿಧ್ಯಾನಗಳಿಂದ ಮನೋಜ್ಞವಾದ ಕೋಮಲ ಶರೀರವುಳ್ಳ ಶರದೃತು ನೂತನ ಮಧುಮಗಳಂತೆ ಪ್ರವೇಶಿಸಿದಳು.

19. ಕಾಶ್ಯೈರ್ಮಹೀ ಶಿಶಿರದೀಧಿತಿನಾ ರಜನ್ಯೋ
ಹಂಸೈರ್ ಜಲಾನಿ ಸರಿತಾಂ ಕುಮುದೈಃ ಸರಾಂಸಿ |
ಸಪ್ತಚ್ಛದೈಃ ಕುಸುಮಭಾರನತೈರ್ ವನಾಂತಾಃ
ಶುಕ್ಲೀಕೃತಾನಿ ಉಪವನಾನಿ ಚ ಮಾಲತೀಭಿಃ || (3.2)

ಶರದೃತುವಿನಲ್ಲಿ ಭೂಮಿಯು ಕಾಶ ಕುಸುಮಗಳಿಂದ, ರಾತ್ರಿಯು ತಂಪಾದ ಚಂದ್ರಕಿರಣಗಳಿಂದ, , ಸರೋವರದ ಜಲವು ಹಂಸಗಳಿಂದ ಹಾಗೂ ಕಮಲಗಳಿಂದ, ಸರೋವರವು ಪುಷ್ಪಗಳಿಂದ, ವೃಕ್ಷವು ಹೂಗಳಿಂದ, ಅರಣ್ಯಪ್ರದೇಶಗಳು ಜಾತಿ ಪುಷ್ಪಗಳಿಂದ ಉದ್ಯಾನಗಳು ಬಿಳಿಯಾಗಿ ಕಾಣಿಸುತ್ತಿವೆ.

20. ಕಾರಂಡವಾವಲಿವಿಘಟ್ಟಿತವೀಚಿಮಾಲಾಃ
ಕಾದಂಬಸಾರಸಚಯಾಕುಲತೀರದೇಶಾಃ ।
ಕುರ್ವಂತಿ ಹಂಸವಿರುತೈಃ ಪರಿತೋ ಜನಸ್ಯ
ಪ್ರೀತಿಂ ಸರೋರುಹರಜೋರುಣಿತಾಸ್ ತಟಿನ್ಯಃ ॥ (3.8)

ಕಾರಂಡವ ಪಕ್ಷಿಗಳ ಪಂಕ್ತಿಗಳಿಂದ ಅಘಾತಗೊಂಡ ತರಂಗಗಳುಳ್ಳ ಮತ್ತು ಕಮಲ ಪುಷ್ಪಗಳ ಪರಾಗಗಳಿಂದ ಕೆಂಪಾದ ತಟವುಳ್ಳ ನದಿಯ ಎಲ್ಲೆಡೆಗಳಲ್ಲಿ ಹಂಸ ಸಮೂಹದ ನಾದಗಳಿಂದ ಜನರಿಗೆ ಪ್ರೇಮಾತಿಶಯವುಂಟಾಗುತ್ತಿದೆ.

21. ಸೋನ್ಮಾದಹಂಸಮಿಥುನೈರ್ ಉಪಶೋಭಿತಾನಿ
ಸ್ವಚ್ಛಪ್ರಫುಲ್ಲಕಮಲೋತ್ಪಲಭೂಷಿತಾನಿ ।
ಮಂದಪ್ರಭಾತಪವನೋದ್ಗತವೀಚಿಮಾಲಾನಿ
ಉತ್ಕಂಠಯಂತಿ ಸಹಸಾ ಹೃದಯಂ ಸರಾಂಸಿ॥ (3.11)

ಈ ಋತುವಿನಲ್ಲಿ ಉನ್ಮತ್ತವಾದ ಹಂಸಯುಗಲಗಳಿಂದ ಶೋಭಿತವಾದ ನಿರ್ಮಲವಾದ ನೀರು, ಪ್ರಾತಃಕಾಲದ ಮಂದ ಗಾಳಿಯಿಂದ ಉಂಟಾದ ಸುಂದರ ಅಲೆಗಳ ಪಂಕ್ತಿಗಳುಳ್ಳ ಸರೋವರಗಳು ಪ್ರೇಕ್ಷಕರನ್ನು ಉತ್ಕಂಠಿತರನ್ನಾಗಿಸುತ್ತದೆ.

22. ನಷ್ಟಂ ಧನುರ್ಬಲಭಿದೋ ಜಲದೋದರೇಷು
ಸೌದಾಮಿನೀ ಸ್ಫುರತಿ ನಾದ್ಯ ವಿಯತ್ಪತಾಕಾ ।
ಧುನ್ವಂತಿ ಪಕ್ಷಪವನೈರ್ ನ ನಭೋ ಬಲಾಕಾಃ
ಪಶ್ಯಂತಿ ನೋನ್ನತಮುಖಾ ಗಗನಂ ಮಯೂರಾಃ ॥ (3.12)

ಶರದೃತುವಿನ ದಿನಗಳಲ್ಲಿ ಆಕಾಶದಲ್ಲಿಯ ಕಾಮನಬಿಲ್ಲು ಮೋಡಗಳ ಮಧ್ಯೆ ನಾಶವಾಗಿದೆ. ಅಮೋಘವಾದ ದೃಢವಾದ ಮಿಂಚಿನ ಬಳ್ಳಿಗಳು ಸ್ಫುರಿತವಾಗುವುದಿಲ್ಲ. ಬೆಳ್ಳಕ್ಕಿಗಳು ಆಕಾಶದಲ್ಲಿ ತಮ್ಮ ರೆಕ್ಕೆಗಳನ್ನು ಚಲಿಸದೆ ಸಂಚರಿಸುತ್ತಿವೆ. ನವಿಲುಗಳು ಮೇಲುಮುಖ ಮಾಡಿ ಆಕಾಶವನ್ನು ನೋಡುತ್ತಿಲ್ಲ.

23. ನೃತ್ಯಪ್ರಯೋಗರಹಿತಾಃ ಶಿಖಿನೋ ವಿಹಾಯ ಹಂಸಾನ್
ಉಪೈತಿ ಮದನೋ ಮಧುರಪ್ರಗೀತಾನ್ ।
ಮುಕ್ತ್ವಾ ಕದಂಬಕುಟಜಾರ್ಜುನಸರ್ಜನೀಪಾನ್
ಸಪ್ತಚ್ಛದಾನುಪಗತಾ ಕುಸುಮೋದ್ಗಮಶ್ರೀಃ ॥ (3.13)

ಶರತ್ಕಾಲದಲ್ಲಿ ಮನ್ಮಥನು ನೃತ್ಯ ಮಾಡದ ನವಿಲುಗಳನ್ನು ಬಿಟ್ಟು ಕರ್ಣಾನಂದವಾಗಿ ಗಾನ ಮಾಡುವ ಹಂಸಗಳನ್ನು ಹೊಂದಿರುತ್ತಾನೆ ಮತ್ತು ಅರ್ಜುನ, ಸರ್ಜ, ನೀಪ ವೃಕ್ಷಗಳಿಗಿಂತ ಏಳೆಲೇ ವೃಕ್ಷಗಳು (ಬಾಳೆಗಿಡಗಳು) ಮನೋಹರವಾಗಿ ಕಂಗೊಳಿಸುತ್ತಿವೆ.

24. ಶೇಫಾಲಿಕಾಕುಸುಮಗಂಧಮನೋಹರಾಣಿ
ಸ್ವಸ್ಥಸ್ಥಿತಾಂಜನಕುಲಪ್ರತಿನಾದಿತಾನಿ
।ಪರ್ಯಂತಸಸ್ಥಿತಮೃಗೀನಯನೋತ್ಪಲಾನಿ
ಪ್ರೋತ್ಕಂಠಯತ್ಯುಪವನಾನಿ ಮನಾಂಸಿ ಪುಂಸಾಮ್ ॥ (3.14)

ಬಿಳಿಯ ಬಣ್ಣದ ಶೇಫಾಲಿಕ ಹೂವಿನ ಸುಗಂಧವು ಮನೋಹರವಾಗಿದೆ. ಸುಖವಾಗಿ ನೆಮ್ಮದಿಯಿಂದ ಕುಳಿತು ಒಂದಕ್ಕೊಂದು ಪ್ರತಿಧ್ವನಿ ನೀಡುವ ಪಕ್ಷಿಗಳು, ಬೇಕಾದಲ್ಲಿ ಕುಳಿತಿರುವ ಹೆಣ್ಣು ಜಿಂಕೆಗಳ ಮನೋಹರವಾದ ಕಪ್ಪುಕಣ್ಣುಗಳು ಕಪ್ಪು ಕಮಲಗಳಂತೆ ತೋರುತ್ತವೆ. ಹೀಗೆ ಸುಂದರವಾದ ಉದ್ಯಾನಗಳು ಜನರ ಮನಸ್ಸನ್ನು ಆಕರ್ಷಿಸುತ್ತವೆ.

25. ಸಂಪನ್ನಶಾಲಿನಿಚಯಾವೃತಭೂತಲಾನಿ
ಸ್ವಸ್ಥಸ್ಥಿತಪ್ರಚುರಗೋಕುಲಶೋಭಿತಾನಿ ।
ಹಂಸೈಃ ಸಸಾರಸಕುಲೈಃ ಪ್ರತಿನಾದಿತಾನಿ
ಸೀಮಾನ್ತರಾಣಿ ಜನಯಂತಿ ನೃಣಾಂ ಪ್ರಮೋದಂ ॥ (3.16)

ಶರತ್ಕಾಲದಲ್ಲಿ ಸಂಪೂರ್ಣ ಭೂಭಾಗವು ಸಮೃದ್ಧವಾದ ಧ್ಯಾನಗಳಿಂದ ಆವೃತ್ತವಾಗಿದೆ ಮತ್ತು ದಷ್ಟಪುಷ್ಟವಾದ ಶರೀರವುಳ್ಳ ದನಕರುಗಳ ಸಮೂಹದಿಂದ ಸುಂದರವಾಗಿ ಶೋಭಿಸುತ್ತಾ, ಸಾರಸ ಪಕ್ಷಿ ಸಂಕುಲಗಳೊಂದಿಗೆ ಹಂಸಗಳು ಪ್ರತಿಧ್ವನಿಸುತ್ತಿರುವ ಗ್ರಾಮ ಸೀಮಾಂತ ಪ್ರದೇಶವು ಜನರನ್ನು ಉನ್ಮತ್ತಗೊಳಿಸುತ್ತಿದೆ.

26. ಹಂಸೈರ್ಜಿತಾ ಸುಲಲಿತಾ ಗತಿರಂಗನಾನಾಮ್
ಅಂಬೋರೂಹೈರ್ವಿಕಸಿತೈರ್ಮುಖಚಂದ್ರಕಾಂತಿಃ ।
ನೀಲೋತ್ಪಲೈರ್ಮದಕಲಾನಿ ವಿಲೋಕಿತಾನಿ
ಭ್ರೂವಿಭ್ರಮಾಶ್ಚ ರುಚಿರಾಸ್ತನುಭಿಸ್ತರಂಗೈಃ ॥ (3.17)

ಶರದೃತುವಿನಲ್ಲಿ ಹಂಸಗಳು ಸುಂದರ ಅಂಗನೆಯರ ಗಮನವನ್ನು ಜಯಿಸಿವೆ, ವಿಕಸಿತವಾದ ಕಮಲಗಳು ಅಂಗನೆಯರ ಮುಖ ಚಂದ್ರದ ಕಾಂತಿ ಜಯಿಸಿವೆ, ನೀಲಿ ಕಮಲಗಳು ಸ್ತ್ರೀಯರ ನೋಟಗಳನ್ನು ಜಯಿಸಿವೆ ಹಾಗೂ ಸೂಕ್ಷ್ಮ ತರಂಗಗಳು ಯುವತಿಯರ ಭ್ರೂಭಂಗವನ್ನು ಜಯಿಸಿವೆ.

27. ಸ್ಫುಟಕುಮುದಚಿತಾನಾಂ ರಾಜಹಂಸಸ್ಥಿತಾನಾಮ್
ಮರಕತಮಣಿಭಾಸಾ ವಾರಿಣಾ ಭೂಷಿತಾನಾಂ ।
ಶ್ರಿಯಂ ಅತಿಶಯರೂಪಾಂ ವ್ಯೋಮ ತೋಯಾಶಯಾನಾಂ
ವಹತಿ ವಿಗತಮೇಘಂ ಚಂದ್ರತಾರಾವಕೀರ್ಣಮ್ ॥ (3.21)

ಶರತ್ಕಾಲದಲ್ಲಿ ಮೋಡಗಳಿಂದ ರಹಿತವಾದ ಮತ್ತು ಚಂದ್ರನ ನಕ್ಷತ್ರಗಳಿಂದ ಶೋಭಿತವಾದ ಆಕಾಶ, ಅರಳಿದ ಕುಮುದಗಳಿಂದ ಮನೋಹರವಾದ ರಾಜಹಂಸಗಳಿಂದ ಅಲಂಕೃತಗೊಂಡ ನೀಲಮಣಿ ಪ್ರಕಾಶದಂತಿರುವ ನೀರಿನಿಂದ ವಿಭೂಷಿತವಾದ ಜಲಾಶಯಗಳು ಅತ್ಯಂತ ಶೋಭೆಯಿಂದ ಪ್ರಕಾಶಿಸುತ್ತಿವೆ.

28. ಸ್ತ್ರೀಣಾಂ ವಿಹಾಯ ವದನೇಷು ಶಶಾಂಕ ಲಕ್ಷ್ಮೀಂ
ಕಾಮಂ ಚ ಹಂಸವಚನಂ ಮಣಿನೂಪುರೇಷು ।
ಬಂಧೂಕ ಕಾಂತಿಂ ಅಧರೇಷು ಮನೋಹರೇಷು
ಕಾಪಿ ಪ್ರಯಾತಿ ಸುಭಗಾ ಶರದಾಗಮಶ್ರೀಃ ॥ (3.25)

ಮನೋಹರವಾದ ಶರತ್ಕಾಲವು ಸುವಾಸಿನಿಯರ ಮುಖದಲ್ಲಿ ಚಂದ್ರನ ಕಾಂತಿಯನ್ನು ಬಿಟ್ಟು, ಮನೋಹರವಾದ ಮಧುರವಾದ ಹಂಸಗಳ ಕಲರವವನ್ನು ಸ್ತ್ರೀಯರ ಕಾಲ್ಗೆಜ್ಜೆಯಲ್ಲಿ ಬಿಟ್ಟು, ಬಂಧೂಕ ಪುಷ್ಪಗಳ ಕಾಂತಿಯನ್ನು ಸ್ತ್ರೀಯರ ಅಧರಗಳಲ್ಲಿ ವಿಪುಲವಾಗಿ ಬಿಟ್ಟು ಬೇರೆ ಎಲ್ಲಿಯೋ ಹೋಗುತ್ತಿದ್ದಾಳೆ.

**ಹೇಮಂತ ಋತು**

18. ಪ್ರಭೂತಶಾಲಿಪ್ರಸವೈಶ್ಚಿತಾನಿ ಮೃಗಾಂಗನಾಯೂಥವಿಭೂಷಿತಾನಿ ।
ಮನೋಹರಕ್ರೌಂಚನಿನಾದಿತಾನಿ ಸೀಮಾಂತರಾಣ್ಯುತ್ಸುಕಯಂತಿ ಚೇತಃ ॥ (4.8)

ಪ್ರಚುರವಾದ ಧಾನ್ಯ ರಾಶಿಗಳಿಂದ ಪರಿಪೂರ್ಣವಾಗಿರುವ ಮತ್ತು ಹೆಣ್ಣು ಜಿಂಕೆಗಳ ಸಮೂಹದಿಂದ ಶೋಭಿತವಾದ ಹಾಗೂ ಕ್ರೌಂಚ ಪಕ್ಷಿಗಳ ಕಲರವದಿಂದ ಧ್ವನಿಗೈಯುತ್ತಿರುವ ಗ್ರಾಮಾಂತರ ಪ್ರದೇಶಗಳು ಮನೋಹರವಾಗಿದೆ.

19. ಬಹುಗುಣರಮಣೀಯೋ ಯೋಷಿತಾಂ ಚಿತ್ತಹಾರೀ
ಪರಿಣತಬಹುಶಾಲಿವ್ಯಾಕುಲಗ್ರಾಮಸೀಮಾ ।
ಸತತಂ ಅತಿಮನೋಜ್ಞಃ ಕ್ರೌಂಚಮಾಲಾಪರೀತಃ
ಪ್ರದಿಶತು ಹಿಮಯುಕ್ತಃ ಕಾಲ ಏಷ ಸುಖಂ ವಃ ॥ (4.18)

ಅನೇಕ ವಿಧವಾದ ಗುಣಗಳಿಂದ ರಮಣೀಯವಾದ, ಸ್ತ್ರೀಯರ ಮನೋಹಾರಿಯಾದ, ಪರಿಪಕ್ವವಾಗಿರುವ ಧಾನ್ಯಗಳಿಂದ ಪರಿಪೂರ್ಣಗೊಂಡ ಗ್ರಾಮದ ಸೀಮಾ ಪ್ರದೇಶಗಳಿಂದ ಮತ್ತು ಮನೋಹರವಾದ ಕ್ರೌಂಚ ಪಕ್ಷಿಗಳಿಂದ ಶೋಭಿತವಾದ, ಉಪಯುಕ್ತವಾದ ಹೇಮಂತ ಋತು ತಮ್ಮೆಲ್ಲರಿಗೆ ಸದಾ ಸುಖವನ್ನು ಉಂಟುಮಾಡಲಿ.

**ಶಿಶಿರ ಋತು**

20. ಪ್ರರೂಢಶಾಲ್ಯಂಶುಚಯೈರ್ಮನೋಹರಂ ಕ್ವಚಿತ್ ಸ್ಥಿತಕ್ರೌಂಚನಿನಾದರಾಜಿತಮ್ ।
ಪ್ರಕಾಮಕಾಮಂ ಪ್ರಮದಾಜನಪ್ರಿಯಂ ವರೋರುಕಾಲಂ ಶಿಶಿರಾಹ್ವಯಂ ಶೃಣು ॥ (5.1)

ಹೇ ಪ್ರಿಯತಮೆ, ಕೆಲವೆಡೆ ಪಕ್ವವಾದ ಹಣ್ಣಾದ ಶಾಲಿಧಾನ್ಯಗಳಿಂದ ಮತ್ತು ಕಬ್ಬುಗಳ ಸಮೂಹದಿಂದ ಕಂಗೊಳಿಸುತ್ತಾ ಹಾಗೂ ಮತ್ತೆ ಕೆಲವೆಡೆ ಕ್ರೌಂಚಪಕ್ಷಿಗಳು ಸುಂದರವಾಗಿ ಕಲರವಗೈಯ್ಯುವುದರಿಂದ ಶೋಭಿಸುತ್ತಾ, ಅತ್ಯಧಿಕ ಭಾವೋದ್ರೇಕ ಉಂಟುಮಾಡುವುದರಿಂದ ಸ್ತ್ರೀಯರಿಗೆ ಪ್ರಿಯವಾದ ಶಿಶಿರವೆಂಬ ಋತುವಿನ ವರ್ಣನೆಯನ್ನು ಆಲಿಸು.

**ವಸಂತ ಋತು**

21. ಪ್ರಫುಲ್ಲಚೂತಾಂಕುರತೀಕ್ಷ್ಣಸಾಯಕಃ
ದ್ವಿರೇಫಮಾಲಾವಿಲಸದ್ಧನುರ್ಗುಣಃ ।
ಮನಾಂಸಿ ವೇದ್ಧುಂ ಸುರತಪ್ರಸಂಗಿನಾಂ
ವಸಂತಯೋದ್ಧಾ ಸಮುಪಾಗತಃ ಪ್ರಿಯೇ ॥ (6.1)

ಹೇ ಪ್ರಿಯತಮೆ, ವಿಕಸಿತವಾದ ಮಾವಿನ ಎಳೆಯದಾದ ಚಿಗುರುಗಳೇ ಬಾಣವಾಗಿರುವ, ದುಂಬಿಗಳು ಪಂಕ್ತಿಗಳೇ ಬಿಲ್ಲಿನ ಹಗ್ಗ ಮಾಡಿಕೊಂಡಿರುವ ವಸಂತನೆಂಬ ಯೋಧನು ರಸಿಕ ರತಿಕ್ರೀಡಾಸಕ್ತ ಕಾಮಿಗಳ ಮನಸ್ಸನ್ನು ಬಾಧಿಸಲು ಪ್ರಾಪ್ತನಾಗಿದ್ದಾನೆ.

22. ಕಿಂ ಕಿಂಶುಕೈಃ ಶುಕಮುಖಚ್ಛವಿಭಿರ್ನ ಭಿನ್ನಂ
ಕಿಂ ಕರ್ಣಿಕಾರಕುಸುಮೈರ್ನ ಕೃತಂ ನು ದಗ್ಧಂ ।
ಯತ್ಕೋಕಿಲಃ ಪುನರಯಂ ಮಧುರೈರ್ವಚೋಭಿರ್
ಯೂನಾಂ ಮನಃ ಸುವದನಾನಿಹಿತಂ ನಿಹಂತಿ ॥ (6.20)

ಈ ವಸಂತ ಋತುವಿನಲ್ಲಿ ಗಿಳಿಯ ಕೆಂಪು ಕೊಕ್ಕಿನಂತೆ ಪ್ರಕಾಶಮಾನವಾದ ಪಲಾಶಪುಷ್ಪವು ಪ್ರೇಮಿಗಳ ಮನಸ್ಸುಗಳನ್ನು ನೋಯಿಸುತ್ತಿದೆಯಲ್ಲ? ಆಗಲೇ ಈ ಪ್ರೇಮಿಗಳ ಮನಸ್ಸುಗಳು ಬೆಂಕಿಯ ಜ್ವಾಲೆಯ ಬಣ್ಣದ ಕರ್ಣಿಕಾರ ಪುಷ್ಪಗಳಿಂದ ದಹಿಸಲ್ಪಡುತ್ತಿವೆ. ಮತ್ತೇಕೆ ಈ ಕೋಗಿಲೆಗಳು ಮಧುರವಾದ ಗಾನದಿಂದ ವ್ಯಥೆಗೊಳಿಸುತ್ತಿವೆ?.

23. ಪುಂಸ್ಕೋಕಿಲೈಃ ಕಲವಚೋಭಿರುಪಾತ್ತಹರ್ಷೈಃ
ಕೂಜದ್ಭಿರುನ್ಮದಕಲಾನಿ ವಚಾಂಸಿ ಭೃಂಗೈಃ ।
ಲಜ್ಜಾನ್ವಿತಂ ಸವಿನಯಂ ಹೃದಯಂ ಕ್ಷಣೇನ
ಪರ್ಯಾಕುಲಂ ಕುಲಗೃಹೇಪಿ ಕೃತಂ ವಧೂನಾಂ ॥ (6.21)

ಸಂತೋಷಗೊಂಡ ಗಂಡು ಕೋಗಿಲೆಗಳ ಇಂಪಾದ ಕಲರವ ಮತ್ತು ಅತ್ಯಧಿಕ ಮದದಿಂದ ಉನ್ಮತ್ತವಾಗಿರುವ ದುಂಬಿಗಳ ಗುನುಗುನುವಿಕೆ ಮನೆಗಳಲ್ಲಿ ವಿನಯದಿಂದ ತಮ್ಮ ಅತ್ತೆಮಾವಂದಿರ ಸೇವೆಯಲ್ಲಿ ತೊಡಗಿರುವ ನವವಧುಗಳನ್ನು ವ್ಯಾಕುಲಚಿತ್ತರನ್ನಾಗಿಸಿ, ಅವರು ಲಜ್ಜಾಪೂರ್ಣರಾಗಿದ್ದಾರೆ.

24. ಆಲಂಬಿಹೇಮರಸನಾಃ ಸ್ತನಸಕ್ತಹಾರಾಃ
ಕನ್ದರ್ಪದರ್ಪಶಿಥಿಲೀಕೃತಗಾತ್ರಯಷ್ಟ್ಯಃ ।
ಮಾಸೇ ಮಧೌ ಮಧುರಕೋಕಿಲಭೃಂಗನಾದೈ
ರ್ನಾರ್ಯೋ ಹರಂತಿ ಹೃದಯಂ ಪ್ರಸಭಂ ನರಾಣಾಂ ॥ (6.24)

ವಸಂತ ಕಾಲದಲ್ಲಿ ನೇತಾಡುತ್ತಿರುವ ಸ್ವರ್ಣ ಮೇಖಲೆಯನ್ನು ಧರಿಸಿ ಕಾಮಬಾಧೆಯಿಂದ ಪೀಡಿತರಾಗಿ ಸ್ತನಗಳಲ್ಲಿ ಹಾರವು ಶೋಭಿಸುತ್ತಿರುವ ಕಾಮಿನಿಯರು ಕೋಗಿಲೆ ಮತ್ತು ಮರಗಳ ಇಂಪಾದ ಧ್ವನಿಗಳಿಂದ ಪುರುಷರ ಚಿತ್ತವನ್ನು ಬಲಾತ್ಕಾರವಾಗಿ ಆಕರ್ಷಿಸುತ್ತಾರೆ.

25. ಸಮದಮಧುಭರಾಣಾಂ ಕೋಕಿಲಾನಾಂ ಚ ನಾದೈಃ
ಕುಸುಮಿತಸಹಕಾರೈಃ ಕರ್ಣಿಕಾರೈಶ್ಚ ರಮ್ಯಾಃ ।
ಇಷುಭಿರಿವ ಸುತೀಕ್ಷ್ಣೈರ್ಮಾನಸಂ ಮಾನಿನೀನಾಂ
ತುದತಿ ಕುಸುಮಮಾಸೋ ಮನ್ಮಥೋದ್ವೇಜನಾಯ ॥ (6.27)

ಹೂಗಳಿಂದ ತುಂಬಿದ ಮಾವಿನ ಮರಗಳಿಂದ ಮತ್ತು ಹೂಗಳಿಂದ ಸುಂದರವಾಗಿ ತೋರುವ ವಸಂತಮಾಸವು ಹರಿತವಾದ ಬಾಣಗಳಂತಿರುವ ಮಧುಪಾನದಿಂದ ಉನ್ಮತ್ತವಾದ ದುಂಬಿಗಳ ಹಾಗೂ ಕೋಗಿಲೆಗಳ ನಿನಾದಗಳಿಂದ ಕಾಮಿನಿಯರ ಮನಸ್ಸನ್ನು ವ್ಯಥೆಗೊಳಿಸುತ್ತದೆ.



# ಕಲರ್ ಫುಲ್ ಲೈಫ್

**ಗೀತಾ ಭಟ್,** *ಬೆಂಗಳೂರು*

**ಆ**ವತ್ತು ಯಾಕೋ ಮನಸ್ಸಿಗೆ ತುಂಬಾ ಬೇಜಾರು. ಇಷ್ಟಪಟ್ಟು ತಗೊಂಡಿರೋ ಹೊಸ ಮೊಬೈಲ್ ಕಳ್ಕೊಂಡು ಆವತ್ತಿಗೆ ಒಂದು ವಾರ ಆಗಿತ್ತು. ಸ್ಕೂಲ್ ಮುಗಿಸಿ ಬಂದವಳಿಗೆ ತುಂಬಾ ಸುಸ್ತು ಅನಿಸಿ ಹಾಗೆ ಮಲ್ಕೊಂಡು ಬಿಟ್ಟೆ. ಇನ್ನೇನು ನಿದ್ದೆ ಹತ್ತಿತ್ತು, ಡೋರ್ ಬೆಲ್ ಆಗಿದ್ದು ಕೇಳಸ್ತು. ನಾವು ಮನೇಲಿ ಇದೀವಿ ಅಂದ್ರೆ ದ್ವಾರಪಾಲಕರ ಕೆಲಸ ನಮ್ದೇನೆ.

ಎದ್ದು ಹೋಗಿ ಡೋರ್ ಓಪನ್ ಮಾಡಿದ್ರೆ ಅಮೆಜಾನ್ ನಿಂದ ಕೊರಿಯರ್ ಬಂದಿತ್ತು...ಅದೂ ನನ್ನ ಹೆಸರಿಗೆ..ನನಗೆ ನೆನಪಿರೋ ಹಾಗೆ ನಾನು ಏನೂ ಆರ್ಡರ್ ಮಾಡಿರ್ಲಿಲ್ಲ. ನಮ್ಮ ಪಾಕೆಟ್ನಿಂದ ಖರ್ಚು ಮಾಡದೆ, ನಮ್ಮ ಹೆಸರಿಗೆ ಕೊರಿಯರ್ ತಗೋಳೋದು ಇದ್ಯಲ್ಲ....... ಆಹಾ! ಅದರ ಆನಂದನೇ ಬೇರೆ...
ಅದೇ ಖುಷಿನಲ್ಲಿ ಪ್ಯಾಕೆಟ್ ಓಪನ್ ಮಾಡಿ ನೋಡ್ತೀನಿ....ನನ್ನ ಕಣ್ಣನ್ನ ನನಗೇ ನಂಬೋಕೆ ಆಗ್ತಾ ಇಲ್ಲಾ...ಇರೋ ಬರೋ ನಿದ್ದೆ ಎಲ್ಲಾ ಹೊರಟೋಯ್ತು. ಯಾವುದಕ್ಕೂ ಇರ್ಲಿ ಅಂತ ನನ್ನ ಬ್ಯಾಂಕ್ ಬ್ಯಾಲೆನ್ಸ್ ಅನ್ನ ಒಂದು ಸಲ ಚೆಕ್ ಮಾಡ್ಕೊಂಡೆ..... ಎಲ್ಲಾ ಸರಿಯಾಗಿಯೇ ಇದೆ..... ಮತ್ತೆ, ನನಗೆ ಬಂದಿರೋ ಕೊರಿಯರ್??

ನಾನು ಜೋರಾಗಿ ನನ್ನ ಗಂಡನ್ನ ಕೂಗ್ದೆ.....ಅವರ ಜೊತೆ ನನ್ನ ಮಗಳು ಬಂದ್ಲು...... ಹೇಗಿದೆ ಸರ್ಪ್ರೈಸ್ ಅಂದ್ರು..... ನನಗೆ ನಂಬೋಕೆ ಆಗ್ತಾ ಇಲ್ಲಾ... ಏನೀದೆಲ್ಲ ಅಂತ ಕೇಳಿದೆ. ನೀನು ಹೊಸ ಮೊಬೈಲ್ ಕಳ್ಕೊಂಡು ಬೇಜಾರ್ ಮಾಡ್ಕೊಂಡಿದ್ಯಲ್ಲ, ಅದಕ್ಕೇ ನಿನಗೆ ಸರ್ಪ್ರೈಸ್ ಕೊಟ್ಟಿದ್ದು ಅಂದ್ರು....ಫಸ್ಟ್ ಟೈಮ್ ನನಗನಿಸಿದ್ದು.... ಸರ್ಪ್ರೈಸ್ ಈ ಲೆವೆಲ್ ಗೂ ಇರುತ್ತಾ... ಐಫೋನ್ 13 ಸಿಗೋ ಅಷ್ಟು!!!

ಅಪ್ಪ ಮಗಳು ಸೇರಿ ನನ್ನ ಹೊಸ ಫೋನನ್ನ ಸೆಟ್ ಮಾಡಿ ಕೊಟ್ರು. ಹೊಸ ಫೋನ್ ಅಂದ್ಮೇಲೆ ಫೋಟೋ ಸೆಷನ್ ಆಗ್ಬೇಕಲ್ವಾ.... ಅದು ಆಯಿತು. ನನಗೆ ಫೋನ್ ತುಂಬಾನೇ ಇಷ್ಟ ಆಯಿತು... ಏಕೆ ಅಂದ್ರೆ ಅದ್ರಲ್ಲಿ ನಾನು ಇರೋದಕ್ಕಿಂತ ಜಾಸ್ತಿನೇ ಚೆನ್ನಾಗಿ ಫೋಟೋ ಬರ್ತಾ ಇತ್ತು!

ಹಾಗೇ ಐಫೋನ್ ಖುಷಿನಲ್ಲೇ ತೇಲಾಡ್ತಾ ಇದ್ದವಳಿಗೆ, ಒಂದು ಪ್ರೈವೇಟ್ ನಂಬರ್ ನಿಂದ ಕಾಲ್ ಬಂತು. ಯಾರಿದು... ಅಂತ ಕಾಲ್ ರಿಸೀವ್ ಮಾಡಿದ್ರೆ, ಆ ಕಡೆ ಧ್ವನಿ, ನಾನು ಗೀತಾ ಅವರ ಜೊತೆ ಮಾತಾಡಬಹುದಾ ಅಂತು. ನಾನು ಹೇಳಿ, ಏನು ವಿಷಯ? ಯಾರು ಮಾತಾಡೋದು ಅಂತ ಕೇಳಿದೆ.

ಮ್ಯಾಡಮ್.. ನಾನು ಸೊ & ಸೊ (ಸಾರೀ, ನಾನು ಇಲ್ಲಿ ಹೆಸರು ತಗೋಳೋಕ್ಕೆ ಆಗೋಲ್ಲ ) ಸಿನೆಮಾ ಪ್ರೊಡಕ್ಷನ್ ಹೌಸ್ ನಿಂದ ಮಾತಾಡ್ತಿರೋದು... ನಿಮಗೆ ಒಂದು ರೋಲ್ ಆಫರ್ ಮಾಡ್ತಾ ಇದೀವಿ ನಮ್ಮ ನೆಕ್ಸ್ಟ 'ಫಿಲಂ' ನಲ್ಲಿ ಅಂತು ಆ ಧ್ವನಿ. ನಾನು, ಪಾಪ ಅವರು ಬೇರೆಯವರಿಗೆ ಮಾಡೋ ಫೋನ್ ಕಾಲ್ ನನಗೆ ಬಂದುಬಿಟ್ಟಿದೆ ಅಂತ, ರಾಂಗ್ ನಂಬರಿಗೆ ಫೋನ್ ಮಾಡಿದಿರಾ ನೀವು ಅಂದೆ. ಅವರು ಮತ್ತೆ ನಂಬರ್ ರಿಪೀಟ್ ಮಾಡಿ, ಇದೇ ನಂಬರ್ ತಾನೇ ಅಂದ್ರು. ನಾನು ಹೌದು, ನಂಬರ್ ಏನೊ ಸರಿಯಾಗೇ ಇದೆ.. ಆದ್ರೆ ನೀವ್ ಅಂದ್ಕೊಂಡಿರೋ ಗೀತಾ ನಾನು ಅಲ್ಲ ಅಂದೆ. ಮೇಡಂ ನಿಮಗೆ ಮುಖದ ಮೇಲೆ ಮಚ್ಚೆ ಇದೆ ಅಲ್ವಾ... ನಾನು, ಹೌದು ಇದೆ, ಅದಕ್ಕೇ ಅಂದೆ ?? ನಮ್ಮ ಸಿನಿಮಾದ ಒಂದು ರೋಲ್ ಗೆ ಮುಖದ ಮೇಲೆ ಮಚ್ಚೆ ಇರೋ ಹುಡ್ಗಿನಾ ಹುಡುಕ್ತಾ ಇದೀವಿ. ಅದಕ್ಕೇ ಆ ರೋಲ್ ನಿಮಗೆ ಆಫರ್ ಮಾಡಿದ್ದು ಮೇಡಂ ಅಂತು ಆ ಧ್ವನಿ. ನೀವು ನಾಳೆ ಆಡಿಷನ್ಗೆ ಬರೋಕ್ಕೆ ಆಗುತ್ತಾ ಕೇಳಿದ್ರು.

ನನಗೆ ಏನು ನಡೀತಾ ಇದೆ ಅಂತಾನೆ ಗೊತ್ತಾಗ್ತಾ ಇಲ್ಲ..... ಸ್ವಲ್ಪ ಹೊತ್ತಿನ ಮೊದ್ಲು ಐಫೋನ್, ಈಗ ನೋಡಿದ್ರೆ ಫಿಲಂ ನಲ್ಲಿ ಆಕ್ಟ್ ಮಾಡೋಕೆ ಆಫರ್.....ಯಪ್ಪ! ಇವತ್ತಿನ ನನ್ನ ದಿನ ಭವಿಷ್ಯದಲ್ಲಿ ಏನಂತ ಪ್ರಿಂಟ್ ಆಗಿದ್ಯಪ್ಪ ಅಂದ್ಕೊಂಡೆ....ಕನಸು ಕಾಣತ ಇದೀನ ಅನಸಿಬಿಡ್ತು. ಆದ್ರೆ ಯಾಕೆ ನಾವು ಯಾವಾಗ್ಲೂ ಸಡನ್ ಸರ್ಪ್ರೈಸ್ಸಸ್ ನ ಕನಸು ಅಂದ್ಕೊತಿವಿ.... ನಾವು ಆ ಟೈಮ್ ನಲ್ಲಿನ ಖುಷಿನ ಅನುಭವಿಸಬೇಕು ಅಲ್ವಾ..... ಆಗ ನಾನು ಮಾಡಿದ್ದೂ ಅದೇ....

ನೆಕ್ಸ್ಟ ಡೇ ನಮ್ಮ ಮನೆಯವರು ನನ್ನನ್ನ ಆಡಿಷನ್ಗೆ ಕರ್ಕೊಂಡು ಹೋದ್ರು.... ಸೆಲೆಕ್ಟ್ ಕೂಡ ಆದೆ! ನಂದು ಏನು ರೋಲ್ ಅಂತ ಕೇಳಿದೆ. ಮೇಡಂ, ಸುದೀಪ್ ಸರ್ ಗೆಸ್ಟ್ ರೋಲ್ ಮಾಡ್ತಾ ಇದಾರೆ ಈ ಫಿಲಂ ನಲ್ಲಿ. ನೀವು ಅವರ ಒಪ್ಪೋಸಿಟ್ ಮಾಡ್ತಾ ಇರೋದು, ರೋಲ್ ಸ್ವಲ್ಪ ಚಿಕ್ಕದು... ಆದ್ರೆ ಪಾತ್ರ ತುಂಬಾ ಪವರ್ ಫುಲ್ ಆಗಿದೆ ಮೇಡಂ ಅಂದ್ರು. ನನಗಂತು ಸ್ವರ್ಗಕ್ಕೆ ಮೂರೇ ಗೇಣು ಅಂತಾರಲ್ಲ.... ಆ ಫೀಲಿಂಗು....

ಅದರ ನೆಕ್ಸ್ಟ ವೀಕ್ ನಿಂದ ಶೂಟಿಂಗ್ ಪ್ರಾರಂಭ ಆಯಿತು. ಎರಡನೇ ಟೇಕ್ನಲ್ಲೇ ಶಾಟ್ ಓಕೆ ಆಗೋಯ್ತು! ಎಲ್ಲಾ ಕ್ಲಾಪ್ ಹಾಕಿದ್ರು. ಸುದೀಪ್ ಸರ್ 'ವೆಲ್ ಡನ್' ಅಂದ್ರು... ನನ್ನ ಆಕ್ಟಿಂಗ್ ಸ್ಕಿಲ್ ನೋಡಿ ನಾನೇ ಫುಲ್ ಖುಷಿ ಆಗ್ಬಿಟ್ಟೆ. ಹಾಗೇ ನೋಡ್ತಾ ನೋಡ್ತಾ ಎರಡು ವಾರದ ಶೂಟಿಂಗ್ ಮುಗದೇ ಹೋಯ್ತು..ಇನ್ನೇನು ಪ್ರಮೋಷನ್ಸ್ ಎಲ್ಲಾ ಮುಗಿದು ಪಿಕ್ಚರ್ ರಿಲೀಸ್ ಆಗೋ ದಿನನೂ ಬಂದೆ ಬಿಡ್ತು!

ಅಷ್ಟೊತ್ತಿಗೆ ನನ್ನ ಮಗಳು ಬಂದುಬಿಟ್ಟು ಅಮ್ಮ ಏಳಮ್ಮ....ಸಾಯಂಕಾಲ 5:30 ಆಯಿತು. ಅಪ್ಪ 'ಚಾಯ್' ಮಾಡು ಅಂತ ಇದಾರೆ. ಬೇಗ ಎದ್ದೇಳು ಅಂತ ಏಬ್ಬಸೇ ಬಿಟ್ಲು. ಅಯ್ಯೋ ಇನ್ನೊಂದು ಐದು ನಿಮಿಷ ತಡೆದಿದ್ರೆ ಪಿಕ್ಚರ್

ರಿಲೀಸ್ ಆಗಿರೋದು ಅಂದೆ..... ನನ್ನ ಮಗಳು ನನ್ನ ನೋಡಿ .... ವಿಚಿತ್ರವಾಗಿ ... ಏನು....? ಅಂದ್ಲು. ನಾನು ಏನು ಇಲ್ಲ ಬಿಡು... ಇಷ್ಟೊಂದೆಲ್ಲಾ ಕನಸು ಕಾಣೋಕು ಅದೃಷ್ಟ ಬೇಕು ಅಂದೆ.

ಹೌದು, ಫೋನ್ ಕಳಡ್ಕೊಂಡಿದ್ದು ಒಂದು ನಿಜ ಬಿಟ್ರೆ ಉಳಿದಿದ್ದೆಲ್ಲ ಕನಸೇ. ಅದಕ್ಕೇ ನಾನು ಸಾಮಾನ್ಯವಾಗಿ ಮಧ್ಯಾಹ್ನ ಟೈಮ್ ಮಲಗೋಕೆ ಹೋಗೊಲ್ಲ. ಅರ್ಧ ಜೀವನ ಈ ತರ ಹಗಲುಗನಸಲ್ಲೇ ಕಳೆದು ಹೋಗ್ಬಿಡುತ್ತೆ ಅಂತ. ಹೇ ಹುಲುಮಾನವ 'ಜೀವನದಲ್ಲಿ ಕೈಗೆ ಸಿಗದೇ ಇರೋದನ್ನ ಕನಸಿನಲ್ಲಿ ನೋಡಿ ಆದ್ರೂ ಅನುಭವಿಸು' ಅಂತ 'ನಿದ್ರ್ಯಾಆನಂದ' ಗುರೂಜೀ ಅವರು ಹೇಳಿದ್ದಾರೆ......(ನಾನು ಯಾವ ಆನಂದ ಅಂತ ಬರ್ದಿದೀನೋ ದಯವಿಟ್ಟು ಅದನ್ನೇ ಓದ್ಕೊಳ್ಳಿ)

ಕನಸಿಲ್ದೆ ಜೀವನ ಇಲ್ಲಾ. ನಮ್ಮ ಕನಸಿಗೆ ನಾವೇ ಮಾಲೀಕರು. ಕನಸಿನಲ್ಲಿ ಕೆಟ್ಟದ್ದನ್ನ ನೋಡಿದ್ರೆ ಅದು ಕೆಟ್ಟ ಕನಸು ಅಂತ ಮರೆತು ಬಿಡಿ. ನನಗೆ ಬಂದಿರೋ ತರ ಖುಷಿ ಖುಷಿ ಕನಸಾದ್ರೆ, ಕಾಸು ಕೊಡದೆ ಪುಗಸಟ್ಟೆ ಸಿಗೋ ಆ ಸಂತೋಷನ ಬಿಟ್ಕೊಬೇಡಿ .... ಕನಸಿನಲ್ಲಿ ನೋಡಿರೋದು ನಿಜಾನೇನೋ ಅನ್ನೋತರ ಆ ಖುಷಿಯನ್ನ ಅನುಭವಿಸಿ, ಲೈಫ್ ಅನ್ನ ಇನ್ನೂ ಕಲರ್ ಫುಲ್ ಆಗಿ ಇಟ್ಕೊಳ್ಳಿ.



*~ ಶ್ರೀವತ್ಸ ಬಲ್ಲಾಳ*
*ಫಿಲಡೆಲ್ಫಿಯಾ*

# ಜವಾಬ್ದಾರಿ

**ಈ** ಹಿಂದೆ ಬೇರೊಂದು ಪ್ರಕರಣದ ವಿಚಾರದಲ್ಲಿ ಒಂದು ಮಾತು ಬರೆದಿದ್ದೆ. "***ಜವಾಬ್ದಾರಿ*** ಎನ್ನುವುದು ಒಂದು ತುಂಬಾ ಆಳವಾದ ಪದ. ಜಗತ್ತಿನಲ್ಲಿರುವ ಪ್ರತಿಯೊಂದು ಜೀವವೂ ತನಗೆ ತಾನೇ ಜವಾಬ್ದಾರಿಯೇ ವಿನಃ ಬೇರೆ ಯಾರನ್ನೂ, ಸ್ವತಃ ಭಗವಂತನನ್ನೂ ಹೊಣೆ ಮಾಡಲಾಗದು. ಈ ಜೀವನದಲ್ಲಿ, ಜೀವನದ ಉದ್ದಕ್ಕೂ ನಡೆಯುವ ಪ್ರತಿಯೊಂದೂ ಘಟನೆ, ಸನ್ನಿವೇಶ, ಸಂಧರ್ಭ ಇತ್ಯಾದಿಗಳ ಬಗ್ಗೆ."

ಪ್ರಸ್ತುತ ಸನ್ನಿವೇಶದಲ್ಲಿ ಓಮೈಕ್ರಾನ್ ವೈರಾಣುವಿನ ಬಗ್ಗೆ ನಡೆಯುತ್ತಿರುವ ಪರ-ವಿರೋಧ ಚರ್ಚೆ, ಧೋರಣೆಯನ್ನು ಕಂಡಾಗ ಮೂಡಿ ಬರುವ ಒಂದೇ ಆಲೋಚನೆಯೆಂದರೆ ಯಾಕೆ ಜಗತ್ತಿನೆಲ್ಲೆಡೆ ಪ್ರತಿಯೊಂದು ದೇಶದಲ್ಲೂ ಗರಿಷ್ಠ ಮಟ್ಟದಲ್ಲಿ ಜನರು ತಮ್ಮ ಜೀವನಕ್ಕೆ, ಜೀವನಾಧಾರಕ್ಕೆ ಇನ್ನೊಬ್ಬರನ್ನೇ ಹೊಣೆಮಾಡುವ ಕೆಲಸ ಮಾಡುತ್ತಿದ್ದಾರೆಂದು? ಯಾವ ದೇಶದ ಸರಕಾರವೂ ತನ್ನ ಪ್ರತಿಯೊಂದು ನಾಗರಿಕನ ಈ ತರಹದ "ಬೇಜಾವಾಬ್ದಾರಿ"ತನದ ವರ್ತನೆಯಿಂದ ಹೊರತಾಗಿಲ್ಲ. ಬಹುತೇಕ ಜನ ಲಸಿಕೆಯಿಂದ ಸುರಕ್ಷಿತರಾಗದೇ ಲಸಿಕೆಯ ಬಗ್ಗೆ ನೇತ್ಯಾತ್ಮಕ ಧೋರಣೆ, ಅಸಡ್ಡೆ , ಅನಾಗರಿಕತೆಯಿಂದ ಮಾತನಾಡಿ ತಮ್ಮ ಜೀವಕ್ಕೆ ಮಾತ್ರವಲ್ಲದೆ ಸುತ್ತ ಮುತ್ತಲಿನ ಸಮಾಜದ ಹಿತಕ್ಕೂ ಕಂಟಕಪ್ರಾಯರಾಗುತ್ತಿರುವುದು ಮತ್ತು ಅಂತವರ ನಿರ್ಧಾರವನ್ನು ಬೆಂಬಲಿಸುತ್ತಾ ಶೀಘ್ರದಲ್ಲಿ ಈ ಸಾಂಕ್ರಾಮಿಕ ಪಿಡುಗನ್ನು ಹೊಡೆದೋಡಿಸುವ ಪ್ರಯತ್ನಕ್ಕೆ ಒಗ್ಗಟ್ಟಾಗಿ ಮುಂದಾಗದೇ, ಪರಿಸ್ಥಿತಿಯನ್ನು ಕಾಲ್ಚೆಂಡಿನಾಟದಂತೆ ನಿಭಾಯಿಸುತ್ತಿರುವವರು "ಬೇಜವಾಬ್ದಾರಿ"ತನದ ಮೇರುಶಿಖರವನ್ನೇರುವ ಪ್ರಯತ್ನ ನಡೆಸುತ್ತಿದ್ದಾರೆಂದು ಹೇಳದೇ ಇನ್ನೇನು ಹೇಳಬೇಕು?

ಇನ್ನೂ ಹೆಚ್ಚಿನ "ಬೇಜಾವಾಬ್ದಾರಿ"ತನವೆಂದರೆ ಈ ಪರಿಸ್ಥಿತಿಯಲ್ಲಿ ಜಗತ್ತಿನ ಅತ್ಯಂತ "ಜವಾಬ್ದಾರಿ"ತನದಲ್ಲಿ ವರ್ತಿಸಬೇಕಾದ ತಜ್ಞರೊಬ್ಬರು "ಓಮೈಕ್ರಾನ್" ಒಂದು "ಸ್ವಾಭಾವಿಕ ಲಸಿಕೆ"ಯೇ ಆಗಿದೆ ಇನ್ನೊಂದು ಲಸಿಕೆಯ ಅಗತ್ಯವೇ ಇಲ್ಲ, ಹಾಗಾಗಿ ಜಗತ್ತಿನ ಅತ್ಯಂತ ಮುಂದುವರೆದ ರಾಷ್ಟ್ರಗಳೇಕೆ ಈ ಸ್ವಾಭಾವಿಕ ಲಸಿಕೆಯನ್ನು ಇದುವರೆಗೂ ಕಂಡು ಹಿಡಿಯಲಾಗಲಿಲ್ಲ ಎಂದು ಸಂಶಯಾತ್ಮಕ ರೀತಿಯಲ್ಲಿ ಬೀಜವನ್ನು ಬಿತ್ತುವ ಮೂಲಕ "ಬೇಜವಾಬ್ದಾರಿ"ತನದ ಪರಾಕಾಷ್ಠೆಯನ್ನೇ ಮುಟ್ಟಿದ್ದಾರೆಂದನಿಸುವುದಿಲ್ಲವೇ? ಒಂದು ವೇಳೆ ಆ ತೆರನಾದ ಸ್ವಾಭಾವಿಕ ಲಸಿಕೆಯೇ ಈ ಸಾಂಕ್ರಾಮಿಕ ಪಿಡುಗನ್ನು ತಡೆಗಟ್ಟುವ ಮಾರ್ಗವೇ ಆಗಿದ್ದಲ್ಲಿ ಇದಕ್ಕೂ ಮುಂಚಿನ ಅನೇಕ ವೈರಾಣುಗಳಿಂದ ಹುಟ್ಟಿದ ಸಾಂಕ್ರಾಮಿಕ ರೋಗ ರುಜಿನಗಳಿಗೇಕೆ ಲಸಿಕೆಯ ಮೊರೆ ಹೊಕ್ಕಿದ್ದು? ಆಗ ಏಕೆ "ಸ್ವಾಭಾವಿಕ ಲಸಿಕೆ"ಯ ಮಾರ್ಗ ಹಿಡಿಯಲಿಲ್ಲ ಇಂದು ಈ ಸಂದೇಶಗಳನ್ನು ಹೊರತರುತ್ತಿರುವ ತಜ್ಞರೂ ಮತ್ತು ತಿಳಿದವರು? ಹೇಗೆ ಈ ಮಾತು ಮತ್ತು ಯೋಚನಾ ಲಹರಿ ಅಸಂಬದ್ಧವೋ "ಓಮೈಕ್ರಾನ್ ಒಂದು ಸ್ವಾಭಾವಿಕ ಲಸಿಕೆ" ಎನ್ನುವುದೂ ಅಷ್ಟೇ ಅಸಂಬದ್ಧ ಮತ್ತು ಮೂರ್ಖತನದ ಮಾತು ವಿನಃ ಅದರಲ್ಲಿ ಬೇರೆ ಯಾವುದೇ ಹುರುಳಿಲ್ಲ. ಹಾಗಾಗಿ ಬೇಜವಾಬ್ದಾರಿತನ ಮೆರೆದ ತಜ್ಞರೂ ಮತ್ತವರ ಹೇಳಿಕೆಯನ್ನು ಬೆಂಬಲಿಸುತ್ತಿರುವ ಪ್ರತಿಯೋರ್ವನೂ ಜವಾಬ್ದಾರಿ ಮರೆತು ಇನ್ನೊಬ್ಬರ ಮೇಲೆ ತಮ್ಮ ಜೀವನದ ದಾಳವನ್ನುರುಳಿಸುತ್ತಿದ್ದಾರಷ್ಟೇ ಹೊರತು ಬೇರೇನೂ ಅಲ್ಲ.

ಇರುವುದು ಎರಡೇ ಮಾರ್ಗ. ಒಂದು ನಮ್ಮ ನಮ್ಮ ಜೀವನದ ಹೊಣೆಯನ್ನು ಸಂಪೂರ್ಣವಾಗಿ ನಾವೇ ಹೊತ್ತುಕೊಂಡು ಪ್ರಕೃತಿದತ್ತವಾದ ಚಿಂತನಾಲಹರಿಯನ್ನು ಸೂಕ್ತವಾಗಿ ಬಳಸಿಕೊಂಡು ಪಿಡುಗನ್ನು ತಡೆಗಟ್ಟಿ, ನಿಯಂತ್ರಿಸಿ, ಹೊಡೆದೋಡಿಸುವ ಎಲ್ಲಾ ನಿರ್ಧಾರಗಳನ್ನು ಬೇಷರತ್ತಾಗಿ ಬೆಂಬಲಿಸುವುದು (ಅಥವಾ ಸರಳವಾಗಿ ಹೇಳುವುದಾದರೆ "ಜವಾಬ್ದಾರಿ" ತನದ ಜೀವನಕ್ರಮವನ್ನು ಅನುಸರಿಸುವುದು) ಅಥವಾ ನಮ್ಮ ಜೀವಕ್ಕೆ ಮಾತ್ರವಲ್ಲದೆ ನಮ್ಮ ಸುತ್ತಮುತ್ತಲಿನ ಸಮಾಜ, ಕುಟುಂಬ ಮತ್ತು ಬಂಧು-ಮಿತ್ರರೆಲ್ಲರನ್ನೂ ಅಪಾಯದಂಚಿಗೆ ತಳ್ಳಿ ನಮ್ಮ ಕಾಲ ಮೇಲೇ ಕೊಡಲಿಯೇಟು ಹಾಕಿಕೊಳ್ಳುವುದು. ಇವೆರಡರ ವಿನಃ ಬೇರೆ ಯಾವ ಮಾರ್ಗವೂ ಇಲ್ಲ. ಯಾರೆಷ್ಟೇ ತಮ್ಮ ತಮ್ಮ ದೇಶದ ಸರಕಾರಗಳನ್ನು, ಜನ ನಾಯಕರನ್ನು ಅಥವಾ ಧರ್ಮ-ರಾಜಕೀಯ ವ್ಯವಸ್ಥೆಯನ್ನೆಷ್ಟೇ ದೂರಿದರೂ ಅದರಿಂದ "ಸ್ವಯಂ ಜವಾಬ್ದಾರಿ"ತನದಿಂದ ಯಾರೂ ಹೊರಬರಲಾಗುವುದಿಲ್ಲ ಎನ್ನುವುದು ಹಗಲು-ರಾತ್ರಿಯಷ್ಟೇ ಸ್ಪಷ್ಟ ಮತ್ತು ಸತ್ಯ. ಹಾಗಾಗಿ ಮನುಷ್ಯ ತನ್ನ ಜೀವನದ ಆಗು-ಹೋಗಿಗೆ, ವಿಶೇಷವಾಗಿ ಜೀವನದಲ್ಲಿ ಎದುರಾಗುವ ಸಂಕಷ್ಟಕ್ಕೆ, ತನ್ನನ್ನು ಹೊರತು ಬೇರೆ ಯಾರನ್ನೇ ದೂಷಿಸಿದರೂ ಅದು "ದೂಷಣೆಯ ವರ್ಗಾವಣೆ"ಯೇ (blame shifting) ಹೊರತು ಇನ್ನೇನಲ್ಲ.



# ತೃಪ್ತಿ, ಎಲ್ಲಿ ಮಾರಾಟಕ್ಕಿದೆ? ತಿಳಿಸುವಿರಾ?

**ಹೇಮಂತ್ ಚಿನ್ನು,** *ಚಿಕ್ಕನಾಯಕನಹಳ್ಳಿ, ಹಾಸನ*

ಅದೊಂದು ನದೀ ಪಾತ್ರ. ಆ ನದಿಯಲ್ಲಿ ಮೀನೊಂದು ವಾಸಿಸುತ್ತಿತ್ತು. ನದಿಯ ಪಕ್ಕದಲ್ಲಿದ್ದ ಮರದಲ್ಲಿ, ನವಿಲೊಂದು ಮನೆ ಮಾಡಿತ್ತು. ಅವೆರಡರ ಮಧ್ಯೆ ಹೇಗೋ ಎಂತೋ ಬಹಳ ಗೆಳೆತನವಾಯಿತು. ಗೆಳೆತನ ಬೆಳೆಯುತ್ತ ಹೋದಂತೆ ಒಬ್ಬರಿಗೊಬ್ಬರು ಜೀವ ಬಿಡಲೂ ಸಿದ್ಧ ಎಂಬಷ್ಟು ಆತ್ಮೀಯವಾದವು. ಹೀಗಿರುವಾಗ ಒಮ್ಮೆ ಬೇಟೆಗಾರರ ತಂಡವೊಂದು ಅಲ್ಲಿಗೆ ಬಂದಿತು. ಮರದ ಮೇಲೆ ಕುಳಿತು ನೀರಿನಲ್ಲಿದ್ದ ಮೀನಿನೊಂದಿಗೆ ಹರಟುತ್ತಿದ್ದ ನವಿಲನ್ನು ಆ ತಂಡದ ಒಬ್ಬ ಆಸಾಮಿ ನೋಡಿಬಿಟ್ಟ. ಅದನ್ನು ಹಿಡಿದು ಕೈಕಾಲು ಕಟ್ಟಿ ಒಯ್ಯಲು ಅನುವಾದ. ನೀರಿನಡಿಯಿಂದ ಮೀನು ಇದನ್ನೆಲ್ಲ ನೋಡಿತು. ಮೆಲ್ಲಗೆ ತಲೆ ಹೊರಗೆ ಹಾಕಿ ಅಣ್ಣಾ ಬೇಟೆಗಾರನೇ, ಇದುವರೆಗೂ ಯಾರೂ ಕಂಡಿರದ ಅಮೂಲ್ಯವಾದ ಮುತ್ತನ್ನು ನಾನು ತಂದು ಕೊಡುತ್ತೇನೆ. ನನ್ನ ಗೆಳೆಯನನ್ನು ಬಿಟ್ಟು ಬಿಡು ಎಂದಿತು. ಬೇಟೆಗಾರ ಒಪ್ಪಿದ. ಮೀನು ನೀರಿನಾಳಕ್ಕೆ ಹೋಗಿ ಒಂದು ಮುತ್ತನ್ನು ಕಚ್ಚಿ ತಂದು ಅವನ ಕೈಯ್ಯಲ್ಲಿಟ್ಟಿತು. ಬೇಟೆಗಾರ ನೋಡಿದವನೇ ಕಣ್ಣರಳಿಸಿದ. ಇಂಥ ಸುಂದರ ಮುತ್ತನ್ನು .ಅವನೆಂದೂ ಕಂಡಿರಲಿಲ್ಲ. ಅದರ ಬೆಲೆ ಅಂದಾಜಿಸಿದ. ಅದೇ ಗುಂಗಿನಲ್ಲಿ ನವಿಲನ್ನು ಬಿಡುಗಡೆಗೊಳಿಸಿದ. ನವಿಲು ಮತ್ತೆ ಮರದ ಮೇಲಕ್ಕೆ ಹಾರಿತು.

ಮರುದಿನ ಬೇಟೆಗಾರ ಪುನಃ ಬಂದ. ಅವನ ಕಣ್ಣುಗಳಲ್ಲಿ ದುರಾಸೆ ಕುಣಿಯುತ್ತಿತ್ತು. ಮೀನಿಗೆ ಕೂಡಲೇ ಗೊತ್ತಾಯಿತು. ಮೀನನ್ನು ನೋಡಿದವನೇ , "ಒಂಟಿ ಮುತ್ತಿಗೆ ಅಷ್ಟೇನೂ ಬೆಲೆ ಇಲ್ಲವಂತೆ, ಜೋಡಿಗೆ ಬೆಲೆ ಎಂದು ಅಕ್ಕಸಾಲಿಗ ಹೇಳಿದ. ಹಾಗಾಗಿ ನೀನು ಇಂಥದೇ ಇನ್ನೊಂದು ಮುತ್ತು ತಂದು ಕೊಟ್ಟರೆ ನಿನ್ನ ಗೆಳೆಯನ ತಂಟೆಗೆ ನಾನು ಇನ್ನೆಂದೂ ಬರುವುದಿಲ್ಲ , ಮಾತು ಕೊಡುತ್ತೇನೆ" ಎಂದ.

ಜಾಣ ಮೀನು ತಕ್ಷಣವೇ ಅಂಥದ್ದೇ ಇನ್ನೊಂದು ಮುತ್ತು ಹುಡುಕಬೇಕಾದರೆ ನಿನ್ನ ಕೈಲಿರುವುದನ್ನು ನನಗೆ ಕೊಡಬೇಕು, ನಾನು ಅಂಥದ್ದೇ ಹುಡುಕಿ ತರುತ್ತೇನೆ ಎಂದು ಹೇಳಿ, ಬಂಡೆಯ ಮೇಲೆ ಮುತ್ತನ್ನಿಡಲು ಹೇಳಿತು. ಬೇಟೆಗಾರ ಹಾಗೆಯೇ ಮಾಡಿದ. ಮೀನು ಹಾರಿ ಮುತ್ತನ್ನು ಕಚ್ಚಿಕೊಂಡು ನೀರಿನೊಳಗಿಳಿಯಿತು. ಅಲ್ಲಿಂದಲೇ ತಲೆ ಎತ್ತಿ, ಬೇಟೆಗಾರನೇ, ನನ್ನ ಗೆಳೆಯ ನಿನ್ನ ಕೈಗೆಟುಕದಷ್ಟು ದೂರ ನಿನ್ನೆಯೇ ಹೊರಟು ಹೋಗಿದ್ದಾನೆ, ನೀನು ಮರಳಿ ಬಂದೇ ಬರುತ್ತೀಯ ಎಂದು ನಮಗೆ ತಿಳಿದಿತ್ತು. ನೀವು ಮನುಷ್ಯರ ಸ್ವಭಾವವೇ ಹೀಗೆ, ತೃಪ್ತಿ ಎಂಬುದು ನಿಮಗಿಲ್ಲ. ಇದಿದ್ದರೆ ಅದು, ಅದಿದ್ದರೆ ಮತ್ತೊಂದು, ಹೀಗೆ ಬೇಕುಗಳ ಸಂತೆಯಲ್ಲಿ ಕಳೆದು ಹೋಗುತ್ತೀರಿ. ಆದ್ದರಿಂದಲೇ ನೀವು ದುಃಖಿಗಳು ತೃಪ್ತಿಯೇ ಸುಖದ ಮೊದಲ ಹೆಜ್ಜೆ. ಆದರೆ ನಿಮಗದರ ಅರಿವು ಇಲ್ಲವೇ ಇಲ್ಲ! ಅತಿಯಾಸೆಯಿಂದ ನಿನಗೆ ಸಿಕ್ಕಿದ್ದನ್ನೂ ಕಳೆದುಕೊಂಡೆ, ಹೋಗು , ಹೊರಟುಹೋಗು ಎನ್ನುತ್ತ ನೀರಿನಲ್ಲಿ ಮುಳುಗಿ ಮಾಯವಾಯಿತು.

ಈ ಕಥೆಯ ಸಾರ ಎಷ್ಟು ಸತ್ಯ ಅಲ್ವಾ? ಈ ಕಥೆಗೂ ನಮ್ಮ ಬದುಕಿಗೂ ಬಹಳವೇ ಸಾಮ್ಯತೆ ಇದೆ ಅಲ್ವಾ? ನಾವೆಲ್ಲರೂ ನಮ್ಮ ಜೀವನದಲ್ಲಿ ಅಮೂಲ್ಯವಾದ ಪ್ರತಿಕ್ಷಣವನ್ನು ಸಂಭ್ರಮಿಸುವುದನ್ನೇ ಮರೆತಿರುತ್ತೇವೆ. ಯೌವನ, ವಯಸ್ಸು, ಈ ಹಂತಗಳನ್ನು ಆನಂದಿಸದೆ, ದಾಟುತ್ತೇವೆ. ಆಮೇಲೆ ಹಳಹಳಿಸುತ್ತೇವೆ. ಬಾಲ್ಯದಲ್ಲಿ ಸಣ್ಣಪುಟ್ಟ ವಿಷಯಕ್ಕೂ ಸಂಭ್ರಮಿಸುತ್ತಿದ್ದವರು, ಬೆಳೆಯುತ್ತಾ ಹೋದಂತೆ ಆ ಖುಷಿಯನ್ನು ಮೂಲೆಗೆ ತಳ್ಳಿ ಕೈಕಾಲು ಕಟ್ಟಿ ಕೂರಿಸಿ ಬಿಡುತ್ತೇವೆ. ಆಗ ಒಂದು ರೂಪಾಯಿಯ ಮಿಠಾಯಿ/ಪೆಪ್ಪರಮಿಂಟಿಗೂ ಸಂಭ್ರಮಿಸುತ್ತಿದ್ದವರು, ಸಾವಿರಾರು ರೂಪಾಯಿ ಖರ್ಚು ಮಾಡಿ ಸ್ಟಾರ್ ಹೋಟೆಲಿನಲ್ಲಿ ಉಂಡರೂ ಈಗ ಖುಷಿ ಪಡುವುದಿಲ್ಲ. ಮೊದಲ ಬಾರಿ ಸೈಕಲನ್ನು ಬಿದ್ದು ಎದ್ದು ಓಡಿಸಿದ ಖುಷಿ ಇಂದು ಲಕ್ಷಗಟ್ಟಲೇ ಸುರಿದು ಕೊಂಡ ಕಾರಿನಲ್ಲಿ ಕಾಣುವುದಿಲ್ಲ. ಆಕಾಶದಲ್ಲಿ ಹಾರಾಡುವ ವಿಮಾನ ನೋಡಿ ಕೈಬೀಸಿ ಟಾಟಾ ಮಾಡುತ್ತಿದ್ದ ಖುಷಿ, ಇಂದು ವಿಮಾನ ದಲ್ಲಿಯೇ ಪ್ರಯಾಣಿಸಿದರೂ ತೃಪ್ತಿ ಇಲ್ಲ.

ಬಾಲ್ಯದ ಮರಕೋತಿ, ಕುಂಟೆಬಿಲ್ಲೆ , ಕಣ್ಣಾಮುಚ್ಚಾಲೆ, ಲಗೋರಿ ಆಟಗಳು, ಸೈಕಲ್ ತುಳಿಯುವುದನ್ನು ಬಿದ್ದು ಎದ್ದು ಕಲಿತದ್ದು , ಪರೀಕ್ಷೆಯಲ್ಲಿ ಒಂದು ಮಾರ್ಕ್ಸ್ ಜಾಸ್ತಿ ತೆಗೆದುಕೊಂಡದ್ದು , ಅದಕ್ಕಾಗಿ ಸಂಭ್ರಮಿಸಿದ್ದು , ಗದ್ದೆ ತೋಟಗಳಲ್ಲಿ ಸುತ್ತಾಡಿದ್ದು , ಹಣ್ಣು ಕದ್ದು ತಿಂದಿದ್ದು , ಶಾಲಾ ಕಾಲೇಜು ಸ್ಪರ್ಧೆಗಳಲ್ಲಿ, ಬಹುಮಾನ, ಪ್ರಶಸ್ತಿ ಗಳಿಸಿದ್ದು , ಜೀವನದ ಸಂಗಾತಿಯೇ ಗೆಳೆಯ/ತಿ ಯಾಗಿದ್ದು , ತೊಟ್ಟಿಲು ಕಟ್ಟಿದ್ದು , ಮಗುವಿನ ನಗುವಿನಲ್ಲಿ ಲೋಕವನ್ನೇ ಮರೆತಿದ್ದು , ಗುರು ಹಿರಿಯರ ಆಶೀರ್ವಾದ ಪಡೆದಿದ್ದು , ಪ್ರೀತಿ ಪಾತ್ರರ ಮೆಚ್ಚುಗೆಯ ಮಾತುಗಳಿಂದ , ಅವರ ಅಪ್ಪುಗೆಯಿಂದ ಅರಳಿದ್ದು , ಎಲ್ಲವೂ ಸಂಭ್ರಮಗಳೇ.. ಕೆಲವು ಸಣ್ಣ ಸಂಭ್ರಮಗಳಾದರೆ ಮತ್ತೊಂದಿಷ್ಟು ದೊಡ್ಡ ಪ್ರಮಾಣದ ಸಂಭ್ರಮಗಳು.

ಸೈಟು ಖರೀದಿಸಿದ್ದು, ಮನೆ ಕಟ್ಟಿಸಿದ್ದು, ಹೊಸ ಗಾಡಿ ಕೊಂಡದ್ದು, ಬರಹಗಳನ್ನು ಬರೆದದ್ದು, ಕಥಾಗುಚ್ಛದಲ್ಲಿ ಹಾಕಿದ್ದು, ಪತ್ರಿಕೆಗಳಿಗೆ ಕಳಿಸಿದ್ದು , ಅವು ಮೆಚ್ಚುಗೆ ಗಳಿಸಿದ್ದು, ಎಲ್ಲವೂ ದೊಡ್ಡ ಸಂಭ್ರಮಗಳೇ. ಆ ಕ್ಷಣವನ್ನು ಆನಂದಿಸಲೇ ಬೇಕಾದ್ದು. ಆದರೆ, ನಾವು ಆಗಲೂ ಅಯ್ಯೋ ಬಿಡಿ, ಇದೇನು ದೊಡ್ಡ ವಿಷಯ ? ನನ್ನ ಆಸೆ ಬೇರೇನೇ ಇತ್ತು , ಎಂದು ನಮ್ಮ ಮೂಗನ್ನು ನಾವೇ ಮುರಿಯುತ್ತೇವೆ.

ಇದಕ್ಕೆಲ್ಲ ಕಾರಣ ಏನು? ಅತಿಯಾದ ಆಸೆಯೇ? ಅಸೂಯೆಯೇ? ಅತೃಪ್ತಿಯೇ? ಆಮಿಷವೇ?ಬೇಕು ಬೇಕೆಂಬ ಹಾಹಾಕಾರವೇ? ಅಥವಾ ಇವೆಲ್ಲದರ ಚರ್ವಿತಚರ್ವಣ ಭಾವವೇ ???

ಒಟ್ಟಿನಲ್ಲಿ, ನಮ್ಮೊಳಗಿರುವ ತೃಪ್ತಿಯ ಸೆಲೆಯನ್ನು, ನಾವೇ ಬತ್ತಿಸಿಕೊಂಡು, ಮತ್ತೆಲ್ಲೋ ಅದರ ಹುಡುಕಾಟದಲ್ಲಿ ನಿರತರಾಗಿರುತ್ತೇವೆ. ಅತೃಪ್ತ ಮನಸ್ಸಿಗರಾಗಿ ತೊಳಲಾಡುತ್ತಿರುತ್ತೇವೆ. ತೃಪ್ತಿ, ಎಲ್ಲಿಯಾದರೂ ಮಾರಾಟಕ್ಕಿದೆಯೇ ? ಎಂದು ಅರಸುತ್ತಿರುತ್ತೇವೆ. ಅದನ್ನೇ ಡಿ ವಿ ಜಿಯವರು ಹೇಳಿದ್ದು ,

**ಅವರೆಷ್ಟು ಧನವಂತರ್, ಇವರೆಷ್ಟು ಬಲವಂತರ್ ।**
**ಅವರೆಷ್ಟು ಯಶವಂತರ್ ಎನುವ ಕರುಬಿನಲಿ ॥**
**ಭವಿಕ ನಿನಗೆಷ್ಟಿಹುದೊ ಮರೆತು**
**ನೀಂ ಕೊರಗುವುದು । ಶಿವನಿಗೆ ಕೃತಜ್ಞತೆಯೆ ? - ಮಂಕುತಿಮ್ಮ ॥**

ಅನ್ಯರು ಎಷ್ಟು ಹಣವಂತರು ? ಎಷ್ಟು ಬಲವಂತರು ? ಎಷ್ಟು ಕೀರ್ತಿವಂತರು ? ಎಂದು ನಿನ್ನತನ ನೀನರಿಯದೆ ಮಾತ್ಸರ್ಯದಿಂದ ಕೊರಗಬೇಡ. ಅದು ದೇವರಿಗೆ ಎಸಗುವ ಅಪಚಾರವಾದೀತು

# ಪ್ರಕಟಣೆ




**ನಮಸ್ಕಾರ!!**

ಪ್ರಗತಿ ತಂಡದ ವತಿಯಿಂದ, ಅಂತ್ಯಾಕ್ಷರಿ ಹಾಗೂ ಮಹಿಳಾದಿನಾಚಾರಣೆ!
**ಮುಖ್ಯ ಅತಿಥಿ ಶ್ರೀಮತಿ. ಬಿ.ಆರ್.ಛಾಯಾ**

**ಫೆಬ್ರುವರಿ 27**ರಂದು, ಬೃಂದಾವನ ಸದಸ್ಯರು ***ಜೊತೆ ಜೊತೆಯಲಿ*** ಪಾಲ್ಗೊಳ್ಳಲು, ಈ ಸವಿನಯ ಆಮಂತ್ರಣ.

ಕಾರ್ಯಕ್ರಮದಲ್ಲಿ ಭಾಗವಹಿಸಲು, ಆಸಕ್ತರು ಫೆಬ್ರವರಿ 19ರ ಮುಂಚಿತವಾಗಿ culturalbrindavana@gmail.com ಈ-ಮೇಲ್ ಮೂಲಕ ನೋಂದಾಯಿಸಿರಿ.

**ಧನ್ಯವಾದಗಳು,**
**ಪ್ರಗತಿ ತಂಡ,**



## ನನ್ನ ದೇಶ

**ಹತ್ತಿಬೆಳಗಲ್ ನಾಗರಾಜ ರಾವ್,** *ಜರ್ಮನಿ*

ಮೂರು ಬಣ್ಣದ ಬಾವುಟ।
ಸಮೃದ್ಧಿಯ ತೋಟ।
ಗಣರಾಜ್ಯ ಅಸ್ಮಿತೆ ಮುಕುಟ।
ಭಾರತಾಂಬೆಯ ಪಟ॥ ೧ ॥

ಅದ್ಭುತ ಸಂವಿಧಾನ ಪ್ರಕಟ।
ಸದಾಶಯಗಳ ಸಂಪುಟ।
ಸೆಳೆಯಿತು ಲೋಕದ ನೋಟ।
ಬೆಸೆಯಿತು ಒಕ್ಕೂಟ॥ ೨ ॥

ನಾನಾ ಭಾಷೆಗಳು ಮಾಟ।
ಸುಶ್ರಾವ್ಯದಿ ಓಟ।
ಕಲೆ ಸಂಸ್ಕೃತಿ ಸುಪ್ರಕಟ।
ವೈವಿಧ್ಯತೆಯ ಕೂಟ॥ ೩ ॥

ಶಿಸ್ತು ಸತ್ವರಂಪರೆಯ ತಟ।
ಚಿಂತನಮಂಥನ ಆಟ।
ಶಾಂತಿ ಸಹಬಾಳ್ವೆಯು ಸ್ಫುಟ।
ದುರಾಗ್ರಹಕೆ ಸಂಕಟ॥ ೪ ॥

ಪ್ರತಿಭೆ ಕಾಯಕ ಓಲಾಟ।
ಪ್ರಜೆಗಳದೇ  ಮೇಲಾಟ।
ಉಚ್ಚ ಸ್ತರಗಳ ಹುಡುಕಾಟ।
ಹಂಚಿಕೊಳ್ಳೋಣ ಊಟ॥ ೫ ॥

ಪ್ರಕೃತಿ ಸುಕೃತಿಯ ನೆಂಟ।
ಮಲಿನತೆ ಲಂಪಟ।
ಸುಮಲತೆ ಬಾಳಿನ ಗುಂಟ।
ದೂರವಾಗಲಿ ಕಪಟ॥ ೬ ॥

ಜಗಕೆ ಸನ್ಮೋದದ ಘಟ।
ಸವಿಮಾತಿನ ಚಟ।
ಆಧ್ಯಾತ್ಮ ಯೋಗ ಗೀಳಾಟ।
ದುಗುಡಗಳೆಲ್ಲ ಧೂಳಿಪಟ॥ ೭॥

ಭಗವದ್ಗೀತೆ ಬೆಳಕದು ದಿಟ।
ಭೇದಿಸುತ ತೊಳಲಾಟ।
ಸಕಲ ಜೀವಿಗಳ ಬಾಳಪುಟ।
ದಯೆಯೇ ಉಸಿರಾಟ॥ ೮ ॥

ಇತಿಹಾಸ ಘನತೆ ಅಪ್ಪಟ।
ಸಂತಜನರ ಒಡನಾಟ।
ದುರ್ವ್ಯಸನ ಮುಕ್ತಿಗೆ ಹೋರಾಟ।
ತಾಂಡವಿಸಲಿ ವಿಕಟ॥ ೯ ॥

ವಿಜ್ಞಾನ ನಾವೀನ್ಯ ದಿಟ।
ವಿಶ್ವಶಾಂತಿಯ ಬಂಟ।
ಸತ್ಯಮೇವ ಜಯತೆ ಹಟ।
ಶತ್ರುಗಳು ಜಟಾಪಟ॥ ೧೦ ॥

*(ಪ್ರೇರಣೆ:  ಭಾರತ ಗಣರಾಜ್ಯೋತ್ಸವ)*



## ಆಸೆಯ ಬೆನ್ನೇರಿ

**ಡಾ. ಹರಿಕುಮಾರ್ ,** *ಬೆಂಗಳೂರು*

ತಾಳಮೇಳವಿಲ್ಲದ ಆಸೆಗಳು ಉಕ್ಕಿ
ಬಾನಾಡಿಗಳಂತೆ ಹಾರಿಹೋದವು ಹೃದಯ ಕುಕ್ಕಿ
ನಾನಾಗಿ ಹೋದೆ ರೆಕ್ಕೆಪುಕ್ಕವಿಲ್ಲದ ಹಕ್ಕಿ
ಕಾಯ್ದುಕೊಳ್ಳಲು ಏನಿಲ್ಲ ಮನದಲಿ ಬಾಕಿ

ಕಂಡರಿಯದ ಸಂತಸವ ಪಡೆದು
ಸುರರಿಗೂ ಸಿಗದ ಮದವ ಕುಡಿದು
ಅಸುರರೂ ಹೆದರಿದ ದುರ್ಮಾರ್ಗದಲಿ ನಡೆದು
ಹೊರಟಿರುವ ನನ್ನ ಯಾನ ಬುವಿಯ ಬಸಿದು

ಆಗರ್ಭ ಆಸೆಗಳು ಕಮರಿ ಹೋಗಿವೆ
ಕನಸುಗಳು ಒಣಗಿ ಒರಟಾಗಿವೆ
ಬೆಂಬಿಡದ ಆಸೆಗಳು ಅರಳುವ
ಬೆರಳು ಮಾಡಿ ತೋರುವ ಆ ಅತಿಭೂಪ ಬೆಪ್ಪನಾದ.

ಸಾಲುಸಾಲು ಅಕ್ಷರರೂಪ ಪಡೆದ
ಮನ ಬೆಂಬಲ ಬೆಲೆ ಇಲ್ಲದ ಭಾವಗಳು
ಅಂತರಾಳದ ಗುಹೆಯಲಿ
ಜೋತುಬಿದ್ದಿವೆ. ಈ ದುರ್ಬಲ
ಆಸೆಗಳಿಗೆ ಈ ಸಬಲ ಮನವೇಕೆ
ಆಶ್ರಯತಾಣವಾಯ್ತು?



## ಬಾಳು ಮಜಲು

**ಮಧುಕರ್ ರಾವ್,** ಮೈಸೂರು.

ಭ್ರಮನಿರಸನದ ಒಂಟಿ ಜೀವನ ಸಾಕೆಂದಿದೆ,

ಬ್ರಹ್ಮ ಬರೆದ ಬ್ರಹ್ಮಚಾರಿಯ ಘಟ್ಟ ಕೊನೆಗೊಂಡಿದೆ,
ಅಪ್ಪ ಅಮ್ಮನ ಆಸೆ ಈಡೇರಲಿದೆ,
ಬಯಸಿದ್ದು ಸಿಗಲು ಯೋಗ ಬೇಕಿದೆ,
ಶಾಸ್ತ್ರಕ್ಕೆ ಗಣಗಳು ಕೂಡಿದಂತಿದೆ,
ಅಪೇಕ್ಷೆ ಯೋ ಉತ್ಪ್ರೇಕ್ಷೆಯೂ ಒಪ್ಪಿಗೆಯಾಗಿದೆ,
ಶಾಸ್ತ್ರಿಗಳು ಬರೆದ ಲಗ್ನ, ಭವಿಷ್ಯ ನಿಶ್ಚಿತವಾಗಿದೆ,
ಪಾಪ-ಪುಣ್ಯದ ಮೂಹೂರ್ತದ ದಿನ ನಿಗದಿಯಾಗಿದೆ,
ಜೀವನದ ಅನುಬಂಧ ಕನಸಿದೆ,
ಮದುವೆಯ ಸಂಭಂದದ ಮೇಳೈಸಿದೆ,
ಹಗಲಲ್ಲಿ ಅರುಂಧತಿ ನಕ್ಷತ್ರವ ತೋರಿಸಿದೆ,
ಕಾಶಿಯಾತ್ರೆಯ ನಾಟಕವಾಡಿದೆ,
ನಾಳೆಗಳು ನನ್ನವಳ ನಗುವಲ್ಲಿದೆ,
ಆಗುಹೋಗುಗಳ ನಡುವೆ ಬದುಕಲ್ಲಿದೆ,
ಭವಬಂಧನದ ಬಾಳು ಬೆಸುಗೆಯಲ್ಲಿದೆ,
ಹೊಂದಿದರೆ ಸಂಸಾರ ಹೊದಿಕೆಯಲ್ಲಿದೆ,
ಒಡೆದರೆ ಜೀವನದ ಕೊನೆ ಮಡಿಕೆಯಲ್ಲಿದೆ,
ಚಿಂತಕರಾದರೆ ಮೌನ ಮಾತಲ್ಲಿದೆ,
ತತ್ವಜ್ಞಾನದ ಅನುಯಾಯಿಯಾಗುವ ಹಾಗಿದೆ.
ಜೀವನ ಮಜಲಿನ ರಂಗಸ್ಥಳವಾಗಿದೆ.
ಇಲ್ಲಿರುವುದು ಸುಮ್ಮನೆ ಅಲ್ಲಿದೆ ನಮ್ಮನೆ ಎಂದಿದೆ.



## ನಾ ಕಂಡಂತೆ ಅಷ್ಟ ದಿಗ್ಗಜಗಳು

**ಸ್ವರಾ,** ಮೈಸೂರು.

ಕನ್ನಡದ ಸಾಹಿತ್ಯದೊಳು ಜ್ಞಾನ ಪೀಠಕೆ
ಮನ್ನಣೆಯು ದೊರಕಿಹುದು ಎಂಟು ಮಹನೀಯರಿಗೆ!

ಜ್ಞಾನಪೀಠವ ಪಡೆದ ಕನ್ನಡದ ಮೊದಲಿಗರು
ಜ್ಞಾನಮಾರ್ಗದಿ ನಡೆದು ಜಗದ ಕವಿ ಎನಿಸಿಹರು!
ಜಗ ಜನರು ಮೆಚ್ಚಿದಾ ಶ್ರೀರಾಮ ಚರಿತೆಯದು
ನಗವು ಕನ್ನಡಕಿದು *ಕುವೆಂಪು* ರಾಮಾಯಣವು!!

ನಾಕು ತಂತಿಯ ಮೀಟಿ ರಾಷ್ಟ್ರಕವಿಯೆನಿಸಿಹರು
ನಾಕವನು ಧರೆಗಿಳಿಸಿ *ದ.ರಾ.ಬೇಂದ್ರೆ* ಯವರು!
*ಶಿವರಾಮ ಕಾರಂತ* ಕಡಲತಡಿ ಭಾರ್ಗವರು
ಅವರ ಚಿತ್ತಕೆ ಬಂದ ಮೂಕಜ್ಜಿ ಕನಸುಗಳು!!

ಚಿಕ್ಕವೀರ ರಾಜೇಂದ್ರ ಚರಿತೆಯನು ಬರೆದರು
ಚೊಕ್ಕದಲಿ ಮಾಸ್ತಿ *ವೆಂಕಟೇಶಯ್ಯಂಗಾರ್ರು*!!
ಭಾರತದ ಸಿಂಧುರಶ್ಮಿಗೆ ದೊರೆತ ಪ್ರಶಸ್ತಿಯು
ಭಾರತೀಯರ ಹಿರಿಮೆ *ಗೋಕಾಕ* ರ ಕೃತಿಯು!!

ಅಸಾಮಾನ್ಯ ಸಾಧನೆಯ ಸಮಗ್ರ ಸಾಹಿತ್ಯ
ಹೊಸ ಅಲೆಯ ಯೆಬ್ಬಿಸಿದ ಸಂಸ್ಕಾರ ಸಾಂಗತ್ಯ!!
ಕ್ರಾಂತಿ ಕವಿ ಬಿರುದಾಂಕಿತ ಪ್ರಶಸ್ತಿ ವಿಜೇತ
ಶಾಂತ ಮಂದಸ್ಮಿತರು ಕರುನಾಡಿನ *ಅನಂತ*!!

ಅಭಿನಯವು ನಾಟಕದಿ ಚಲನಚಿತ್ರಗಳಲ್ಲಿ
ಅಭಿಜ್ಞಾನಿಯಾಗಿಹರು *ಕಾರ್ನಾಡ ಗಿರೀಶರು*!!
ಅಷ್ಟಮ ಪ್ರಶಸ್ತಿಯನು ಪಡೆದ *ಕಂಬಾರ*
ಸೃಷ್ಟಿಯಾಯಿತು ಎಂಟು ಸನ್ಮಾನಗಳ ಹಾರ

ಚೆನ್ನುಡಿಯ ಕನ್ನಡವು ಉಸಿರಾಗಿರುತಲೆಮಗೆ



# ಉತ್ತರಾಯಣದ ಸಂಕ್ರಮಣ

ಮಧುಕರ್ ರಾವ್

ಮಕರ ರಾಶಿ ಪ್ರವೇಶದ ಉತ್ತರಾಯಣ,

ಭೀಷ್ಮಾಚಾರ್ಯರು ಶರಶಯ್ಯೆಯಲ್ಲಿ ಕಾದ ಉತ್ತರಾಯಣ,
ಸ್ವರ್ಗ ದ ಬಾಗಿಲು ತೆರೆಯುವ ಉತ್ತರಾಯಣ,
ಶ್ರೀಕೃಷ್ಣನು ಹೇಳಿದ ಅಯನದಲ್ಲಿ ಶ್ರೇಷ್ಠ ಉತ್ತರಾಯಣ,
ಶಿವ ಮತ್ತು ಪಾರ್ವತಿಯರು ವಿವಾಹವಾಗಿದ್ದು ಉತ್ತರಾಯಣ,
ಬ್ರಹ್ಮದೇವ ಈ ಜಗತ್ತಿನ ಸೃಷ್ಟಿಯನ್ನು ಪ್ರಾರಂಭಿಸಿದ್ದು ಉತ್ತರಾಯಣ,
ಗೌತಮರು ಇಂದ್ರನಿಗೆ ಶಾಪ ವಿಮೋಚನೆ ಮಾಡಿದ್ದು ಉತ್ತರಾಯಣ,
ನಾರಾಯಣನು ವರಾಹಅವತಾರದಲಿ ಭೂಮಿಯ ಪಾದಸ್ಪರ್ಶಮಾಡಿದ್ದು ಉತ್ತರಾಯಣ,
ಸಮುದ್ರಮಂಥನ ಸಮಯದಲ್ಲಿ ಮಹಾಲಕ್ಷ್ಮಿ ಅವತರಿಸಿದ್ದು ಉತ್ತರಾಯಣ,
ಋಷಿಮುನಿಗಳು ತಪಸ್ಸಿಗೆ ಆಯ್ಕೆ ಮಾಡಿಕೊಂಡಿದ್ದು ಉತ್ತರಾಯಣ,
ಶುಭ ಕಾರ್ಯಗಳಿಗೆ ಪ್ರಶಸ್ತ ಉತ್ತರಾಯಣ,
ಪುಣ್ಯತೀರ್ಥದ ನದಿ ಸಂಗಮದ ಪವಿತ್ರ ಸ್ನಾನ ಶ್ರೇಷ್ಟ ಉತ್ತರಾಯಣ,

ಶರೀರದ ಸರ್ವರೋಗ ನಿವಾರಿಸುವ ಪುಣ್ಯ ಸ್ನಾನದ ಉತ್ತರಾಯಣ,

ದೇವಋಷಿ-ಪಿತೃ ತರ್ಪಣಕ್ಕೆ ವಿಶೇಷ ಮಹತ್ವದ ಉತ್ತರಾಯಣ,
ನಮ್ಮ ಹಿಂದೂ ಹಬ್ಬಗಳ ಶುಭಾರಂಭ ಉತ್ತರಾಯಣ,

ಸೂರ್ಯ ಪರಿಭ್ರಮಣೆಯ ಸಂಕ್ರಮಣ,
ವಿಶಿಷ್ಟ ಉಲ್ಲಾಸದಿಂದ ಕೂಡಿದ ಹಬ್ಬ ಸಂಕ್ರಮಣ,
ಎಳ್ಳಿನ ಕಹಿ ಬೆಲ್ಲದ ಸಿಹಿ ಜೀವನದ ಪರಿ ಹಂಚಿ ಬಾಳುವ ಸಂಕ್ರಮಣ,
ದ್ವೇಷ ಅಸೂಹೆ ಶತೃತ್ವ ಮರೆತು ಬದುಕುಲು ಪ್ರತಿಜ್ಞೆ ಮಾಡುವ ಸಂಕ್ರಮಣ,
ಸೂರ್ಯ ತನ್ನ ದಿಕ್ಕನ್ನು ಬದಲಾಯಿಸುವ ಸಂಕ್ರಮಣ,
ರೈತರಿಗೆ ಸುಗ್ಗಿ ಹಬ್ಬ ಹಿಗ್ಗುವ ಹಬ್ಬ ಸಂಕ್ರಮಣ,
ಎಳ್ಳು ಬೆಲ್ಲ ತಿಂದು ಒಳ್ಳೆ ಮಾತು ಮತ್ತು ಆಲೋಚನೆ ಮಾಡುವ ಮುನ್ನುಡಿ ಸಂಕ್ರಮಣ.

**ಪ್ರಕಾಶಕರು:**
ಬೃಂದಾವನ ಕನ್ನಡ ಸಂಘ
501(3)(c) ಪಡೆದ ಚಾರಿಟಿ ಸಂಸ್ಥೆ
Karnataka Cultural Organization (KCO) Brindavana
New Jersy, USA

www.Brindavana.org

© 2021 All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ**
ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಗೆ ಭೇಟಿ ಕೊಟ್ಟು, ನಿಮ್ಮ ವಿವರಗಳನ್ನು ನೀಡಿ, ಸದಸ್ಯತ್ವ ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org



# ದಿಂಡಿನ ಪದಾರ್ಥ

ಮಂಗಳಾ

## ಬಾಳೆದಿಂಡಿನ ಸಾಸಿವೆ

**ಬೇಕಾಗುವ ಸಾಮಗ್ರಿಗಳು**

ಬಾಳೆದಿಂಡು - 4 ಕಪ್
ಮೊಸರು - 2 ಕಪ್
ತೆಂಗಿನ ತುರಿ - 1/2 ಕಪ್
ಸಾಸಿವೆ - 1 ಚಮಚ
ಕೆಂಪು ಒಣ ಮೆಣಸಿನಕಾಯಿ - 4

ಒಗ್ಗರಣೆಗೆ

ತೆಂಗಿನ ಎಣ್ಣೆ - 2 ಚಮಚ
ಉದ್ದಿನಬೇಳೆ - 1 ಚಮಚ
ಸಾಸಿವೆ - 1 / 2 ಚಮಚ
ಒಂದು ಎಸಳು ಕರಿಬೇವಿನ ಸೊಪ್ಪು
ಒಣಮೆಣಸಿನಕಾಯಿ - 2

**ಮಾಡುವ ವಿಧಾನ**

ಬಾಳೆದಿಂಡಿನ ನಾರನ್ನು ತೆಗೆದು ಚೆನ್ನಾಗಿ ತೊಳೆದು ಸಣ್ಣದಾಗಿ ಹೆಚ್ಚಿಕೊಳ್ಳಬೇಕು . ನಂತರ ಒಂದು ಕಪ್ ಮೊಸರಿಗೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಬಾಳೆದಿಂಡಿನ ತುಂಡುಗಳನ್ನು ಅದರಲ್ಲಿ ನೆನೆಸಬೇಕು.

ತೆಂಗಿನಕಾಯಿಯ ತುರಿ, ಸಾಸಿವೆ ಮತ್ತು ಮೆಣಸಿನಕಾಯಿಗಳನ್ನು ರುಬ್ಬಿ ಮೊಸರು ಮತ್ತು ಬಾಳೆದಿಂಡಿನ ಮಿಶ್ರಣಕ್ಕೆ ಸೇರಿಸಬೇಕು . (ನಿಮಗಿಷ್ಟವಾದರೆ ಹಸಿರು ಮೆಣಸಿನಕಾಯನ್ನು ಉಪಯೋಗಿಸಬಹುದು ). ನಂತರ ಇನ್ನೊಮ್ಮೆ ಉಳಿದ ಒಂದು ಕಪ್ ಮೊಸರು ಸೇರಿಸಿ.ತೆಂಗಿನ ಎಣ್ಣೆಯನ್ನು ಕಾಯಿಸಿ ಸಾಸಿವೆ , ಉದ್ದಿನಬೇಳೆ , ಕರಿಬೇವು ಮತ್ತು ಮೆಣಸಿನಕಾಯಿಯ ಒಗ್ಗರಣೆಯನ್ನು ಕೊಡಬೇಕು.

*ಈಗ ರುಚಿಯಾದ ಬಾಳೆದಿಂಡಿನ ಸಾಸಿವೆ ಸವಿಯಲು ಸಿದ್ಧ .*





## ಬಾಳೆದಿಂಡಿನ ಪಲ್ಯ

**ಬೇಕಾಗುವ ಸಾಮಗ್ರಿಗಳು**

4 ಕಪ್ ಸಣ್ಣದಾಗಿ ಹೆಚ್ಚಿರುವ ಬಾಳೆದಿಂಡು.
1 ಕಪ್ ನೆನೆಸಿದ ಹೆಸರು ಬೇಳೆ .
1 ಚಮಚ ತೆಂಗಿನ ಎಣ್ಣೆ .
1 ಚಮಚ ಉದ್ದಿನ ಬೇಳೆ .
1 ಚಮಚ ಸಾಸಿವೆ .
4 ಕೆಂಪು ಒಣ ಮೆಣಸಿನಕಾಯಿಗಳು .
5 ಕರಿಬೇವಿನ ಎಲೆಗಳು.
1 ಚಿಟಿಕೆ ಅರಿಸಿನ .
ರುಚಿಗೆ ತಕ್ಕಷ್ಟು ಉಪ್ಪು .

**ಮಾಡುವ ವಿಧಾನ**

ಒಂದು ಕಡಾಯಿಯಲ್ಲಿ ತೆಂಗಿನ ಎಣ್ಣೆಯನ್ನು ಕಾಯಿಸಿ ಅದಕ್ಕೆ ಸಾಸಿವೆ , ಉದ್ದಿನಬೇಳೆ , ಕೆಂಪುಮೆಣಸಿನಕಾಯಿ ಮತ್ತು ಕರಿಬೇವನ್ನು ಹಾಕಬೇಕು ಸಾಸಿವೆ ಚಟಪಟಗುಟ್ಟಿದ ನಂತರ ಬಾಳೆದಿಂಡು, ಅರಿಸಿನ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಒಂದು ಕಪ್ ನೀರನ್ನು ಹಾಕಿ ಮುಚ್ಚಳವನ್ನು ಮುಚ್ಚಿ ಬೇಯಿಸಬೇಕು. ಬೆಂದ ನಂತರ ಬಾಳೆದಿಂಡಿನ ಪಲ್ಯ ತಯಾರು .
ನಂತರ ತೆಂಗಿನ ತುರಿಯಿಂದ ಅಲಂಕರಿಸಬಹುದು.

.



# ಮೊಸರು ಕೋಡುಬಳೆ

ಗೀತಾ ಭಟ್

## ಮೊಸರು/ಮೆದು ಕೋಡುಬಳೆ ರೆಸಿಪಿ

***ಬೇಕಾಗುವ ಪದಾರ್ಥಗಳು***

½ ಕಪ್ ಮೊಸರು
½ ಕಪ್ ನೀರು
1 ಟೀಸ್ಪೂನ್ ಜೀರಿಗೆ
ಪಿಂಚ್ ಹಿಂಗು
10 ಕರಿಬೇವಿನ ಎಲೆಗಳು (ಸಣ್ಣದಾಗಿ ಕತ್ತರಿಸಿದ್ದು )
2 ಟೇಬಲ್ ಸ್ಪೂನ್ ಕೊತ್ತೊಂಬರಿ ಸೊಪ್ಪು (ಸಣ್ಣದಾಗಿ ಕತ್ತರಿಸಿದ್ದು )
1 ಹಸಿಮೆಣಸಿನಕಾಯಿ ( ಸಣ್ಣದಾಗಿ ಕತ್ತರಿಸಿದ್ದು)
ಚಿಕ್ಕ ಗಾತ್ರದ ಸಣ್ಣದಾಗಿ ಕತ್ತರಿಸಿದ ಈರುಳ್ಳಿ ( ಒಪ್ಶನಲ್ )
1 ಟೀಸ್ಪೂನ್ ಎಣ್ಣೆ
1 ಕಪ್ ಅಕ್ಕಿಹಿಟ್ಟು ( ರೈಸ್ ಫ್ಲೋರ್ )
ರುಚಿಗೆ ತಕ್ಕಷ್ಟು ಉಪ್ಪು
ಕರಿಯಲು ಎಣ್ಣೆ

***ಮಾಡುವ ವಿಧಾನ***

1. ಅರ್ಧ ಕಪ್ ಮೊಸರನ್ನು ಅರ್ಧ ಕಪ್ ನೀರಿನೊಂದಿಗೆ ಮಿಕ್ಸ್ ಮಾಡಿ ಮಜ್ಜಿಗೆಯನ್ನು ತಯಾರಿಸಿಕೊಳ್ಳಬೇಕು.
2. ತಯಾರಾದ ಮಜ್ಜಿಗೆಯನ್ನು ದೊಡ್ಡ ಕಡಾಯಿಗೆ ಹಾಕಿ ಕುದಿಸಬೇಕು. ಇದು ಕುದಿಯುವಾಗ ಜೀರಿಗೆ, ಹಿಂಗು, ಚಿಕ್ಕದಾಗಿ ಕತ್ತರಿಸಿದ ಕೊತ್ತಂಬರಿ ಸೊಪ್ಪು, ಕರಿಬೇವಿನ ಸೊಪ್ಪು, ಮೆಣಸಿನಕಾಯಿ, ಚಿಕ್ಕದಾಗಿ ಹೆಚ್ಚಿದ ಈರುಳ್ಳಿ, 1 ಸ್ಪೂನ್ ಎಣ್ಣೆ ಮತ್ತು ರುಚಿಗೆ ತಕ್ಕಷ್ಟು ಉಪ್ಪನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಬೇಕು.
3. ಈ ಮಿಶ್ರಣಕ್ಕೆ 1 ಕಪ್ ಅಕ್ಕಿ ಹಿಟ್ಟನ್ನು ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು. ನಂತರ ಪಾತ್ರೆಯನ್ನು ಮುಚ್ಚಿ ಎರಡರಿಂದ ಮೂರು ನಿಮಿಷಗಳ ಕಾಲ ಸಣ್ಣ ಸಿಮ್ಮಿ ನಲ್ಲಿಟ್ಟು ಹಿಟ್ಟನ್ನು ಬೇಯಲು ಬಿಡಬೇಕು. ಹಿಟ್ಟು ಚೆನ್ನಾಗಿ ನೀರನ್ನು ಹೀರಿಕೊಂಡ ನಂತರ ದೊಡ್ಡ ಬಟ್ಟಲಿಗೆ ಹಾಕಿ ತಣಿಯಲು ಬಿಡಬೇಕು.
4. ಹಿಟ್ಟು ತಣಿದ ಮೇಲೆ ಅದನ್ನು ಮೃದುವಾಗಿ ಕಲೆಸಿಕೊಳ್ಳಬೇಕು. ನಂತರ ಸ್ವಲ್ಪ ಸ್ವಲ್ಪ ಹಿಟ್ಟನ್ನು ತೆಗೆದುಕೊಂಡು ಕೋಡುಬಳೆಯ ಆಕಾರಕ್ಕೆ ಮಾಡಿ ಬಿಸಿ ಎಣ್ಣೆಯಲ್ಲಿ ಹಾಕಿ ಚೆನ್ನದ ಕಂದು ಬಣ್ಣ ಬರುವವರೆಗೆ ಕರಿಯಬೇಕು (ಜಾಸ್ತಿ ಕೆಂಪಗೆ ಕರಿಯಬಾರದು )
5. ಈಗ ಮೊಸರು ಕೊಡುಬಳೆಯನ್ನು ಪುದೀನಾ ಚಟ್ನಿಯೊಂದಿಗೆ ಸರ್ವ್ ಮಾಡಬಹುದು.

## ಪುದಿನ ಚಟ್ನಿ ರೆಸಿಪಿ

***ಬೇಕಾಗುವ ಪದಾರ್ಥಗಳು***


1 ಕಪ್ ತೆಂಗಿನ ತುರಿ
1 ಟೇಬಲ್ ಸ್ಪೂನ್ ಹುರಿಗಡಲೆ
2 ರಿಂದ 3 ಹಸಿಮೆಣಸಿನಕಾಯಿ
ಒಂದು ಇಂಚು ಶುಂಠಿ
ಸಣ್ಣ ಗಾತ್ರದ ಹುಣಸೆಹಣ್ಣು
ಒಂದು ಹಿಡಿ ಪುದಿನ ಸೊಪ್ಪು
ರುಚಿಗೆ ತಕ್ಕಷ್ಟು ಉಪ್ಪು
ಅರ್ಧ ಕಪ್ ನೀರು

***ಮಾಡುವ ವಿಧಾನ***

ಮೇಲೆ ಹೇಳಿರುವ ಎಲ್ಲಾ ಪದಾರ್ಥಗಳನ್ನು ಒಂದು ಸಣ್ಣ ಮಿಕ್ಸಿ ಜಾರಿನಲ್ಲಿ ಹಾಕಿ ರುಬ್ಬಿಕೊಳ್ಳಬೇಕು. ಈಗ ನಿಮ್ಮ ಪುದಿನ ಚಟ್ನಿಯು ಮೊಸರು ಕೋಡುಬಳೆಯೊಂದಿಗೆ ಸವಿಯಲು ಸಿದ್ಧವಾಗಿದೆ.



# ಪುಟಾಣಿ—ಪ್ರಪಂಚ



# ಮಕ್ಕಳ ಕೈಯಲ್ಲಿ ಅರಳಿದ ಕಲೆ

ಸಿಂಹ

ಸಿಂಹಗಳು ಬೆಕ್ಕಿನ ಕುಟುಂಬಕ್ಕೆ ಸೇರಿದ ಪ್ರಾಣಿ
ಇದು ಮಾಂಸ ಹಾರಿ ಪ್ರಾಣಿ.
ಸಿಂಹಗಳ ಗುಂಪಿಗೆ ಹೊಸ ಪುರುಷ ಸಿಂಹ
ನಾಯಕನಾದರೆ ಅದರ ಹಿಂದಿನ ನಾಯಕನ
ಮರಿಗಳನ್ನೆಲ್ಲ ಸಾಯಿಸುವುದು ಸಹಜ.
ವಯಸ್ಕ ಸಿಂಹಗಳು ದಿನಕ್ಕೆ ಹದಿನಾಲ್ಕು
ಘಂಟೆಯವರೆಗೆ ನಿದ್ದೆಯನು ಮಾಡುತ್ತವೆ.



ಸಿಂಹ

ಕಾಡಿನ ರಾಜ ಘರ್ಜಿಸಿದರೆ ಸಾಕು ಮೈಯಲ್ಲಿ ನಡುಕ
ಹುಟ್ಟುತ್ತದೆ. ಸಿಂಹದ ಉಗುರುಗಳು ಮತ್ತು ಹಲ್ಲುಗಳಲ್ಲಿ
ತುಂಬಾ ಶಕ್ತಿಯಿದೆ. ಬೇಟೆಯಾಡಲು ಸಿಂಹ ತನ್ನ
ಉಗುರುಗಳನ್ನು ಬಳಕೆ ಮಾಡುತ್ತದೆ. 2020ರ ಜನಗಣತಿಯ
ಪ್ರಕಾರ ಸಿಂಹಗಳ ಸಂಖ್ಯೆಯಲ್ಲಿ ಏರಿಕೆ ಕಂಡು ಬಂದಿದ್ದು
ಭಾರತದಲ್ಲಿ ಸುಮಾರು 670ಕ್ಕೂ ಹೆಚ್ಚು ಸಿಂಹಗಳಿವೆ. ಸಿಂಹ
ಭೂಮಿ ಮೇಲಿನ ಅತ್ಯಂತ ಧೈರ್ಯಶಾಲಿ ಪ್ರಾಣಿ ಎಂದು
ಹೆಸರುವಾಸಿಯಾಗಿದೆ.

ಕಾಡಿನ ರಾಜ ಎಂದು ಕರೆಸಿಕೊಳ್ಳುವ ಸಿಂಹಗಳು
ಸಾಮಾನ್ಯವಾಗಿ ಗುಂಪು ಗುಂಪಾಗಿ ಜೀವಿಸುತ್ತವೆ.
ಸಾಮಾಜಿಕ ಜೀವನದ ಕಾರಣದಿಂದ ಹೆಚ್ಚಾಗಿ
ಜೊತೆಯಾಗಿ ಬದುಕಲು ಇಷ್ಟಪಡುತ್ತವೆ. ಸಿಂಹಗಳ
ಗುಂಪನ್ನು ಪ್ರೈಡ್ ಎಂದು ಕರೆಯಲಾಗುತ್ತದೆ. ಒಂದು
ಪ್ರೈಡನಲ್ಲಿ ಸುಮಾರು 15 ಸಿಂಹಗಳಿರುತ್ತವೆ.

ಆಧ್ಯಾ



ಸಿಂಹಗಳ ಪ್ರತಿ ಗುಂಪಿನಲ್ಲಿಯೂ ಗಂಡು ಹಾಗೂ
ಹೆಣ್ಣು ಸಿಂಹಗಳಿರುತ್ತವೆ. ಗಂಡು ಸಿಂಹವು ಗುಂಪನ್ನು
ಮುನ್ನಡೆಸಿದರೆ, ಹೆಣ್ಣು ಸಿಂಹಗಳು ತಮ್ಮ ಬಳಗಕ್ಕಾಗಿ
ಬೇಟೆಯಾಡುತ್ತವೆ. ಸಿಂಹ ಘರ್ಜನೆಯು ಸುಮಾರು 8
ಕಿ.ಮೀವರೆಗೂ ಕೇಳುತ್ತದೆ. ಸಿಂಹವು ಗಂಟೆಗೆ
50 ಮೈಲಿ ವೇಗದಲ್ಲಿ ಓಡಬಲ್ಲವು ಹಾಗೂ 36
ಅಡಿಗಳಷ್ಟು ಹಾರಬಲ್ಲವು.

ಒಂದು ಕಾಲದಲ್ಲಿ ಆಫ್ರಿಕಾ, ಏಷ್ಯಾ ಹಾಗೂ
ಯುರೋಪಿನ ಬಹುತೇಕ ಭಾಗಗಳಲ್ಲಿ ಸಿಂಹಗಳು
ದೊಡ್ಡ ಸಂಖ್ಯೆಯಲ್ಲಿ ಕಂಡುಬರುತ್ತಿದ್ದವು. ಆದರೆ ಅರಣ್ಯ
ನಾಶ, ಬೇಟೆ ಕಾರಣಗಳಿಂದ ಸಿಂಹಗಳ ಸಂಖ್ಯೆಯು
ಇಳಿಮುಖ ಕಂಡಿದೆ. ಆದ್ದರಿಂದ ಜೀವಿಗಳನ್ನು ಮತ್ತು ಕಾಡಿನ
ಪ್ರಾಣಿಗಳನ್ನು ಉಳಿಸುವುದು ನಮ್ಮೆಲ್ಲರ
ಜವಾಬ್ದಾರಿಯಾಗಿದೆ.

# ಮಕ್ಕಳ ಕೈಯಲ್ಲಿ ಅರಳಿದ ಕಲೆ




ದಿಶಿತಾ

# ಮಕ್ಕಳ ಕೈಯಲ್ಲಿ ಅರಳಿದ ಕಲೆ






**ಸಾರ್ಥಕ್ ರಾವ್**



ಮಕರ ಸಂಕ್ರಾಂತಿ

ಜನವರಿ ಹದಿನಾಲ್ಕರಂದು ನಾವು ಸಂಕ್ರಾಂತಿ ಆಚರಿಸುತ್ತೇವೆ. ನಾವು ಸಸ್ಯಗಳನ್ನು ಕೊಯ್ಲು ಮಾಡುವ ದಿವಸ. ನಾವು ಸಂಕ್ರಾಂತಿಯ ದಿವಸ ಎಳ್ಳು ಬೆಲ್ಲ, ಸಾಬುದಾನ ವಡೆ, ಚಿಕ್ಕಿ, ಪೊಂಗಲ್, ಮತ್ತೆ ಲಡ್ಡು ತಿನ್ನುತ್ತೇವೆ. ಸಂಕ್ರಾಂತಿಯ ದಿನ ನಾವು ಅಯ್ಯಪ್ಪ ಸ್ವಾಮಿ ಮತ್ತೆ ಸೂರ್ಯ ದೇವರಿಗೆ ಪ್ರಾರ್ಥನೆ ಮಾಡುತ್ತೇವೆ. ಸಂಕ್ರಾಂತಿಯ ದಿವಸ ನಾವು ಗಾಳಿಪಟವನ್ನೂ ಹಾರಿಸುತ್ತೇವೆ. ಎಲ್ಲರಿಗೂ ಸಂಕ್ರಾಂತಿಯ ಶುಭಾಶಯಗಳು.

- ಸಾರ್ಥಕ್ ರಾವ್

# ಮಕ್ಕಳ ಕೈಯಲ್ಲಿ ಅರಳಿದ ಕಲೆ





ಹಿತಾರ್ಥ್ ಚಂದ್ರ





ಪ್ರಖೇತ್






# ಗಣರಾಜ್ಯೋತ್ಸವ!

ನಿಮಗೆ ಗಣರಾಜ್ಯೋತ್ಸವದ ಶುಭಾಶಯಗಳು!

ಗಣರಾಜ್ಯೋತ್ಸವವು ಭಾರತದ ಜನರ ಜೀವನವನ್ನು ಬದಲಿಸಿದ ಒಂದು ದೊಡ್ಡ ಐತಿಹಾಸಿಕ ಘಟನೆಯಾಗಿದೆ. ಈ ಲೇಖನದಲ್ಲಿ, ಗಣರಾಜ್ಯೋತ್ಸವವನ್ನು ಹೇಗೆ ಹಬ್ಬವನ್ನಾಗಿ ಮಾಡಲಾಯಿತು, ಜನರು ಇಂದಿಗೂ ಅದನ್ನು ಹೇಗೆ ಆಚರಿಸುತ್ತಾರೆ ಮತ್ತು ಗಣರಾಜ್ಯೋತ್ಸವದ ಬಗ್ಗೆ ಕೆಲವು ಸಂಗತಿಗಳನ್ನು ನಿಮಗೆ ಹೇಳುತ್ತೇನೆ.

ಭಾರತವು 15 ಆಗಸ್ಟ್ 1947 ರಂದು ತನ್ನ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಆಗ ಇದು ಇನ್ನೂ ಲಿಖಿತ ಸಂವಿಧಾನವಾಗಿರಲಿಲ್ಲ. ಆಗ ಡಾ|| ಬಿ. ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಕರಡು ಸಮಿತಿ ನೇಮಕಾತಿ ಮಾಡಲಾಯಿತು. ಆ ಸಮಿತಿ ತಯಾರಿಸಿದ ಕರಡು ಪ್ರತಿಯನ್ನು ಸದನದಲ್ಲಿ ಮಂಡಿಸಲಾಯಿತು. ಅನೇಕ ಪರಿಶೀಲನೆ ಹಾಗೂ ತಿದ್ದುಪಡಿಗಳ ನಂತರ ಅಸೆಂಬ್ಲಿಯ 308 ಸದಸ್ಯರು, 24 ಜನವರಿ 1950 ರಂದು ದಾಖಲೆಯ ಎರಡು ಕೈಬರಹದ ಪ್ರತಿಗಳಿಗೆ (ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ತಲಾ ಒಂದು) ಸಹಿ ಮಾಡಿದರು. ಎರಡು ದಿನಗಳ ನಂತರ, 26 ಜನವರಿಯನ್ನು ಭಾರತದ ಗಣರಾಜ್ಯೋತ್ಸವ ಎಂದು ಘೋಷಿಸಲಾಯಿತು.

ಜನರು ಗಣರಾಜ್ಯೋತ್ಸವವನ್ನು ಹೆಮ್ಮೆ ಮತ್ತು ಗೌರವದಿಂದ ಆಚರಿಸುತ್ತಾರೆ. ಇದನ್ನು ರಾಷ್ಟ್ರೀಯ ರಜಾದಿನವೆಂದು ಘೋಷಿಸಲಾಗಿದೆ ಮತ್ತು ಭಾರತದಾದ್ಯಂತ ಅನೇಕ ದೊಡ್ಡ ಮೆರವಣಿಗೆಗಳನ್ನು ನಡೆಸಲಾಗುತ್ತದೆ. ರಾಜಪಥದಲ್ಲಿ ಅಂದು ಪ್ರಧಾನಿಯವರು



ಧ್ವಜಾರೋಹಣ ಮಾಡುತ್ತಾರೆ. ಅಂದು ಭಾರತದ ಪ್ರಧಾನಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ವೀರ ಯೋಧರಿಗೆ ಇಂಡಿಯಾ ಗೇಟ್ ಬಳಿ ಪುಷ್ಪಾರ್ಪಣೆ ಮಾಡುತ್ತಾರೆ. ಜನವರಿ 25 ರಂದು ಪದ್ಮ ಪ್ರಶಸ್ತಿಗಳ ಜೊತೆಗೆ ಅತ್ಯುತ್ತಮ ನಾಗರಿಕರಿಗೆ ಭಾರತ ರತ್ನವನ್ನು ನೀಡಲಾಗುತ್ತದೆ. ಅಂದು ನೀಡುವ ಪ್ರಮುಖ ಪ್ರಶಸ್ತಿಗಳ ಪಟ್ಟಿ ಕೆಳಗಿನಂತೆ ಇವೆ

1. ಭಾರತ ರತ್ನ
2. ಪದ್ಮ ವಿಭೂಷಣ
3. ಪದ್ಮ ಭೂಷಣ
4. ಪದ್ಮ ಶ್ರೀ

ಇವುಗಳು ಭಾರತದ ಶ್ರೇಷ್ಠ ಪ್ರಶಸ್ತಿಗಳಾಗಿವೆ, ಆದ್ದರಿಂದ ಪ್ರತಿಯೊಬ್ಬರೂ ಅವುಗಳನ್ನು ಬಹಳವಾಗಿ ಗೌರವಿಸುತ್ತಾರೆ.

ಗಣರಾಜ್ಯೋತ್ಸವದ ಬಗ್ಗೆ ನನ್ನ ಅಭಿಪ್ರಾಯವೆಂದರೆ ಇದು ನಮ್ಮ ದೇಶವನ್ನು ಹೆಮ್ಮೆಯಿಂದ ಗೌರವಿಸುತ್ತಾರೆ. ಈ ಘಟನೆಯು ಇಡೀ ಭಾರತದ ಹಾದಿಯನ್ನು ಬದಲಾಯಿಸಿತು ಮತ್ತು ಅದು ನಮ್ಮ ದೇಶ ಗಣರಾಜ್ಯವಾಗುವಂತೆ ಮಾಡಿತು.


ಈ ಲೇಖನವನ್ನು ಓದಿದ್ದಕ್ಕಾಗಿ ಧನ್ಯವಾದಗಳು ಹಾಗು ಮತ್ತೊಮ್ಮೆ ನಿಮಗೆ ಗಣರಾಜ್ಯೋತ್ಸವದ ಶುಭಾಶಯಗಳು.

ಜೈ ಹಿಂದ್!





**ವಾಗ್ಮಿ ಕುಲಕರ್ಣಿ**






La Jolla














Newport Beach



# ಹಿಂದಿನ ಸಂಚಿಕೆಗಳು





ಅಕ್ಟೋಬರ್ - ೨೦೨೧




ಡಿಸೆಂಬರ್ ೨೦೨೧




ಜೂನ್ - ೨೦೨೧




ಆಗಸ್ಟ್ - ೨೦೨೧




ಫೆಬ್ರವರಿ 2021




ಏಪ್ರಿಲ್ - ೨೦೨೧